ಸಂಚಯ

ಸಾಂಸ್ಕೃತಿಕ ಪತ್ರಿಕೆ



ಮಾಹಿತಿ ತಂತ್ರಜ್ಞಾನ
ಮತ್ತು ಕನ್ನಡ ಸಂಸ್ಕೃತಿ

ಸಂಚಿಕೆ
೫೪

ಸಂಚಯ

ಸಾಂಸ್ಕೃತಿಕ ಪತ್ರಿಕೆ
ತ್ರೈಮಾಸಿಕ

ಸಂಪುಟ : ೧೧

ಸಂಚಿಕೆ ೧ (೫೪)

ಸೆಪ್ಟೆಂಬರ್-೨೦೦೧

ಸಂಪಾದಕ

ಡಿ. ವಿ. ಪ್ರಹ್ಲಾದ್

ಹಿಂದಣ ಅನಂತವನು
ಮುಂದಣ ಅನಂತವನು
ಒಂದು ದಿನ ಒಳಗೊಂಡಿತ್ತು ನೋಡ
-ಅಲ್ಲಮಪ್ರಭು

ಚಂದಾ ವಿವರ

ಬಿಡಿ ಪ್ರತಿ : ರೂ ೨೦/-
ವಾರ್ಷಿಕ ಚಂದಾ : ರೂ ೮೦/-
ಎರಡು ವರ್ಷಕ್ಕೆ : ರೂ ೧೬೦/-
ಐದು ವರ್ಷಕ್ಕೆ : ರೂ ೪೦೦/-



ಎಂ.ಎಫ್. ಹುಸೇನರ ರೇಖಾಚಿತ್ರ
ಸರಸ್ವತಿ

ಈ ಸಂಚಿಕೆಯ ಮುಖಪುಟ ಮತ್ತು
ರೇಖಾಚಿತ್ರಗಳು : *ಎಸ್. ಖುತ*
ಎಲೆಯ ಚಿತ್ರಗಳು : *ಸುಮಂಗಲಾ ಬಾದರದಿನ್ನಿ*

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ
೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ
ಬನಶಂಕರಿ, ಬೆಂಗಳೂರು-೫೬೦ ೦೮೫
ಫೋನ್ : ೦೮೦-೬೭೯೧೯೨೫

ಪ್ರತಿಕ್ರಿಯೆ

ಸಂಚಯ ನಮ್ಮ ಇಂದಿನ ಬಹುಮುಖ್ಯ ಕಿರುಪತ್ರಿಕೆಗಳಲ್ಲೊಂದು ಎಂಬುದು ನಿರ್ವಿವಾದ.

-ರಾಮಚಂದ್ರ ದೇವ, ಕಲ್ಮಡಕ ದ.ಕ.

ಬಹಳ ಸಮಯದ ನಂತರ ಸಂಚಯ ನೋಡಿದೆ, ತುಂಬಾ ಸಂತೋಷವಾಯಿತು. ಈ ದೆಹಲಿಗೆ ಕನ್ನಡ ತಲುಪುವುದು ಕಷ್ಟವೇ ಸರಿ.

-ಪುರುಷೋತ್ತಮ ಬಿಳಿಮಲೆ, ದೆಹಲಿ

ಪದಗಳೊಂದೆ ನನ್ನದೆನ್ನುವ ಒಡವೆ......ಪದ ಸಂಪತ್ತು ಮಾತ್ರ ಹಂಚುವೆ ಜನಗಳಿಗೆ ಸಂತ ತುಕಾರಾಮರ ಈ ಮಾತು ಸಂಚಯದ ಮಾತೂ ಆಗಿದೆಯಲ್ಲವೆ? ಅದಕ್ಕೇ ಸಂಚಯ ತುಂಬಾ ಚೆನ್ನಾಗಿ ಬರುತ್ತಿದೆ ಎಂದುಕೊಳ್ಳುತ್ತೇನೆ.

-ಸಿ. ವಿ. ಶೇಷಾದ್ರಿ, ಕೊರಟಗೆರೆ

'ಸಂಚಯ' ಇಂದು ವಿಶಿಷ್ಟವಾಗಿ ಭಿನ್ನವಾಗಿ ಬಂದರೆ ಉತ್ತಮ. ಯಾಕೆಂದರೆ ಕನ್ನಡ ಬರವಣಿಗೆ ಹೊಸ ತಿರುವಿನ ಹಂತದಲ್ಲಿದೆ. ಲಯ, ಧಾಟಿ ಬದಲಾಯಿಸಿಕೊಳ್ಳಲು ಗುದಮುರಿಗೆ ಹಾಕುತ್ತಿದೆ. ಇಂತಹ ಹೊಳವುಗಳನ್ನು ಸಂಚಯ ನೀಡಬೇಕು. ಆಗಲೇ ಅದಕ್ಕೊಂದು ಸಾಂಸ್ಕೃತಿಕ ಹರವು ದೊರಕುವುದು.

-ಶಂಕರ ಕಟಗಿ, ಬಿಜಾಪುರ

ಸಂಚಯ ಈಗ ತಾನೆ ಬಂದಿದೆ, ಹೊಸ ದನಿಗಳನ್ನು ವಿಶ್ವಾಸದಿಂದ ಕಾಣುವ ಸಂಚಯದ ಬಗೆಗೆ ಮೊದಲಿನಿಂದಲೂ ನನಗೆ ಗೌರವವಿದೆ. ಯಾವ ವ್ಯಕ್ತಿ, ಪಂಥ, ಸವಕಲು ಸಿದ್ಧಾಂತಗಳ ಸ್ಪೀಕರ್ ಆಗದೆ ಪ್ರಾಮಾಣಿಕವಾಗಿ ಸಾಂಸ್ಕೃತಿಕ ಕಾಳಜಿಗಳಿಗೆ ಅವಕಾಶ ಮಾಡಿಕೊಡಬೇಕಾದ ಈ ಹೊತ್ತಿನ ಅಗತ್ಯವನ್ನು ಸಂಚಯ ಸರಿಯಾಗಿಯೇ ನಿರ್ವಹಿಸುತ್ತಿದೆ.

-ವಿಕ್ರಮ ವಿಸಾಜಿ, ರಾಯಚೂರು

ಚಂದಾದಾರರಲ್ಲಿ ಒಂದು ಮಾತು

ಎಂ.ಓ. ಮೂಲಕ ಚಂದಾ ಕಳುಹಿಸುವವರು ಕೌಂಟರ್ ಫಾಯಿಲ್‌ನಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ, ಹೊರ ಊರಿನ ಚೆಕ್ ಕಳುಹಿಸುವರು ರೂ10/- ಹೆಚ್ಚಿಗೆ ಕಳುಹಿಸಿ. 'ಸಂಚಯ' ಎನ್ನುವ ಹೆಸರಿಗೇ ನಿಮ್ಮ ಚೆಕ್ ಡೀಡಿ ಕಳುಹಿಸಬಹುದು.

ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಒಂದು ಕಾರ್ಡು ಹಾಕಿ. ನಮ್ಮ ಸಮಯ ಶ್ರಮ ಸುರಿದು ರೂಪಿಸಿದ ಪತ್ರಿಕೆಯ ಪ್ರತಿಗಳು ವ್ಯರ್ಥವಾಪಸ್ಸಾಗುವುದು, ಬೇಡದ ಜಾಗಗಳಲ್ಲಿ ಕೊಳೆಯುವುದೂ ಬೇಡ.

ಪುಸ್ತಕ ವಿಮರ್ಶೆ / ಪರಿಚಯಕ್ಕೆ ಸಾಧ್ಯವಾದಲ್ಲಿ ಎರಡು ಪ್ರತಿ ಕಳುಹಿಸಿ.

ನಿಮ್ಮ ಸ್ನೇಹಿತರನ್ನು ಗೆಳೆಯರನ್ನು ಆಸಕ್ತಿ ಇರುವವರನ್ನು ಸಂಚಯಕ್ಕೆ ಚಂದಾದಾರನ್ನಾಗಿಸಿ 'ಸಂಚಯ ಸ್ನೇಹವಲಯ' ವಿಸ್ತರಿಸಿ.

ನಿಮ್ಮ ಬರಹಗಳು ಮತ್ತು ಸಂಚಯ ಕುರಿತ ಅನಿಸಿಕೆ ಅಭಿಪ್ರಾಯಗಳಿಗೆ ಸ್ವಾಗತವಿದೆ.

ಈ ಸಂಚಯದಲ್ಲಿ

ಹೂಳಿದದ್ದು ತಾರೆ
ಉಳಿದದ್ದು ಆಕಾಶ!

ಪ್ರಿಯ ಓದುಗರೆ,

ಅವತ್ತು 87ರ ಜೂನ್ 7ನೇ ತಾರೀಖು ಸಂಚಯದ ಮೊದಲ ಸಂಚಿಕೆ ರೂಪಿಸಿ, ಹದಿನೈದು ಫೋಟೋ (ಜರಾಕ್ಸ್) ಪ್ರತಿಗಳನ್ನ ಒಂದು ಪುಟ್ಟ ಕಾರ್ಬನ್‌ಪೇಪರಿನ ಖಾಲಿ ಬಾಕ್ಸಿನೊಳಕ್ಕೆ ಇಟ್ಟು ಬಿಡುಗಡೆ ಮಾಡಲಾಗಿತ್ತು. ಆಗ ಕಾಲೇಜು ಹುಡುಗರಾಗಿದ್ದ ನಮಗ್ಯಾರಿಗೂ ಇದು ಇಷ್ಟುದ್ದ ಬೆಳೆದು, ಇದರ ನೆಪದಲ್ಲಿ ನಾವುಗಳು ಇನ್ನಷ್ಟು ಜೀವಂತಿಕೆ-ಕನಸುಗಳನ್ನ ಹೊತ್ತು ಹೀಗೆ ಸಾಗಬಹುದೆಂಬ ಕಲ್ಪನೆಯೂ ಇರಲಿಲ್ಲ. ಈವರೆಗೆ ಸಂಚಯದ ಐವತ್ಮೂರು ಸಂಚಿಕೆಗಳು ಹೊರಬಂದಿವೆ. ತನ್ನದೇ ಆದ ಪುಟ್ಟ ವಲಯದಲ್ಲಿ ಎಲ್ಲ ಇತಿಮಿತಿಗಳ ಮಧ್ಯೆ ಅದು ಜೀವಂತವಾಗಿ ಸ್ಪಂದಿಸಿದೆ. ಆದರೂ ಪ್ರತಿ ಸಂಚಿಕೆಯನ್ನ ಹೊರತರುವಾಗಿನ ಚಡಪಡಿಕೆ ಆತಂಕ ಆ ಮೊದಲ ಸಂಚಿಕೆಯದ್ದರಷ್ಟೇ. ಅದಕ್ಕೇ ಆ ಸಂಚಿಕೆಯ ನೆನಪಾಯ್ತು.

ಜಾಗತೀಕರಣವೆಂಬ ತೆರೆದಿಟ್ಟ ದಿಡ್ಡಿ ಬಾಗಿಲಿನಿಂದ ಯಾವ ಸಂಸ್ಕೃತಿಯೂ ಹೊರತಾಗಿ ತನ್ನೊಳಗೆ ತಾನು ಮುಳುಗಿಕೊಂಡು ಇವತ್ತು ಇರುವುದು ಸಾಧ್ಯವಿಲ್ಲ. ಜಗತ್ತು ಅಂಗೈಯೊಳಗಿನ ನೆಲ್ಲಿಕಾಯಿಯಾಗಿದೆ. ಜಾಗತೀಕರಣದ ಫಲವಾದ ಈ ಮಾಹಿತಿ ತಂತ್ರಜ್ಞಾನದ ಕಾರಣ ನಮ್ಮ ಸಂಸ್ಕೃತಿಯ ಮೇಲೆ ಆಗುವ ಪರಿಣಾಮಗಳೇನು ಎನ್ನುವ ವಿವಿಧ ಅಭಿಪ್ರಾಯಗಳನ್ನ ಈ ಸಂಚಯದಲ್ಲಿ ಚರ್ಚಿಸಲಾಗಿದೆ.

ಎಂದಿನ ಹಾಗೆ ಸಾಹಿತ್ಯ ಸ್ಪರ್ಧೆಗೆ ಎಲ್ಲ ಮೂಲೆಗಳಿಂದ ಬಂದಿರುವ ಪ್ರತಿಕ್ರಿಯೆ ಅದ್ಭುತವಾಗಿದೆ. ಜನವರಿ 31, 2002 ಕವಿ ಬೇಂದ್ರೆಯವರ ಹುಟ್ಟಿದ ದಿವಸ, ಅದರ ಬಹುಮಾನ ವಿತರಣೆ ನಡೆಯಲಿದೆ.

ಸಂಚಯಕ್ಕೆ ಒಂದು ಹೊಸಾ ವ್ಯಾಪ್ತಿಯ ಅಗತ್ಯವಿದೆ. ಇದಕ್ಕೊಂದು 'ಸ್ನೇಹವಲಯ' ರೂಪಿಸುವ ಕನಸೂ ಇದೆ. ಸಂಚಯ ಎನ್ನುವುದು ಒಬ್ಬರಿಂದ ಮತ್ತೊಬ್ಬರಿಗೆ ಹಬ್ಬಬೇಕಿರುವ ನಿಜದ ಪಿಸುಮಾತು. ನೀವುಗಳೆಲ್ಲ ನಿಮ್ಮ ಗೆಳೆಯರನ್ನ-ಸಹೋದ್ಯೋಗಿಗಳನ್ನ ಆಸಕ್ತರನ್ನ ಸಂಚಯಕ್ಕೆ ಚಂದಾದಾರರನ್ನಾಗಿಸಿ, ಪರಿಚಯಿಸಿ.

ತಡವಾಯ್ತು, ಪತ್ರಿಕೆಯನ್ನ ಇನ್ನೊಂದಷ್ಟು ಚಂದಗೊಳಿಸಲಾಗಿದೆ ಇಷ್ಟವಾಯ್ತೆ?



ಸಂಚಯದ ಮೊದಲ ಸಂಚಿಕೆ

ನಿಮ್ಮ

ಸಂಪಾದಕ

ಜೀವಜಾಲಕ್ಕೆ ಸವಾಲೇ ಕಂಪ್ಯೂಟರ್ ಮಾಯಾಜಾಲ

ಬರಗೂರು ರಾಮಚಂದ್ರಪ್ಪ

ನಮ್ಮ ಬೇಕು ಬೇಡಗಳನ್ನು ಕೇಳದೆ, ಹೇಳದೆ ಮಾಹಿತಿ ತಂತ್ರಜ್ಞಾನವು ತನ್ನ ಮಾಯಾಜಾಲವನ್ನು ವಿಸ್ತರಿಸಿಕೊಳ್ಳುತ್ತಿರುವ ಕಾಲಘಟ್ಟದಲ್ಲಿ ನಾವು ನಿಂತಿದ್ದೇವೆ. ಕಾಲದ ಕಾಳಜಿಗಳನ್ನು ಯಾರು ಅಥವಾ ಯಾವುದು ಕಬಳಿಸಬಹುದು, ರೂಪಿಸಬಹುದು, ವಿಸ್ತರಿಸಬಹುದು, ಎಂಬ ಅಂಶ ಕಾಲದ ಕೈಯ್ಯನ್ನು ಮೀರಿ ಹೇರಲ್ಪಡುವ ಸನ್ನಿವೇಶವೂ ಸೃಷ್ಟಿಯಾಗುವುದುಂಟು. ಹೀಗಾಗಿ ನಾವು ನಿಂತಿರುವ ಕಾಲ ನಮ್ಮದಾಗ ಬಹುದು, ನಮ್ಮದಾಗದೆಯೂ ಇರಬಹುದು ಅಥವಾ ನಮ್ಮದೆಂಬ ಭ್ರಮೆಯನ್ನು ಮೂಡಿಸಬಹುದು. ಮುಂದುವರೆದ ದೇಶಗಳ ವಿವಿಧ ಹುನ್ನಾರಗಳಲ್ಲಿ ಕಾಲಕ್ಕೆ ಒದಗುವ ಸರ್ಪದರ್ಪವು ಅಭಿವೃದ್ಧಿಶೀಲ ದೇಶಗಳ ದಿಕ್ಕನ್ನೇ ಬದಲಾಯಿಸಬಹುದು.

ಮಾಹಿತಿ ತಂತ್ರಜ್ಞಾನವು ವಿಜೃಂಭಿಸಲ್ಪಡುತ್ತಿರುವ ಈ ಕಾಲಘಟ್ಟದಲ್ಲಿ, ಕನ್ನಡವು ಕಾಲಗರ್ಭ ಸೇರುವಂತಾಗಬಾರದು ಎಂಬ ಕಾಳಜಿ ಹಾಗೂ ಕಳಕಳಿ ಎಂದಿಗಿಂತ ತೀವ್ರವಾಗಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ಮುಖ್ಯ ತಾತ್ವಿಕ ಅಂಶವನ್ನು ಚರ್ಚಿಸ ಬಯಸುತ್ತೇನೆ.

ಮಾಹಿತಿ ತಂತ್ರಜ್ಞಾನವು ಇವತ್ತಿನ ಬಹು ಮುಖ್ಯ ವೈಜ್ಞಾನಿಕ ಆವಿಷ್ಕಾರ. ಆದರೆ ಇವತ್ತು ವಿಜ್ಞಾನವು ವಿಜ್ಞಾನಿಗಳ ಕೈಯಲ್ಲಿ ಮಾತ್ರ ಇದೆಯೇ? ವಿಜ್ಞಾನಿಗಳೇ ನಡೆಸುತ್ತಾರಾದರೂ ಸಂಶೋಧನೆಗೆ ಸ್ವತಂತ್ರ ನೆಲೆ ಇರುತ್ತದೆಯೆಂದು ಹೇಳಲಾಗದು. ದೇಶಗಳಲ್ಲಿ ಮೇಲುಗೈ ಪಡೆಯುವ ರಾಜಕೀಯ ಶಕ್ತಿಗಳ ನೀತಿ ನಿರೂಪಣೆಗೆ ಅನುಗುಣವಾಗಿ ವೈಜ್ಞಾನಿಕ ಶೋಧದ ದಿಕ್ಕು ನಿಯಂತ್ರಣಕ್ಕೊಳಪಡುವ ಅನಿವಾರ್ಯದಲ್ಲಿ ನಾವಿದ್ದೇವೆ. ರಾಜಕೀಯಾಧಿಕಾರದ ಕೇಂದ್ರ ಶಕ್ತಿಗೆ ಅಣುಬಾಂಬು ಬೇಕೆಂದರೆ ವಿಜ್ಞಾನ ಅದರ ಆವಿಷ್ಕಾರಕ್ಕೆ ಶ್ರಮಿಸುತ್ತದೆ; ಕೃಷಿ ಮೂಲಕ್ಕೆ ಮಹತ್ವ ಕೊಟ್ಟರೆ ವಿಜ್ಞಾನದ ಶೋಧ ಆ ದಿಕ್ಕು ಹಿಡಿಯುತ್ತದೆ. ಇದು ಒಂದು ಮುಖ.

ವಿಚಿತ್ರವೆಂದರೆ - ನಾವು ಯಾವುದನ್ನು ರಾಜಕೀಯ ಶಕ್ತಿ ಕೇಂದ್ರವೆಂದು ಭಾವಿಸುತ್ತೇವೊ, ಆ ಶಕ್ತಿಯ ಕೇಂದ್ರ ನಮ್ಮ ದೇಶದಲ್ಲೇ ಇರುತ್ತದೆಯೆಂಬ ಗ್ಯಾರಂಟಿಯಿಲ್ಲ. ಈ ರಾಜಕೀಯ ಶಕ್ತಿಯನ್ನು ನಿಯಂತ್ರಿಸುವ ಕೇಂದ್ರ ಅಮೆರಿಕಾದಲ್ಲಿರಬಹುದು; ಬ್ರಿಟನ್ನಿನಲ್ಲಿರಬಹುದು, ಅಂದರೆ ನಮ್ಮ ಮುಖ್ಯ ವೈಜ್ಞಾನಿಕ ಆವಿಷ್ಕಾರಗಳ ದಿಕ್ಕನ್ನು ನಿಯಂತ್ರಿಸುವ ಶಕ್ತಿ ಮುಂದುವರೆದ ರಾಷ್ಟ್ರಗಳ ರಾಜಕೀಯದಲ್ಲಿ ಕೇಂದ್ರೀಕೃತವಾಗಿದೆ. ಇದರ



ಫಲವಾಗಿ, ಮುಂದುವರೆದ ರಾಷ್ಟ್ರಗಳ ಆಧುನಿಕ - ವೈಜ್ಞಾನಿಕ ಮಾದರಿಗಳು ಹಿಂದುಳಿದ ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳ ಆದರ್ಶವಾಗಿ ಪರಿಣಮಿಸುವ ವಿಪರ್ಯಾಸ ನಮ್ಮೆದುರಿಗಿದೆ. ಆದ್ದರಿಂದ ಮುಂದುವರೆದ ರಾಷ್ಟ್ರಗಳ ಮಾದರಿಗಳು ಆದರ್ಶಗಳಲ್ಲ ಆತಂಕಗಳು ಎಂದು ಪರಿಗಣಿಸಿದಾಗ, ಅಭಿವೃದ್ಧಿಶೀಲ ರಾಷ್ಟ್ರಗಳ ತಳಮಳ ಅರ್ಥಪೂರ್ಣವಾಗುತ್ತದೆ. ಮುಂದುವರೆದ ರಾಷ್ಟ್ರಗಳ ಮಾದರಿಗಳನ್ನು ಸ್ಥಳೀಯ ಅಗತ್ಯಕ್ಕನುಗುಣವಾಗಿ ಅರಗಿಸಿಕೊಳ್ಳುವ ಅಂತಃಶಕ್ತಿ ಲಭ್ಯವಾಗುತ್ತದೆ. ಇಲ್ಲದಿದ್ದರೆ ಬಾಹ್ಯಶಕ್ತಿಯನ್ನೇ ಅಂತಃಶಕ್ತಿಯೆಂದು ಭ್ರಮಿಸಿ ಪ್ರಚುರಪಡಿಸುವ 'ಜಾಹಿರಾತುದೇಶ'ಗಳಾಗಿ ನಾವು ಮಾರ್ಪಡುತ್ತೇವೆ. ಬಹುಮುಖಿ ಸಾಮಾಜಿಕ ವಲಯವುಳ್ಳ ನಮ್ಮ ದೇಶದ ಅಭಿವೃದ್ಧಿಗೆ ವಿಜ್ಞಾನದ ಬಹುಮುಖತೆ ಅಗತ್ಯವೆಂಬುದನ್ನು ಮರೆತು, ವಿಜ್ಞಾನದ ಏಕಮುಖತೆಗೆ ಮಾತನ್ನು ಮಾರಿಕೊಳ್ಳುತ್ತೇವೆ.

ವಿಜ್ಞಾನದ ಏಕಮುಖತೆ ನಮ್ಮ ಮುಂದಿರುವ ಒಂದು ಸಮಸ್ಯೆಯಾದರೆ "ವಿಜ್ಞಾನದ ಉದ್ಯಮೀಕರಣ" ಬಹುಮುಖ್ಯ ಆತಂಕವಾಗಿದೆ. ಹಾಗೆ ನೋಡಿದರೆ, ವಿಜ್ಞಾನದ ಉದ್ಯಮೀಕರಣವು ಈಗ ಒಂದು ಅಂತರರಾಷ್ಟ್ರೀಯ ಆತಂಕ, ಯಾಕೆಂದರೆ, ಇಂದು, ಮುಂದುವರೆದ ಮತ್ತು ಹಿಂದುಳಿದ ರಾಷ್ಟ್ರಗಳನ್ನು ಏಕಕಾಲಕ್ಕೆ 'ಉದ್ಯಮ'ದ ನೆಲೆಗಳು ನಿಯಂತ್ರಸುತ್ತಿವೆ. ಯಾವ ಉದ್ಯಮವು ಯಾವ ಕಾಲದಲ್ಲಿ ಜಾಹಿರಾತಿನ ಶಕ್ತಿಯನ್ನು ಪಡೆದು ವೈಭವೀಕರಿಸಲ್ಪಡುತ್ತದೆಯೋ, ಆ ಉದ್ಯಮ 'ಅಂತರ ರಾಷ್ಟ್ರೀಯ ಅನಿವಾರ್ಯ' ಎಂಬ ಖ್ಯಾತಿಯನ್ನು ಪಡೆಯುತ್ತದೆ. ಮಾಹಿತಿ ತಂತ್ರಜ್ಞಾನವೂ ಇದಕ್ಕೆ ಹೊರತಾಗಿಲ್ಲ. ಯಾವುದೇ ತಂತ್ರಜ್ಞಾನ ಉದ್ಯಮೀಕರಣ ಹಾಗೂ ವೈಭವೀಕರಣಗಳಿಗೆ ಒಳಗಾದಾಗ ಉಂಟಾಗುವ ಆತಂಕಗಳನ್ನು ನಾವು ಎದುರಿಸದೆ, ಕೇವಲ ಏಕಮುಖಿಗಳಾಗುವ ಕೈಂಕರ್ಯಕ್ಕೆ ಒಳಗಾಗಬಾರದು ಎಂಬ ಎಚ್ಚರ ಅಗತ್ಯ.

ಇಪ್ಪತ್ತನೇ ಶತಮಾನದವನ್ನೂ ಪ್ರವೇಶ ಮಾಡದೆ ಇರುವ ಕೋಟ್ಯಂತರ ಜನರುಳ್ಳ ಬಹುಮುಖೀ ಸಮಾಜಕ್ಕೆ ಇಪ್ಪತ್ತೊಂದನೆ ಶತಮಾನದ ಹೆಸರಿನಲ್ಲಿ ಏಕಮುಖೀ ಚಿಂತನೆಯನ್ನು ಹೇರುವ ಮುಂದುವರೆದ ರಾಷ್ಟ್ರಗಳ 'ಉದ್ಯಮೀಕರಣ ಹುನ್ನಾರ'ವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಮ್ಮ ಅಗತ್ಯಕ್ಕೆ ಅನುಗುಣವಾಗಿ, ಆಧುನಿಕ ವಿಜ್ಞಾನ - ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಜನಮುಖಿಯಾಗಬೇಕು. ಇಲ್ಲದಿದ್ದರೆ ಮುಂದುವರೆದ ರಾಷ್ಟ್ರಗಳ ವಿಜ್ಞಾನದ ಏಕಮುಖತೆ ಮತ್ತು ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಯ ಬಹುಮುಖತೆಗಳ ನಡುವೆ ದೊಡ್ಡ ಕಂದಕವೇರ್ಪಡುತ್ತದೆ.

ಆಗ ನಾವು ಅಭಿವೃದ್ಧಿಯ ಹುಸಿ ಮಾದರಿಗಳಲ್ಲಿ ಹೊಸ ವರ್ಣಾಶ್ರಮವನ್ನು ಸ್ಥಾಪಿಸುವ ಅಪಾಯವಿದೆ. ಯಾಕೆಂದರೆ ನಮ್ಮಲ್ಲಿ ಅಕ್ಷರವಂಚಿತ ಲಕ್ಷ ಲಕ್ಷ ಜನರು ಮಾತೃಭಾಷೆಗೂ ಮಾತಾಗಲಾಗದೆ ಮೂಕ ಸಂಸ್ಕೃತಿಯ ಪ್ರತೀಕವಾಗಿ ಬದುಕುತ್ತಿದ್ದಾರೆ. ಮೂಕ ಸಂಸ್ಕೃತಿಗೆ ಮಾತಾಗುವುದೇ ಪ್ರಜಾಪ್ರಭುತ್ವದ ಪ್ರಧಾನ ಆಶಯ. ಈ ಆಶಯಕ್ಕೆ ಆಧುನಿಕ ವಿಜ್ಞಾನ - ತಂತ್ರಜ್ಞಾನ ಸ್ಪಂದಿಸಬೇಕು, ಮೇಲ್ವರ್ಗದ ಮುಂದುವರೆದ ವೈಜ್ಞಾನಿಕ ಮಾದರಿಗಳನ್ನು ಮಧ್ಯಮ ವರ್ಗ ಹಾಗೂ ಕೆಳವರ್ಗದ ಹಿಂದುಳಿದ ಜೀವನ ಮಾದರಿಗಳಿಗೆ ಅಳವಡಿಸುವುದು ಸುಲಭದ ಕೆಲಸವಲ್ಲ. ಸ್ವಲ್ಪ ಆಯ ತಪ್ಪಿದರೂ ಹೊಸ ವರ್ಣಾಶ್ರಮ ಧರ್ಮಕ್ಕೆ ಹಾದಿಯಾಗುವ ಆತಂಕ ಎದುರಾಗುತ್ತದೆ.

ಹೀಗೆಂದು ಅಭಿವೃದ್ಧಿಶೀಲ - ಹಿಂದುಳಿದ ದೇಶಗಳು ತಮಗೆ ತಾವೇ ದ್ವೀಪಗಳಾಗುವ ಸನ್ನಿವೇಶದಲ್ಲೂ ನಾವಿಲ್ಲ, ಆದ್ದರಿಂದ ರಾಜಕೀಯ ನೆಲೆಗಳನ್ನು ಮೀರಿ ಬೆಳೆಯುತ್ತಿರುವ ವಿಜ್ಞಾನದ

ಏಕಮುಖತೆ ಮತ್ತು ಉದ್ಯಮೀಕರಣದ ಸವಾಲುಗಳನ್ನು ಸರಿಯಾಗಿ ಎದುರಿಸುತ್ತ ಜನಸಾಮಾನ್ಯರ ಆಶಯುಗಳಿಗೆ ಅಳವಡಿಸುವ ಬದ್ಧತೆ ಇಂದು ಮುಖ್ಯವಾಗಿದೆ. ನಾಡಿನ ಜನಭಾಷೆ ಮತ್ತು ಜನಸಂಸ್ಕೃತಿಗಳನ್ನು ಉತ್ತೇಜಿಸುವ ವಿಧಾನಕ್ಕೆ ಆಧುನಿಕ ತಂತ್ರಜ್ಞಾನ ಪೂರಕವಾಗಬೇಕಾಗಿದೆ. ಆದರೆ, ಇಂದು ಮಾಹಿತಿ ತಂತ್ರಜ್ಞಾನದ ಹೆಸರಿನಲ್ಲಿ ನಡೆಯುತ್ತಿರುವ ಪ್ರಚಾರದ ಮಾದರಿಯನ್ನು ನೋಡಿದರೆ ಜನಸಾಮಾನ್ಯರ ಆಶೋತ್ತರಗಳ ಬಗ್ಗೆ ಆಸಕ್ತಿಯಿರುವಂತೆ ಕಾಣುವುದಿಲ್ಲ. ಮಾಹಿತಿ ತಂತ್ರಜ್ಞಾನದ ಉದ್ಯಮಪತಿಗಳು ಮತ್ತು ಅದಕ್ಕೆ ದಾಸರಂತೆ ವರ್ತಿಸುತ್ತಿರುವ ನೌಕರಶಾಹಿಯಿಂದ ಜನಸಾಮಾನ್ಯರಿಂದ ಆಯ್ಕೆಯಾದ ಸರ್ಕಾರಗಳೂ ಹಾದಿ ತಪ್ಪುತ್ತಿವೆ; ಭ್ರಮೆಗಳನ್ನು ಬಿತ್ತುತ್ತಿವೆ.

ಮಾಹಿತಿ ತಂತ್ರಜ್ಞಾನಕ್ಕೆ ಕನ್ನಡತನ ತರುವ ಬದಲು ಜನಸಾಮ್ಯಾನರಿಗೆ ಆಂಗ್ಲತನದ ಭ್ರಮೆ ಹಿಡಿಸುವ ಪ್ರಯತ್ನ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದೆ. ಜನಸಾಮ್ಯಾನರು ಆಂಗ್ಲಭಾಷೆಯನ್ನು ಕಲಿಯಬಾರದೆಂದಾಗಲಿ ಅದರ ಬಗ್ಗೆ ಪರಿಣಿತಿ ಪಡೆಯಬಾರದೆಂದಾಗಲಿ ನಾನು ಹೇಳುವುದಿಲ್ಲ. ಆದರೆ ಮಾಹಿತಿ ತಂತ್ರಜ್ಞಾನವೆಂದರೆ ಆಂಗ್ಲಭಾಷೆ ಮಾತ್ರ ಎಂಬ ಭ್ರಮೆಯನ್ನು ಬಿತ್ತುವ ಮೂಲಕ ಉದ್ಯಮಪತಿಗಳು ಘೋರ ಅಪರಾಧವನ್ನು ಮಾಡುತ್ತಿದ್ದಾರೆ. ರಾಷ್ಟ್ರೀಯ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಬಳಕೆಗೆ ಆಂಗ್ಲಭಾಷೆಯ ಅಗತ್ಯವನ್ನು ಒಪ್ಪಿ ಆಂತರಿಕ ಆಡಳಿತ ಮತ್ತು ಉಪಯೋಗದಲ್ಲಿ ಕನ್ನಡಕ್ಕೆ ಆದ್ಯತೆ ಮಾತ್ರವಲ್ಲ, ಕನ್ನಡ ಕಡ್ಡಾಯ ಎಂಬ ಸ್ಪಷ್ಟ ನಿಲುವು ತಾಳದ ನೌಕರಶಾಹಿ ಮತ್ತು ಸರ್ಕಾರಗಳ ತಪ್ಪು ಹೆಜ್ಜೆ ಕರ್ನಾಟಕವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಬದಲು ಅಂತಃಶಕ್ತಿಯನ್ನು ಕುಗ್ಗಿಸುತ್ತಿದೆ. ಈಗಾಗಲೇ ಆಂಗ್ಲಭಾಷೆಯಲ್ಲಿ ತೇರ್ಗಡೆ ಹೊಂದಲು ಕಡುಕಷ್ಟಪಡುತ್ತಿರುವ ನಗರ ಮತ್ತು ಗ್ರಾಮೀಣ ಪ್ರದೇಶದ ಬಡವರ್ಗದ ವಿದ್ಯಾರ್ಥಿಗಳ ತಲೆಯ ಮೇಲೆ ಭ್ರಮೆಯ ಬಂಡೆ ಹಾಕಿ 'ಅಭಿವೃದ್ಧಿಯ ಆನಂದ' ಪಡಲಾಗುತ್ತಿದೆ, ಆದರೆ ಮೇಲೆ ಮಧ್ಯಮ ವರ್ಗದಿಂದ ಕೆಳಗಿರುವವರೆಲ್ಲ ಈಗ ಕೀಳರಿಮೆಯಿಂದ ನರಳತೊಡಗಿದ್ದಾರೆ.

ಮಾಹಿತಿ ತಂತ್ರಜ್ಞಾನವನ್ನು ಅಗತ್ಯಕ್ಕೆ ತಕ್ಕಂತೆ ಕಲಿಯುವುದರಲ್ಲಿ ತಪ್ಪಿಲ್ಲ. ಆದರೆ ಈ ತಂತ್ರಜ್ಞಾನದ ಗುತ್ತಿಗೆದಾರರು ಭಾಷೆ, ಶಿಕ್ಷಣ, ಸಂಸ್ಕೃತಿಗಳ ದಿಕ್ಕನ್ನೇ ಬದಲಾಯಿಸ ಹೊರಟಿರುವುದು ಎಷ್ಟರಮಟ್ಟಿಗೆ ಸರಿ? ಇದರಿಂದ ಸಮಾಜದಲ್ಲಿ ಉಂಟಾಗುವ ಆಂತರಿಕ ತಳಮಳಕ್ಕೆ ತಕ್ಕ ಉತ್ತರಗಳನ್ನು ಕಂಡುಕೊಳ್ಳದಿದ್ದರೆ ಉಂಟಾಗುವ ಅಸಮಾನತೆಯ ಆತಂಕ ಅಗಾಧವಾದುದು.

ಹಳ್ಳಿಶಾಲೆಗಳಿಗೆ ಕಂಪ್ಯೂಟರ್ ಕೊಡುವುದು, ಕಲಿಸುವುದು ಉತ್ತಮ ಹೆಜ್ಜೆಯಾದರೂ ಅದು ಅಂತಿಮ ಉತ್ತರವಲ್ಲ. ಯಾಕೆಂದರೆ ಸ್ಥಳೀಯ ಭಾಷೆ, ಸಂಸ್ಕೃತಿ ಶಿಕ್ಷಣಗಳ ಮೇಲೆ ಸವಾರಿ ಮಾಡದಂತೆ ಮಾಹಿತಿ ತಂತ್ರಜ್ಞಾನವನ್ನು ತಡೆದಿಲ್ಲ. ಹಾಗಾಗಿ ಅದು ಹೊಸ ಭ್ರಮೆಗಳನ್ನು ಹಳ್ಳಿ ಹಳ್ಳಿಗಳಲ್ಲಿ ಬಿತ್ತುತ್ತದೆ.

ಈಗ ಭಾಷೆಯ ಬಗ್ಗೆ ಬಿತ್ತುತ್ತಿರುವ ಭ್ರಮೆಯನ್ನೇ ತೆಗೆದುಕೊಳ್ಳೋಣ. ಮಾಹಿತಿ ತಂತ್ರಜ್ಞಾನದ ಗುತ್ತಿಗೆದಾರರು (ಪರಿಣತರಲ್ಲ) ಚೈನಾ, ಜಪಾನ್, ಜರ್ಮನಿ, ಮುಂತಾದ ದೇಶಗಳಲ್ಲಿ ಆಂಗ್ಲಭಾಷಾ ಮಾಧ್ಯಮಕ್ಕೆ ಆದ್ಯತೆ ಸಿಕ್ಕಿದ್ದು, ನಮ್ಮ ನಾಡಿನಲ್ಲೂ ಆಂಗ್ಲಭಾಷೆಗೆ ಆದ್ಯತೆ ಕೊಡಬೇಕೆಂದು ವಾದ ಮಂಡಿಸುತ್ತಿದ್ದಾರೆ. ವಾಸ್ತವವಾಗಿ ಈ ದೇಶಗಳಲ್ಲೂ ಆಂಗ್ಲಭಾಷೆಗೆ ದೇಶಭಾಷೆಗಳನ್ನು ಮೀರಿದ ಆದ್ಯತೆ ಸಿಕ್ಕಿಲ್ಲ. ಕಂಪ್ಯೂಟರ್ ತಂತ್ರಜ್ಞಾನವನ್ನು ತಂತಮ್ಮ ದೇಶಭಾಷೆಗೇ ಅಳವಡಿಸಿಕೊಂಡಿರುವ ಈ ದೇಶಗಳು ಹೊರ ರಾಷ್ಟ್ರಗಳಿಗೆ ತಂತ್ರಾಂಶಗಳನ್ನು ರಫ್ತು ಮಾಡುವ ಉದ್ದೇಶಕ್ಕಾಗಿ ಆಂಗ್ಲ ಭಾಷೆಯ ಪರಿಣಿತರನ್ನು

ಸಿದ್ಧ ಮಾಡಿದ್ದಾರೆ. ಆಂಗ್ಲಭಾಷೆಯಲ್ಲಿ ಆಯ್ದವರಿಗೆ ಪರಿಣತಿ ಕೊಡುವ ಈ ಪದ್ಧತಿಯನ್ನು ಆಂಗ್ಲ ಮಾಧ್ಯಮ ಎಂಬಂತೆ ನಮಗೆ ತಪ್ಪಾಗಿ ತಿಳಿಸಲಾಗುತ್ತಿದೆ.

ತಂಬಾ ಕಷ್ಟಕರವಾದ ಲಿಪಿಯುಳ್ಳ ಚೀನಿ ಭಾಷೆಯನ್ನು ಕಂಪ್ಯೂಟರ್ ತಂತ್ರಜ್ಞಾನಕ್ಕೆ ಯಶಸ್ವಿಯಾಗಿ ಅಳವಡಿಸಲಾಗಿದೆ. ಜರ್ಮನಿಯಲ್ಲಿ ಜರ್ಮನ್ ಭಾಷೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನದ ಭಾಷೆ; ಜಪಾನಿನಲ್ಲಂತೂ ಸ್ಪಷ್ಟ ಭಾಷಾ ನೀತಿಯಿದೆ. ಆಂತರಿಕ ವ್ಯವಹಾರಕ್ಕೆಲ್ಲ ಜಪಾನಿ ಭಾಷೆಯ ಮಾಹಿತಿ ಸಾಫ್ಟ್‌ವೇರ್ ಇದೆ. ಉತ್ಪಾದನೆ ಮಾಡಿ ರಫ್ತು ಮಾಡಲು ಆಂಗ್ಲಭಾಷೆಯ ಪರಿಣತರಿದ್ದಾರೆ. ಈ ದೇಶಗಳ ವಿವೇಕವನ್ನು ಮರೆಮಾಚಿ ನಮಗೆ 'ಸುಳ್ಳು' ಹೇಳಲಾಗುತ್ತಿದೆ. ಅಮೆರಿಕಾದಂಥ ಬಲಾಢ್ಯ ದೇಶಗಳ ಮಾದರಿಯನ್ನು ಅಸಮತೋಲನಗಳ ಆಗರವಾದ ನಮ್ಮ ಸಮಾಜಕ್ಕೆ ಏಕಾಏಕಿ ಅಳವಡಿಸುವ ಉದ್ಯಮದ ಒತ್ತಡವೇ ಮುಖ್ಯವಾಗುತ್ತಿದೆ.

ಆಂಗ್ಲಮಯ ಅಮೆರಿಕಾದಲ್ಲಿ ಮಾಹಿತಿ ತಂತ್ರಜ್ಞಾನದ ಫಲಾನುಭವಿಗಳು ಶೇ.60 ರಷ್ಟಿದ್ದರೆ ಇಂಡಿಯಾದಲ್ಲಿ ಶೇ. 4 ರಿಂದ 5 ಎಂದು ಅಂದಾಜು ಮಾಡಲಾಗಿದೆ . ಜನರ ನೆಲೆಯಿಂದ ನೋಡಿದಾಗ, ಅಮೆರಿಕಾದಲ್ಲಿ ಕಂಪ್ಯೂಟರಿನ ಅಂತರ್‌ಜಾಲದ ಬಳಕೆಯು 32ನೇ ಸ್ಥಾನದಲ್ಲಿದ್ದರೆ ಜಪಾನಿನಲ್ಲಿ ಒಂದನೇ ಸ್ಥಾನದಲ್ಲಿದೆ. ಇದು ಇತ್ತೀಚಿನ ಎರಡು ತಿಂಗಳ ಸಮೀಕ್ಷೆಯ ಖಚಿತ ಮಾಹಿತಿ. ಅಂದರೆ ಸ್ಥಳೀಯ ಭಾಷೆಯಲ್ಲಿ ವೃದ್ಧಿಯಾದ ತಂತ್ರಾಂಶ ಮತ್ತು ಅಂತರ್‌ಜಾಲದ ಉಪಯೋಗ ಪಡೆಯುವ ಜಪಾನ್ ಇಡೀ ಪ್ರಪಂಚದಲ್ಲಿ ಮೊದಲ ಸ್ಥಾನದಲ್ಲಿದೆ. ನಾವು ಮಾಹಿತಿ ತಂತ್ರಜ್ಞಾನದಲ್ಲಿ ಕರ್ನಾಟಕ ಮತ್ತು ಬೆಂಗಳೂರಿಗೆ ಪ್ರಪಂಚದಲ್ಲೇ ವಿಶಿಷ್ಟ ಸ್ಥಾನವಿದೆಯೆಂದು ಹೇಳುತ್ತೇವೆ. ಇದು ಉದ್ಯಮಕ್ಕೆ ಸಂಬಂಧಿಸಿದ ಸ್ಥಾನಮಾನವೇ ಹೊರತು ಭಾಷೆ, ಶಿಕ್ಷಣ, ಸಂಸ್ಕೃತಿಗಳ ನೆಲೆಯಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ದೊರಕಿದ ಸ್ಥಾನಮಾನವಲ್ಲ. ಈ ದಿಕ್ಕಿನಲ್ಲಿ ಅಗತ್ಯ ಕ್ರಮ ಕೈಗೊಂಡಾಗ ಮಾಹಿತಿ ತಂತ್ರಜ್ಞಾನಕ್ಕೆ ದೇಶೀಯ ಮಹತ್ವ ಬರುತ್ತದೆ. ಈಗ ಕರ್ನಾಟಕದ ಪಾಲಿಗಿರುವುದು ವಿದೇಶೀಯ ಮಹತ್ವ.

ನಮ್ಮ ಶಿಕ್ಷಣ ಕ್ಷೇತ್ರದ ಮೇಲೆ ಮಾಹಿತಿ ತಂತ್ರಜ್ಞಾನ ಒಂದು ಉದ್ಯಮವಾಗಿ ಕಬಂಧಬಾಹುಗಳನ್ನು ಚಾಚುತ್ತ ಶಿಕ್ಷಣ ನೀತಿಯ ದಿಕ್ಕನ್ನು ತನಗೆ ಬೇಕಾದಂತೆ ಬದಲಾಯಿಸಿಕೊಳ್ಳಲು ಹವಣಿಸುತ್ತಿದೆ. ಸರ್ಕಾರ ವಿವೇಕ ಮತ್ತು ಔಚಿತ್ಯ ಪ್ರಜ್ಞೆಯನ್ನು ಬಳಸದಿದ್ದರೆ ರಾಜ್ಯದ ಇಡೀ ಶಿಕ್ಷಣವು ಮಾಹಿತಿ ತಂತ್ರಜ್ಞಾನದ ಉದ್ಯಮ ನೀತಿಯಾಗಿ ಪರಿಣಮಿಸುತ್ತದೆ.

ಕಂಪ್ಯೂಟರ್ ತಂತ್ರಜ್ಞಾನದ ಪರಿಣತಿಯು ಶಿಕ್ಷಣ ನೀತಿಯ ಭಾಗವಾಗಬೇಕೆಂಬ ಬಗ್ಗೆ ಎರಡು ಮಾತಿಲ್ಲ. ಆದರೆ ಈಗ ಮಾಹಿತಿ ತಂತ್ರಜ್ಞಾನದ 'ಮಾರಾಟ'ವೇ ಮುಖ್ಯವಾಗುತ್ತಿದೆ. ಜ್ಞಾನ ಗೌಣವಾಗುತ್ತಿದೆ. ವಿಜ್ಞಾನದ ಅನೇಕ ಜ್ಞಾನ ಶಾಖೆಗಳನ್ನು ಕಲಿಸಿದಂತೆ ಕಂಪ್ಯೂಟರನ್ನು ಕಲಿಸುವ ಬದಲು ಅದೊಂದೇ ಜ್ಞಾನ, ಅದೊಂದೇ ವಿಜ್ಞಾನ ಎಂಬ ಭ್ರಮೆ ಮೂಡಿಸಲಾಗುತ್ತಿದೆ. ಕನ್ನಡವನ್ನು ಕಡ್ಡಾಯ ಮಾಡದೆ ಕಂಪ್ಯೂಟರನ್ನು ಕಡ್ಡಾಯ ಮಾಡಲು ಪ್ರಯತ್ನಿಸಲಾಗುತ್ತಿದೆ. ' ಶಿಕ್ಷಣವೆಂದರೆ ಕಂಪ್ಯೂಟರ್' ಎಂಬಂತೆ ಮಾನಸಿಕ ಒತ್ತಡ ನಿರ್ಮಿಸಲಾಗುತ್ತದೆ.

ಇದರಿಂದ ಇಡೀ ಶಿಕ್ಷಣ ಕ್ಷೇತ್ರ ಕೇವಲ ವೃತ್ತಿ ಶಿಕ್ಷಣವಾಗುವ ಅಪಾಯದತ್ತ ಸಾಗಿದೆ. ಒಂದು ಹಂತದವರೆಗೆ ಸಾಮಾನ್ಯ ಶಿಕ್ಷಣಕ್ಕೆ ಮಹತ್ವ ನೀಡಿ ಆನಂತರ ಮಾಹಿತಿ ತಂತ್ರಜ್ಞಾನವನ್ನೂ ಒಳಗೊಂಡಂತೆ ವಿಜ್ಞಾನದ ವಿವಿಧ ಸಮಕಾಲೀನ ಶಾಖೆಗಳಲ್ಲಿ ಶಿಕ್ಷಣ ಕೊಡುವ ನೀತಿಯನ್ನು ರೂಪಿಸುವ ಬದಲು

ಎಲ್ಲ ಕಡೆಗೂ ಒಂದೇ ಮಂತ್ರದಂಡವನ್ನು ಬಳಸಿ ಇತರೆ ಜ್ಞಾನಶಾಖೆಗಳನ್ನು ಬಗ್ಗು ಬಡಿಯಲಾಗುತ್ತಿದೆ. ಶಿಕ್ಷಣವೆಂದರೆ ಕೇವಲ ಉದ್ಯೋಗ ಮುಖಿಯಲ್ಲ. ಒಂದು ಹಂತದವರೆಗೆ ಪೂರ್ಣಜ್ಞಾನ ಮುಖಿಯಾಗಿರಬೇಕು; ಅನಂತರ ಉದ್ಯೋಗ ಮುಖಿಯಾಗಲಿ. ಅದನ್ನು ಬಿಟ್ಟು ಕಂಪ್ಯೂಟರ್ ಕಲಿತವರಿಗೆಲ್ಲ ಉದ್ಯೋಗ ಸಿಗುತ್ತದೆಂಬ ಭ್ರಮೆಯಿಡಿಸುವುದು ಮತ್ತು ಅದನ್ನು ಸಾಮಾನ್ಯ ಶಿಕ್ಷಣದ ಒಂದು ಮುಖ್ಯ ಭಾಗವಾಗಿಸುವುದು ಸರಿಯೇ? ಇಲ್ಲದಿದ್ದರೆ ಒಮ್ಮೆ ಏರುಪೇರಾದ ಪಠ್ಯಕ್ರಮವನ್ನು ಸರಿಪಡಿಸಲು ದಶಕಗಳೇ ಬೇಕಾಗುತ್ತದೆ. ಅದರಲ್ಲೂ ಭಾಷಾ ಕಲಿಕೆಯಲ್ಲಿ ವ್ಯತ್ಯಸ್ಥಗೊಳ್ಳುವ ಪಠ್ಯ ಕ್ರಮವನ್ನು ಸುಸ್ಥಿತಿಗೆ ತರುವ ಪ್ರಯತ್ನಕ್ಕೆ ಕಿಮ್ಮತ್ತು ಸಿಗುವುದೇ ಇಲ್ಲ.

ಭಾಷೆಯ ವಿಷಯಕ್ಕೆ ಬಂದಾಗ, ಮಾಹಿತಿ ತಂತ್ರಜ್ಞಾನದ ಉದ್ಯಮಪತಿಗಳು ಆಂಗ್ಲಮಾಧ್ಯಮವನ್ನು ಕಡ್ಡಾಯಗೊಳಿಸುವ ಒತ್ತಡವನ್ನು ವಿವಿಧ ವೇದಿಕೆಗಳ ಮೂಲಕ ಹೇರಹೊರಟಿದ್ದಾರೆ. ಅವರ ಆಶೋತ್ತರಕ್ಕಾಗಿ, ಬಡಪಾಯಿಗಳಾದ ಕೆಳ ವರ್ಗದವರ ಬಗ್ಗೆ ಕಾಳಜಿವಹಿಸಿದಂತೆ ಕಾಣಿಸಿಕೊಳ್ಳುತ್ತಿದ್ದಾರೆ. ಕೇವಲ ದೊಡ್ಡವರ ಮಕ್ಕಳೇ ಇಂಗ್ಲೀಷ್ ಕಲಿಯಬೇಕೆ? ಜವಾನನ ಮಗ, ಚಾಲಕನ ಮಗ, ಕೂಲಿಯ ಮಗ ಇಂಗ್ಲೀಷ್ ಕಲಿತು ಮುಂದೆ ಬರಬಾರದೆ ಎಂದೆಲ್ಲಾ ಪ್ರಶ್ನಿಸಲಾಗುತ್ತಿದೆ. ಈ ಪ್ರಶ್ನೆಗಳಿಗೆ ಕೆಲವು ರಾಜಕಾರಣಿಗಳೂ ದನಿಗೂಡಿಸುತ್ತಿದ್ದಾರೆ. ಮೇಲೆ ಹೇಳಿದ ಜನವರ್ಗಗಳ ಮಕ್ಕಳು ಇಂಗ್ಲೀಷ್ ಕಲಿಯಬಾರದೆಂದು ಯಾರು ಹೇಳುತ್ತಾರೆ ಇವರೆಲ್ಲರೂ ಇಂಗ್ಲೀಷನ್ನು ಒಂದು ಭಾಷೆಯಾಗಿ ಚೆನ್ನಾಗಿ ಕಲಿಯಲು ಸರ್ವ ಪ್ರೋತ್ಸಾಹಗಳು ಇರಲಿ. ಅದರೆ ಇವರಿಗೆ 'ಇಂಗ್ಲೀಷ್ ಕಲಿಸುವ' ಕ್ರಿಯೆಯ ಪ್ರಾಮಾಣಿಕತೆಗಿಂತ, ಅದನ್ನು ನೆಪಮಾಡಿಕೊಂಡು ಶಿಕ್ಷಣ ಮಾಧ್ಯಮದ ನೀತಿಯನ್ನು ಬದಲಾಯಿಸುವುದು ಬೇಕಾಗಿದೆ. ಹೀಗೆ ಬದಲಾಯಿಸಿದರೆ ನಾಯಿಕೊಡೆಯಂತೆ ಹುಟ್ಟುವ ಆಂಗ್ಲ ಮಾಧ್ಯಮ ಶಾಲೆಗಳಿಗೆ ಡೊನೇಷನ್ ಕೊಟ್ಟು ಥಕ್ಕನೆ ಪ್ರಯೋಜನ ಪಡೆಯುವರು ಜವಾನರ ಮಕ್ಕಳಲ್ಲ; ಕೂಲಿಕಾರರ ಮಕ್ಕಳಲ್ಲ; ಆರ್ಥಿಕ ಮತ್ತು ಸಾಮಾಜಿಕ ಶಕ್ತಿಯಿರುವವರು.

ಇಷ್ಟಕ್ಕೂ ಆಂಗ್ಲಮಾಧ್ಯಮದಲ್ಲಿ ಓದಿದವರೆಲ್ಲ ಅಂಗ್ಲ ಭಾಷೆಯಲ್ಲಿ ಪೂರ್ಣ ಪರಿಣಿತಿ ಪಡೆಯುತ್ತಾರೆಂದು ಹೇಳಲಾಗದು. ಆಂಗ್ಲ ಭಾಷೆಯನ್ನು ಒಂದು ಭಾಷೆಯಾಗಿ ಕಲಿಸುತ್ತಲೇ ಪರಿಣತಿ ಪಡೆಯುವಂತೆ ಮಾಡಬಹುದು. ಇದಕ್ಕಾಗಿ ಆಂಗ್ಲಭಾಷೆಯ ಕಲಿಕೆಯ ವಿಧಾನವನ್ನು ಬದಲಾಯಿಸಿ ಜಗತ್ತಿನೊಂದಿಗೆ ವ್ಯವಹರಿಸುವುದಕ್ಕೆಬೇಕಾದ ಪರಿಣತಿಯನ್ನು ಕೊಡಬೇಕು.

ಮಾಹಿತಿ ತಂತ್ರಜ್ಞಾನ ಕೆಲವು ಉದ್ಯಮಿಗಳು ತಾವು ಕೆಳವರ್ಗದ ಜನರ ಬಗ್ಗೆ ತೋರಿಸುತ್ತಿರುವ ಕಾಳಜಿಯ ಸಾಂಕೇತಿಕ ಸಮರ್ಥನೆಗಾಗಿ ಒಂದು ಕೆಲಸ ಮಾಡಬಹುದು. ಈಗಾಗಲೇ ಆಂಗ್ಲ ಮಾಧ್ಯಮದಲ್ಲಿ ಓದಿ ನಿರುದ್ಯೋಗಿಗಳಾಗಿರುವ ಕೆಳ ವರ್ಗದವರನ್ನು ಆದ್ಯತೆಯ ಮೇಲೆ ತಮ್ಮ ಕಂಪನಿಗಳಲ್ಲಿ ಕೆಲಸಕ್ಕೆ ಸೇರಿಸಿಕೊಂಡು ಸಾಮಾಜಿಕ ಕಾಳಜಿಗೆ ಸಮರ್ಥನೆ ಕೊಡಬಾರದೇಕೆ? ಮಾಹಿತಿ ತಂತ್ರಜ್ಞಾನದ ಯಶಸ್ವಿ ಉದ್ಯಮಿಯೊಬ್ಬರ ಪ್ರಕಾರವೇ - ಈ ಕ್ಷೇತ್ರದಲ್ಲಿ ಏಳೆಂಟು ವರ್ಷಗಳವರೆಗೆ ಅಪಾರ ಉದ್ಯೋಗಾವಕಾಶವಿದೆ. ಹಾಗಿದ್ದಲ್ಲಿ ಕೆಳವರ್ಗಮತ್ತು ಹಿಂದುಳಿದ ವರ್ಗಗಳ ಮಕ್ಕಳು ಈಗ ಆಂಗ್ಲ ಪ್ರಾಥಮಿಕ ಶಾಲೆಗೆ ಸೇರಿ ಪರಿಣತರಾಗಿ ಹೊರ ಬರುವ ವೇಳೆಗೆ ಮಾಹಿತಿ ತಂತ್ರಜ್ಞಾನದ ಉದ್ಯೋಗಾವಕಾಶದ ಬಾಗಿಲು ಮುಚ್ಚಿರುತ್ತದೆ. ಆದ್ದರಿಂದಲೇ ಈಗ ಲಭ್ಯವಿರುವ ಹಿಂದುಳಿದ ಹಾಗೂ ಕೆಳವರ್ಗದ ಅಂಗ್ಲ ಪರಿಣತ ನಿರುದ್ಯೋಗಿಗಳಿಗೆ ಆದ್ಯತೆಯ ಮೇಲೆ ಉದ್ಯೋಗಾವಕಾಶ ಕೊಡಿ ಎಂದು ನಾನು ಪ್ರತಿಪಾದಿಸಿದ್ದು. ಇದೊಂದು ವಿತಂಡವಾದದಂತೆ ಕೆಲವರಿಗೆ ಕಾಣಬಹುದಾದರೂ ಹುನ್ನಾರಗಳನ್ನು

ಹೊರಹಾಕಲು ಅಥವಾ ಹುನ್ನಾರವಲ್ಲವೆಂದು ಸಾಧಾರಗೊಳಿಸಲು ಈ ವಾದ ಅನಿರ್ವಾಯವೆಂಬುದು ನನ್ನ ಭಾವನೆ.

ಇತ್ತೀಚಿಗೆ ಸರ್ಕಾರದ ಕಾರ್ಯದರ್ಶಿಯೊಬ್ಬರು ನನಗೆ ಹೇಳಿದರು: 'ನೋಡಿ ಸರ್, ನಮ್ಮ ರಾಜ್ಯದ ಬಡತನ ಮತ್ತು ನಿರುದ್ಯೋಗ ನಿವಾರಣೆಗೆ ಇರೊ ಒಂದೇ ಒಂದು ಅವಕಾಶ ಅಂದ್ರೆ ಮಾಹಿತಿ ತಂತ್ರಜ್ಞಾನ, ಇದು ಕಟ್ಟ ಕಡೆಯ ಅವಕಾಶ ಇದನ್ನು ಈಗ ಬಳಸಿಕೊಳ್ಳದೆ ಹೋದರೆ ಇನ್ನು ಯಾವತ್ತೂ ಬಡತನ ಹೋಗಲ್ಲ; ನಿರುದ್ಯೋಗ ನಿವಾರಣೆ ಆಗೊಲ್ಲ."

ಎಂಥ ರೋಮಾಂಚನಕಾರಿ ಹೇಳಿಕೆ! ರಾಜ್ಯದ ಬಡತನ ಮತ್ತು ನಿರುದ್ಯೋಗ ನಿವಾರಣೆಗೊಂಡು ಸುಖೀ ಸಮಾಜ ನಿರ್ಮಾಣವಾಗುವುದಾದರೆ ಯಾರಿಗೆ ಬೇಡ? ಆದರೆ ಕಟುವಾಸ್ತವದ ಅರಿವಿದ್ದವರ್‍ಯಾರು ಇಂಥ ಹೇಳಿಕೆಗಳಿಂದ ರೋಮಾಂಚನಗೊಳ್ಳುವುದಿಲ್ಲ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗಾವಕಾಶಗಳಿರುವುದು ನಿಜ. ಆದರೆ ಇದೊಂದೇ ಸರ್ವರೋಗ ಸಂಜೀವಿನಿಯಲ್ಲ.

ಮಾಹಿತಿ ತಂತ್ರಜ್ಞಾನವನ್ನು ಸಮಕಾಲೀನ ಮಹತ್ವದ ಘಟಕವಾಗಿ ನಾವು ಸ್ವೀಕರಿಸಬೇಕೇ ಹೊರತು ಮಾಯೆಕವಿಸುವ ಬಜಾರಾಗಿ ಪರಿವರ್ತಿಸಬೇಕಿಲ್ಲ.

ಉದ್ಯೋಗಾವಕಾಶದಲ್ಲೂ ಮಾಹಿತಿ ತಂತ್ರಜ್ಞಾನದ ಕಂಪನಿಗಳಿಗೆ ಸಾಕಷ್ಟು ಲಾಭವಿದೆ. (Body Shopping) 'ಬಾಡಿ ಶಾಪಿಂಗ್' ನಿಂದ ಈ ಕಂಪನಿಗಳು ತಮ್ಮ ಗರಿಷ್ಠ ಪಾಲು ಪಡೆಯುತ್ತವೆಯೆಂದು ಹೇಳಲಾಗುತ್ತಿದೆ. 'ಬಾಡಿ ಶಾಪಿಂಗ್' ಎಂದರೆ ಕಂಪನಿಗಳು ನೇಮಕ ಮಾಡಿಕೊಂಡ ಉದ್ಯೋಗಿಗಳನ್ನು ಹೊರದೇಶದ ಕಂಪನಿಗೆ ಕಳಿಸಿಕೊಡುವ ಪದ್ಧತಿ. ಹೊರದೇಶದ ಕಂಪನಿಗಳು ಈ ಉದ್ಯೋಗಿಗಳಿಗೆ ಕೊಡುವ ಸಂಭಾವನೆಯಲ್ಲಿ ಅರ್ಧಪಾಲು ನಮ್ಮ ದೇಶದ ಈ ಕಂಪನಿಗೆ ಸಂದಾಯವಾಗುತ್ತದೆ. ಪಾಲಿನ ಪ್ರಮಾಣದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರಬಹುದಾದರೂ 'ಬಾಡಿ ಶಾಪಿಂಗ್'ನಿಂದ ಕಂಪನಿಗಳು ಲಾಭ ಮಾಡುತ್ತಿವೆಯೆಂಬುದು ಅದೇ ವಲಯದ ಖಚಿತ ಮಾತು. ' ಬಾಡಿ ಶಾಪಿಂಗ್' ನ ಕಾರಣಕ್ಕೂ ಈ ಉದ್ಯಮಪತಿಗಳು ಆಂಗ್ಲ ಮಾಧ್ಯಮದ ವಕ್ತಾರರಾಗಿರಲು ,ಸಾಧ್ಯ ಅಥವಾ ಹೊರ ರಾಜ್ಯದಿಂದ ಬರುವ ಮಾಹಿತಿ ತಂತ್ರಜ್ಞಾನ ತಜ್ಞರ ಮಕ್ಕಳಿಗಾಗಿ ಹೊಸ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಇವರಿಗೆ ಸರ್ಕಾರದ ಅನುಮತಿ ಬೇಕಾಗಿದ್ದು, ಅದಕ್ಕಾಗಿ ಆಂಗ್ಲ ಮಾಧ್ಯದ ಪರವಾಗಿ 'ತಾತ್ವಿಕ' ಪ್ರತಿಪಾದನೆ ಮಾಡುತ್ತಿರಬಹುದು. ಮೇಲ್ನೋಟಕ್ಕೆ ನನ್ನ ಈ ಮಾತು ದೂರದ ಊಹೆ ಎನ್ನಿಸಬಹುದು. ಆದರೆ ನನಗೆ ಬಂದಿರುವ ಒಂದು ಮಾಹಿತಿಯ ಪ್ರಕಾರ 'ಮಾಹಿತಿ ತಂತ್ರಜ್ಞಾನದ ಟಾಸ್ಕ್ ಫೋರ್ಸ್'ಸಭೆಯಲ್ಲಿ ಈ ವಿಚಾರ ಚರ್ಚೆಯಾಗಿದೆ. ಈಗಿನ ನೀತಿಯ ಪ್ರಕಾರ ಸರ್ಕಾರವು ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಗಳ ಪ್ರಾರಂಭಕ್ಕೆ ಮಾತ್ರ ಅನುಮತಿ ಕೊಡುತ್ತಿದೆ. ಈಗಿರುವ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಡೊನೇಷನ್ ಜಾಸ್ತಿ; ಡೊನೇಷನ್ ಕೊಟ್ಟರೂ ಪ್ರತಿಷ್ಠಿತ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಸೀಟು ಸಿಗುವುದಿಲ್ಲವೆಂಬ ಅನುಮಾನ. ಸೀಟು ಸಿಕ್ಕಿದರೂ ಸಂಖ್ಯೆಯ ಒತ್ತಡದಿಂದ ನಿರೀಕ್ಷಿತ ಮಟ್ಟದ ಶಿಕ್ಷಣ ದೊರೆಯಲಾರದೆಂಬ ಅಪನಂಬಿಕೆ. ಆದ್ದರಿಂದ ಹೊರರಾಜ್ಯದಿಂದ ಮಾಹಿತಿ ತಂತ್ರಜ್ಞಾನದ 'ಪ್ರತಿಭಾವಂತರನ್ನು'ಆಕರ್ಷಿಸಲು ಮತ್ತು ಬಂದವರಿಗೆ ಅನುಕೂಲ ಮಾಡಿಕೊಡಲು ಸರ್ಕಾರವು ತನ್ನ ಶಿಕ್ಷಣ ಮಾಧ್ಯಮ ನೀತಿಯನ್ನು ಸಡಿಲಿಸಿ ಹೊಸ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ಕೊಡುವಂತೆ ಮಾಡಬೇಕು ಇದಿಷ್ಟು ಟಾಸ್ಕ್ ಫೋರ್ಸ್ ಸಭೆಯಲ್ಲಿ ನಡೆದ ಚರ್ಚೆಯೆಂದು ಬಲ್ಲ ಮೂಲದ ಮಾಹಿತಿ.

ಒಂದು ವೇಳೆ ಇದು ನಿಜವಿದ್ದಲ್ಲಿ 'ಕೆಳವರ್ಗದವರ ಹೆಸರಿನಲ್ಲಿ ನಡೆಸುವ ಮೇಲ್ವರ್ಗದವರ ಮೇಲಾಟ'ಎನ್ನಬೇಕಾಗುತ್ತೆ. (ಸದ್ಯಕ್ಕೆ ಈ ಮಟ್ಟಿಗೆ ಇಳಿದಿರಲಾರರು ಎಂದೇ ಭಾವಿಸೋಣ!)

ಮಾಹಿತಿ ತಂತ್ರಜ್ಞಾನದ ಬಗ್ಗೆ ಬರುತ್ತಿರುವ ಟೀಕೆಗಳಿಗೆ ಉತ್ತರವಾಗಿ 'ದೂರವಾಣಿಗಳು ದೂರದರ್ಶನಗಳ ಆಗಮನವಾದ ಹೊಸದರಲ್ಲಿ ಇದೇ ರೀತಿ ವಾದ ವಿವಾದಗಳು ನಡೆದು ಕಡೆಗೆ ಅವುಗಳು ಮನೆ ಮನೆಯ ಅನಿವಾರ್ಯಗಳಾದವು' ಎಂಬ ಪ್ರತಿಪಾದನೆಯೂ ನಡೆಯುತ್ತಿದೆ. ಮಾಹಿತಿ ತಂತ್ರಜ್ಞಾನಕ್ಕೂ ದೂರದರ್ಶನ ದೂರವಾಣಿಯಂಥ 'ಮಾಧ್ಯಮ'ಗಳಿಗೂ ವ್ಯತ್ಯಾಸವಿದೆ. ದೂರದರ್ಶನದಿಂದ ಕೆಲವು ಕೆಟ್ಟ ಪರಿಣಾಮಗಳಿರಬಹುದುದಾರೂ ಕುಟುಂಬ ಮನರಂಜನೆ ಮಾಧ್ಯಮವಾಗಿ ಅದಕ್ಕೆ ಮನ್ನಣೆ ಸಿಕ್ಕಿದೆ. ದೂರವಾಣಿ ಉಪಯುಕ್ತ ಸಂಪರ್ಕ ಸಾಧನವಾಗಿದೆ. ಈ ಮಾಧ್ಯಮ ಹಾಗೂ ಸಾಧನಗಳು ಸರ್ಕಾರವನ್ನೇ ನಿಯಂತ್ರಿಸಿ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುವಷ್ಟು ಪ್ರಭಾವಶಾಲಿಯಾಗಿಲ್ಲ. ಸರ್ಕಾರವೇ ಇವುಗಳನ್ನು ನಿಯಂತ್ರಣದಲ್ಲಿಡಲು ಪ್ರಯತ್ನಿಸುತ್ತ ಬಂದಿದೆ. ಆದರೆ ಮಾಹಿತಿ ತಂತ್ರಜ್ಞಾನದ ಉದ್ಯಮಿಗಳಿಗೆ ಸರ್ಕಾರದ ನೀತಿ ನಿರೂಪಣೆಯಲ್ಲಿ ಪ್ರಭಾವ ಬೀರುವಷ್ಟು ಶಕ್ತಿ ಲಭ್ಯವಾಗುತ್ತಿದೆ.

ಮಾಹಿತಿ ತಂತ್ರಜ್ಞಾನ ತನಗೆ ತಾನೇ ಸಕಾರಾತ್ಮಕ ವಾದುದಲ್ಲ. ಅದನ್ನು ಸರ್ವರೋಗ ಸಂಜೀವಿನಿಯೆಂಬಂತೆ ಬಿಂಬಿಸುವುದು ಎಷ್ಟು ಅಪಾಯಕಾರಿಯೋ ಪೂರ್ಣ ಸಕಾರಾತ್ಮಕವೆಂದು ಪ್ರತಿಪಾದಿಸುವುದು ಅಷ್ಟೇ ಅಪಾಯಕಾರಿ. ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳುವುದರಲ್ಲಿ ಆದರ ಮಹತ್ವ ಅಡಗಿದೆ. ಕಚೇರಿಗಳಲ್ಲಿ ಕಡತಗಳನ್ನು ಬಿಡುವುದಕ್ಕೆ ಸಾದ್ಯವಿಲ್ಲವಾರೂ ಅವುಗಳ ಮಾಹಿತಿಯನ್ನು ಕಂಪ್ಯೂಟರ್‌ನಲ್ಲಿ ಜೋಪಾನ ಮಾಡಬಹುದು. ಕೆಲವೇ ಸೆಕೆಂಡುಗಳಲ್ಲಿ ಬೇಕಾದ ಮಾಹಿತಿಯನ್ನು ಪಡೆಯಬಹುದು. ಜಗತ್ತಿನ ವಿವಿಧ ಜ್ಞಾನ ಶಾಖೆಗಳ ಜೊತೆಗೆ ಕೊತಲ್ಲೇ ಸಂಪರ್ಕ ಸಾಧಿಸಬಹುದು, ಆದರೆ ಸಮಾಜ, ಶಿಕ್ಷಣ, ಸಂಸ್ಕೃತಿ, ಭಾಷೆ, ಸರ್ಕಾರ - ಹೀಗೆ ಎಲ್ಲದರ ಮೇಲೂ ಸವಾರಿ ಮಾಡಲು ಅವಕಾಶವಾಗಬಾರದು ಎಂಬುದಷ್ಟೇ ನನ್ನ ಕಾಳಜಿ. ಅದು ಇವೆಲ್ಲದರ ಒಂದು ಭಾಗವಾಗಿ ಬೆಳೆಯಬೇಕೆ ಹೊರತು ಇವುಗಳೆಲ್ಲ ಅದರ ಭಾಗವಾಗಬಾರದು.

ಕೊನೆಯದಾಗಿ ಹೇಳುವುದಿಷ್ಟು: ಮಾಹಿತಿ ತಂತ್ರಜ್ಞಾನದ ಮಹತ್ವಕ್ಕೆ ಮನ್ನಣೆ ಕೊಡುತ್ತಲೇ ಅದರ ಇತಿಮಿತಿಗಳನ್ನು ಗೊತ್ತುಮಾಡದಿದ್ದರೆ ಇತಿಹಾಸ ನಮ್ಮನ್ನು ಕ್ಷಮಿಸುವುದಿಲ್ಲ.

■



'ಕನ್ನಡ ಪ್ರಭಾ' 11-3-2001

ರಾಜ್ಯದ ನವನವೀನ ಅಭಿವೃದ್ಧಿ ನೀತಿ; ಕನ್ನಡದ ಭವಿಷ್ಯ ಇಕ್ಕಟ್ಟಿನಲ್ಲಿ.....


ಎಲ್. ಎಸ್.ಗೋಪಾಲ ಕೃಷ್ಣ

[ದೇಶೀ] ಭಾಷೆ.... ಕೃಷ್ಣ ತಾನು ವರದಿಗಾರಳಾಗಿ ಹೋದೆಡೆಯಲ್ಲೆಲ್ಲ ಅದು ಆಕೆಗೆ ಒಂದು ಜಾತಿ ಚಿನ್ಹೆಯಾಗಿ ತೋರಿ ಬಂತು. ಒಮ್ಮೆಗೇ ಅದು ಆಕೆಯ ಅನನ್ಯತೆಯೂ, ಆಕೆಯ ದುಃಖ-ದುಮ್ಮಾನವೂ ಆಗಿತ್ತು.

-ಮೃಣಾಲ್ ಪಾಂಡೆ, ತನ್ನ ಆತ್ಮ ಕಥಾನಕ ಕಾದಂಬರಿ, "ಮೈ ಓನ್ ವಿಟ್ನೆಸ್"ನಲ್ಲಿ

ಕರ್ನಾಟಕ ಸರ್ಕಾರವು ಶ್ರೀ ಎಸ್. ಎಂ. ಕೃಷ್ಣರ ನೇತೃತ್ವದಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ಹೊಸ ಅಭಿವೃದ್ಧಿ ದಾರಿಯಲ್ಲಿ ರಾಜ್ಯವನ್ನು ಕರೆದೊಯ್ಯಲು ದೃಢ ನಿರ್ಧಾರದಿಂದ ಕಾರ್ಯಪ್ರವೃತ್ತವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಕಾರ್ಯಕ್ರಮಗಳು ಜನತೆಗೆ ದಿನೇದಿನೇ ಸ್ಪಷ್ಟವಾಗುತ್ತಿದೆ. ಈ ಹೊಸ ಸಂದರ್ಭದಲ್ಲಿ ಕನ್ನಡದ ಸ್ಥಾನಮಾನವೇನು, ಅದರ ಭವಿಷ್ಯ ಏನಾಗಬಹುದು ಎಂದು ರಾಜ್ಯದ ಚಿಂತನಶೀಲರು ಹಾಗೂ ಸಾಮಾಜಿಕ ಕಾರ್ಯಕರ್ತರು ಚರ್ಚಿಸಿ, ಕಾರ್ಯಪ್ರವೃತ್ತರಾಗಬೇಕಾಗಿದೆ.

ರಾಜ್ಯದ ಅಭಿವೃದ್ಧಿ ಪ್ರಶ್ನೆಯು ಕೇವಲ ಆರ್ಥಿಕ ಹಾಗೂ ತಂತ್ರಜ್ಞಾನ ವಲಯಗಳಿಗೆ ಸಂಬಂಧಿಸಿದುದು, ಆ ವಲಯಗಳ ತಜ್ಞರಿಗೆ ಸಂಬಂಧಿಸಿದುದು ಎಂಬಂತೆ ಸರ್ಕಾರವು ಚಿಂತಿಸುತ್ತಿರುವುದನ್ನೇ ರಾಜ್ಯದ ಸಮಗ್ರ ಹಿತಾಸಕ್ತಿಗಳ ಪರ ಕಾಳಜಿಯಿರುವವರು ಪ್ರಮುಖವಾಗಿ ಪ್ರಶ್ನಿಸಬೇಕಾಗಿದೆ. ಒಂದು ರಾಜ್ಯದ ಜನಸಮುದಾಯದ ಅಭಿವೃದ್ಧಿಯ ದಾರಿಯು ಕೇವಲ ಆರ್ಥಿಕ ಮತ್ತು ತಂತ್ರಜ್ಞಾನದ ಪ್ರಶ್ನೆಯಲ್ಲ, ಅದು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಜನತಾಂತ್ರಿಕ ಆಯಾಮಗಳಿಗೆ ಸಾವಯವ ಸಂಬಂಧವುಳ್ಳ ವಿಷಯ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಕನ್ನಡದ ಬಗ್ಗೆ ಕಾಳಜಿಯಿರುವ ಚಿಂತನಶೀಲರು ತಮ್ಮ ಸಂಕುಚಿತ ಗೆರೆಗಳೊಳಗಿನ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕಿರುಗೂಡುಗಳ ಆಚೆ ಬರಬೇಕಾಗಿದೆ. ಕನ್ನಡ ಭಾಷೆ ಹಾಗೂ ಜನಸಂಸ್ಕೃತಿಯ ಉಳಿವು ಇಂದು ಒಂದು ರಾಜಕೀಯ-ಆರ್ಥಿಕ ಪ್ರಶ್ನೆಯಾಗಿದೆ, ಅಭಿವೃದ್ಧಿ ಮಾದರಿಯೊಂದಿಗೆ ಹಿಂದೆಂದೂ ಆಗಿರದಿದ್ದ ಮಟ್ಟದಲ್ಲಿ ತಳುಕು ಹಾಕಿಕೊಂಡಿದೆ ಎಂಬುದನ್ನು ಅರಿತು, ಕಾರ್ಯಪ್ರವೃತ್ತರಾಗಬೇಕಿದೆ.



ಈ ಸ್ಪಷ್ಟ ನಿಲುವು ತಾಳುವುದರೊಂದಿಗೆ, ಕನ್ನಡದ ಚಿಂತನಶೀಲರು ಹೊಸ ಬದಲಾವಣೆಗಳಿಗೆ ಯಾಂತ್ರಿಕವಾಗಿ, ಹಳೆಯ ಸಿದ್ಧಮಾದರಿಯ ನಿಲುವುಗಳೊಂದಿಗೇ ಪ್ರತಿಕ್ರಿಯಿಸುವ ಬದಲು, ಕನ್ನಡದ ಹಿತ ಬಲಿ ಕೊಡದೆಯೇ, ಸೃಜನಶೀಲವಾಗಿ ಹೇಗೆ ಸ್ಪಂದಿಸಬೇಕೆಂಬ ಬಗ್ಗೆ ಜವಾಬ್ದಾರಿಯಿಂದ ಚಿಂತಿಸಬೇಕಾಗಿದೆ.

ಸರ್ಕಾರದ ಹೊಸ, ಆಕ್ರಮಣಶೀಲ ಆರ್ಥಿಕ-ತಾಂತ್ರಿಕ ಕಾರ್ಯಕ್ರಮಗಳು ಕರ್ನಾಟಕ ರಾಜ್ಯಕ್ಕೆ ಜನಸಮುದಾಯಕ್ಕೆ ನೀಡುವ ದರ್ಶನ ಯಾವುದು ಎಂಬ ಪ್ರಶ್ನೆಯೂ ಏಳುತ್ತದೆ. ನಿಜ, ಸರ್ಕಾರ ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿಯು ಕರ್ನಾಟಕ ರಾಜ್ಯವನ್ನು ಜಾಗತೀಕರಣಗೊಂಡ ಪ್ರಪಂಚದಲ್ಲಿ (ಈ ಪರಿಕಲ್ಪನೆಯ ಅರ್ಥ ಏನೇ ಇರಲಿ) ಹೊಳೆಯಿಸುವ ತದೇಕ ದೃಷ್ಟಿಯನ್ನು ಹೊಂದಿದೆ. ಮಾಹಿತಿ ತಂತ್ರಜ್ಞಾನ ಹಾಗೂ ಜಾಗತಿಕ ಬಂಡವಾಳಗಳೆಂಬ ನವೀನ ಶಕ್ತಿಗಳು ಸಾಹಸಿ ಉದ್ಯಮಶೀಲತೆ ಮತ್ತು ಉದ್ಯೋಗ ಕ್ಷೇತ್ರ-ಎರಡೂ ವಲಯಗಳಲ್ಲಿ ಗರಿಷ್ಠ ಅವಕಾಶಗಳನ್ನು ನೀಡುತ್ತವೆ, ಆದ್ದರಿಂದ ಈ ಮುನ್ನುಗ್ಗುವಿಕೆ ಅನಿವಾರ್ಯ ಎಂದು ಸರ್ಕಾರವು ಭಾವಿಸುತ್ತದೆ.

ಹೊಸ ಅಭಿವೃದ್ಧಿ ಮಾದರಿಯ ಯಶಸ್ಸನ್ನು ಅಳೆಯಲು ಉತ್ಪಾದಕತೆ, ಕಾರ್ಯಕ್ಷಮತೆ, ಉತ್ತರದಾಯಿತ್ವ, ನವನವೀನ ತಂತ್ರಜ್ಞಾನ ಅಳವಡಿಕೆಗೆ ಸನ್ನದ್ಧತೆ - ಇಂತಹ ಮಾನದಂಡಗಳನ್ನು ಕೆಲವರ್ಗದ ತಜ್ಞರು ಮುಂದಿಡುತ್ತಿದ್ದಾರೆ. ಈ ಮಾನದಂಡಗಳಲ್ಲಿರುವ ಸಕಾರಾತ್ಮಕ ಮೌಲ್ಯಗಳನ್ನು ಅಲ್ಲಗಳೆಯಲು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಅವು ಜಡ್ಡುಗಟ್ಟಿದ್ದ ಅಭಿವೃದ್ಧಿ ಕ್ಷೇತ್ರವನ್ನು ಅಲ್ಲಾಡಿಸಲು ಬೇಕಾಗಿದ್ದ ಮಾನದಂಡಗಳೇ.

ಹಾಗೆಯೇ, ಸಾಮಾಜಿಕ ನ್ಯಾಯ, ಅಸಮಾನತೆ ಕುಗ್ಗಿಸುವುದು, ಜನತಂತ್ರ ಪ್ರಕ್ರಿಯೆಯನ್ನು ಹಿಗ್ಗಿಸುವುದು, ಶಾಂತಿ-ಸಮಾಧಾನಗಳ ಜೀವನ ವಿಧಾನ-ಇಂತಹ ಮಾನದಂಡಗಳಿಂದಲೂ ಅಭಿವೃದ್ಧಿ ಮಾದರಿಯ ಯಶಸ್ಸನ್ನು ಅಳೆಯಲು ತಜ್ಞರು ಹಾಗೂ ಸರ್ಕಾರ ತೆರೆದ ಮನಸ್ಸಿನಿಂದ ಒಪ್ಪಬೇಕಿದೆ.

ಅಂತಹ ಮಾನದಂಡಗಳಲ್ಲಿ, ಹೊಸ ಅಭಿವೃದ್ಧಿ ಮಾದರಿಯ ಲಾಭ-ನಷ್ಟಗಳನ್ನು ಅಳೆಯುವಲ್ಲಿ ಕನ್ನಡ ಭಾಷೆಯೂ ಅತಿ ಮುಖ್ಯವಾದುದು ಎಂದು ಒತ್ತಿ ಹೇಳಬೇಕಾಗಿದೆ. ಕರ್ನಾಟಕ ಜನಸಮುದಾಯದ ಸಾಂಸ್ಕೃತಿಕ ಅನನ್ಯತೆ ಹಾಗೂ ಕ್ರಿಯಶೀಲತೆಯ ಸಾವಯವ ತನ್ನ ಗುರಿಗಳಲ್ಲಿ ಒಂದನ್ನಾಗಿ ಮಾಡಿಕೊಂಡಿದೆಯೇ ಎಂಬ ಪ್ರಶ್ನೆಗೆ ಸರ್ಕಾರ ಗಂಭೀರವಾಗಿ ಉತ್ತರ ಕಂಡುಕೊಳ್ಳಬೇಕಾಗಿದೆ. "ಕರ್ನಾಟಕ ಬೆಳಗಲು ಕನ್ನಡ ಅಳಿಯುವುದು ಅನಿವಾರ್ಯ" ಎಂಬ ಧೋರಣೆಯನ್ನು ಅಧಿಕಾರಸ್ಥರು ತಾಳುತ್ತಿದ್ದಾರೆಯೇ ಎಂಬ ತೀವ್ರ ಅನುಮಾನ ಉಂಟಾಗುತ್ತಿದೆ.

ಹಾಗೆ ನೋಡಿದರೆ, ಕನ್ನಡದ ಕಾರ್ಯಕ್ಷೇತ್ರ ಸಂಕುಚಿತಗೊಳ್ಳುತ್ತ ಅಡುಗೆಮನೆ ಭಾಷೆಯಾಗಷ್ಟೇ ಉಳಿಯುವ ಅಪಾಯಕ್ಕೆ ಇಂದಿನ ಸರ್ಕಾರದ ನೀತಿಗಳಷ್ಟೇ ಕಾರಣವಲ್ಲ. ಕನ್ನಡದ ಇಂದಿನ ಪರಿಸ್ಥಿತಿಗೆ ಹಿಂದಿನ ಅನೇಕ ಸರ್ಕಾರಗಳ ರಾಜಕೀಯ ಇಚ್ಛಾಶಕ್ತಿ ಹಾಗೂ ಕತೃತ್ವಶಕ್ತಿಯ ಕೊರತೆಯೇ ಕಾರಣ. ಜೊತೆಗೆ, ದಶಕಗಳಿಂದಲೂ ಅವ್ಯಾಹತವಾಗಿ ಮಧ್ಯಮವರ್ಗಗಳಲ್ಲಿ ಕಂಡುಬಂದಿರುವ ಏರುದನಿಯ, ಮಿತಿಯಿಲ್ಲದ ಇಂಗ್ಲಿಷ್ ಪ್ರೀತಿಯೂ ಕಾರಣ. ಇದಕ್ಕೆ ಪರ್ಯಾಯವಾಗಿ, ಇಂಗ್ಲೀಷಿನಲ್ಲಿ ಪರಿಣತಿಯಿಲ್ಲದ, ಕನ್ನಡ ಮಾತ್ರ ತಿಳಿದಿರುವ ಕರ್ನಾಟಕ ಜಸಮುದಾಯದ ಬಹುದೊಡ್ಡ ಭಾಗದ ಕನ್ನಡಪರ ಆಶಯವು ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳ್ಳಬೇಕಿತ್ತು. ಸಂಘಟಿತಗೊಳ್ಳಬೇಕಿತ್ತು. ಹಾಗಾಗದಿದ್ದುದೂ ಕನ್ನಡದ ಇಂದಿನ ಪರಿಸ್ಥಿತಿಗೆ ಕಾರಣ.

ಇಂಗ್ಲೀಷಿನ ಸ್ಥೂಲಜ್ಞಾನದೊಂದಿಗೆ, ಕನ್ನಡ ಪ್ರಮುಖವಾಗಿ ಬಲ್ಲ ಜನರಿಗೆ ಉದ್ಯೋಗ, ಉತ್ಪಾದನೆ, ಉದ್ಯಮಶೀಲತೆ ಹಾಗೂ ಸೇವಾ ಕ್ಷೇತ್ರಗಳಲ್ಲಿ ಅವಕಾಶ ಒದಗಿಸುವ ಅಭಿವೃದ್ಧಿ ಮಾದರಿಯನ್ನು ಕಳೆದ ದಶಕಗಳಲ್ಲಿ ಸರ್ಕಾರಗಳು ಅನುಸರಿಸಿದ್ದರೆ, ಕನ್ನಡವನ್ನು ಉಳಿಸಿ, ಬೆಳೆಸಬಹುದಿತ್ತು.

ಕನ್ನಡಕ್ಕೆ ಮುಳುವಾಗುವ ರೀತಿಯಲ್ಲಿ ನಡೆಯುತ್ತಿರುವ ಅತಿರಫ್ತು, ಆಧಾರಿತ ಉನ್ನತ ತಂತ್ರಜ್ಞಾನಗಳ ಅಭಿವೃದ್ಧಿ ಮಾದರಿಗಾಗಿ ಶ್ರೀ ಎಸ್. ಎಂ. ಕೃಷ್ಣರ ಸರ್ಕಾರವನ್ನು ಮಾತ್ರವೇ ದೂಷಿಸುವುದು ಸರಿಯಾಗಲಾರದು. ಸ್ವದೇಶಿ ತತ್ವದ ಪರವೆಂದು ಭಾವಿಸಲಾಗಿದ್ದ ಭಾ.ಜ.ಪ. ಸರ್ಕಾರವೂ ಉಲ್ಟಹೊಡೆದು, ಇದನ್ನೇ ಮಾಡುತ್ತಿದೆ. ತನ್ನದು ಸಮಾಜವಾದಿ ಪಕ್ಷ ಎಂದು ಹೇಳಿಕೊಳ್ಳುವ ಶ್ರೀ ಮುಲಯಂ ಸಿಂಗ್ ಯಾದವ್, "ಸಮಾಜವಾದಿ" ಶ್ರೀ ಜಾರ್ಜ್ ಫರ್ನಾಂಡಿಸ್, ಜಯಪ್ರಕಾಶರ "ಸಂಪೂರ್ಣ ಕ್ರಾಂತಿ" ಚಳುವಳಿಯಿಂದ ಬಂದ ಶ್ರೀಶರದ್ ಯಾದವ್ - ಇವರಾರೂ ದೇಶೀಯ ಹಾಗೂ ಪ್ರಾದೇಶಿಕ ಭಾಷೆಗಳಿಗೆ ಮುಳುವಾಗುತ್ತಿರುವ ರೀತಿಯಲ್ಲಿ ನಡೆಯುತ್ತಿರುವ ನವನವೀನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಶ್ನಿಸುತ್ತಿಲ್ಲ. ಆತಂಕದ ವಿಷಯವೆಂದರೆ ಹತ್ತು ವರ್ಷಗಳಿಂದ ನಡೆದು ಬರುತ್ತಿರುವ ಜಾಗತೀಕರಣದ ರೀತಿ-ರಿವಾಜುಗಳ ಇದುವರೆಗಿನ ಸಾಮಾಜಿಕ ಪರಿಣಾಮಗಳ ಬಗ್ಗೆ ಆಳವಾದ ಸಮಗ್ರ ಮೌಲ್ಯಮಾಪನಕ್ಕೆ ಅಧಿಕಾರಸ್ಥರು ಸಿದ್ಧವಿಲ್ಲದಿರುವುದು. ಜಾಗತೀಕರಣ ಅನಿವಾರ್ಯವೇ ಆದಲ್ಲಿ, ಭಾರತದ ವೈವಿಧ್ಯಮಯ ಭಾಷೆ, ಜೀವನ ವಿಶಿಷ್ಟತೆಗಳನ್ನು ಬಲಿಗೊಡದ, ಭಾರತಕ್ಕೇ ವಿಶಿಷ್ಟವಾದ ಜಾಗತೀಕರಣದ ರೀತಿ-ನೀತಿಗಳೇನಾಗಿರಬೇಕು ಎಂಬ ಬಗ್ಗೆ ಯಾವ ಅಧಿಕಾರಸ್ಥರೂ ಚಿಂತಿಸುತ್ತಿಲ್ಲ.

ರಾಜ್ಯವು ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿಯು, ಕನ್ನಡ ಭಾಷೆಗೆ ಹಿಂದೆಂದೂ ಆಗಿರದ ರೀತಿಯಲ್ಲಿ ಕುಂದುಂಟು ಮಾಡುತ್ತಿದೆ. ಜಾಗತಿಕ ಹೂಡಿಕೆದಾರರ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಕರ್ನಾಟಕದ ಗೌರವಾನ್ವಿತ ಮಾಹಿತಿ ತಂತ್ರಜ್ಞಾನ ಉದ್ಯಮಿ ಶ್ರೀ ನಾರಾಯಣ ಮೂರ್ತಿಯವರು, ಕನ್ನಡ ಮಾಧ್ಯಮದ ಬದಲು ರಾಜ್ಯಾದ್ಯಂತ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದ್ದಾರೆ. ಕನ್ನಡ ಮಾಧ್ಯಮದ ಪ್ರಶ್ನೆಯು ಕೆಲವರಿಗೇ ಸೀಮಿತವಾದ ಭಾವುಕ ವಿಷಯವಾಗಷ್ಟೇ ಉಳಿದಿದೆ ಎಂದೂ ಅವರು ವಾದಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯು ನೂರಾರು ಕನ್ನಡ ಮಾಧ್ಯಮ ಶಾಲೆಗಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಾಗಿ ಪರಿವರ್ತಿಸಲು ಒಪ್ಪಿಗೆ ನೀಡಿದೆ. ಮಾಹಿತಿ ತಂತ್ರಜ್ಞಾನವನ್ನು ಶಾಲೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಪ್ರಾರಂಭ ಮಟ್ಟದಿಂದಲೇ ಒಟ್ಟಿಗೆ ಕಲಿಸಲು ಶಿಕ್ಷಣ ಸಚಿವರು ನಿರ್ಧರಿಸಿದ್ದಾರೆ. ಅಂತರ ರಾಷ್ಟ್ರೀಯ ಶಾಲೆಗಳೆಂದು ಹಣೆಪಟ್ಟಿಯಿರುವ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಸರ್ಕಾರವೇ ಪ್ರೋತ್ಸಾಹ ನೀಡುತ್ತಿದೆ. ರಾಜ್ಯ ಪಠ್ಯಕ್ರಮದಿಂದ ಕೇಂದ್ರೀಯ ಪಠ್ಯಕ್ರಮಕ್ಕೆ ಬದಲಾವಣೆ ಹೊಂದಲು ಶಾಲೆಗಳಿಗೆ ಸರ್ಕಾರವು ಸುಲಭವಾಗಿ ಪರವಾನಗಿ ನೀಡುತ್ತಿದೆ. ಮಾಹಿತಿ ತಂತ್ರಜ್ಞಾನವನ್ನು ಗ್ರಾಮಾಂತರ ಜಿಲ್ಲೆಗಳಲ್ಲಿ ಕಲಿಸುವ "ಯುವ ಕಾಂ" ಕಾರ್ಯಕ್ರಮದಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಕೆ ಕಡ್ಡಾಯವಲ್ಲ.

ಮೊದಲನೇ ತರಗತಿಯಿಂದ ಕಾಲೇಜಿನವರೆಗೆ ಇಂಗ್ಲಿಷ್ ಮಾಧ್ಯಮದ ಮೂಲಕ ಎಲ್ಲ ವಿಷಯಗಳನ್ನೂ ಅಭ್ಯಾಸ ಮಾಡುವುದರಿಂದ ಎಂತಹ ದುಃಸ್ಥಿತಿ ತಲುಪಿದ್ದೇವೆಂದರೆ, ಈ ಲೇಖಕನೂ ಸೇರಿ ಯಾವುದೇ ಶಿಕ್ಷಿತನೂ ಮಾಹಿತಿಯಾಧಾರಿತ ವಿಷಯಗಳ ಬಗ್ಗೆ ಕನ್ನಡದಲ್ಲಿ ಸುಲಲಿತವಾಗಿ ಮಾತನಾಡುವುದಾಗಲೀ, ಬರೆಯುವುದಾಗಲೀ, ಅಭಿವ್ಯಕ್ತಿಸುವುದಾಗಲೀ ಮಾಡಲಾರ. ಸಾರ್ವಜನಿಕ ಸಭೆ, ಸಮಾರಂಭ, ಮಾತುಕತೆಗಳನ್ನು ಗಮನಿಸಿದರೆ, ವಿದ್ಯುನ್ಮಾನ ಮಾಧ್ಯಮಗಳನ್ನು ನೋಡಿದರೆ,

ಇದು ವೇದ್ಯವಾಗುತ್ತದೆ. ಕನ್ನಡದಲ್ಲಿ ಬಹಳ ಸೂಕ್ತವಾದ, ಸುಂದರವಾದ ಪದಗುಚ್ಛಗಳಿದ್ದರೂ, ತಾಂತ್ರಿಕ ಭಾಷಾ ಸಂಪತ್ತಿದ್ದರೂ, ಕನ್ನಡದಲ್ಲಿ ಚಿಂತನೆ ನಡೆಸುವ, ಮಥಿಸುವ, ಪರಿಕಲ್ಪಿಸುವ ಶಕ್ತಿಯೇ ನಮ್ಮಲ್ಲಿ ಇಂಗಿ ಹೋಗಿದೆ. ಯಾವುದೇ ವಿಷಯದ ಬಗ್ಗೆಯಾದರೂ ನಾವು ಮೊದಲು ಇಂಗ್ಲಿಷಿನಲ್ಲಿ ಚಿಂತಿಸಿ, ಅದನ್ನು ಕನ್ನಡಕ್ಕೆ ತರ್ಜುಮೆಮಾಡಿ, ಮಾತನಾಡುವ ಅನಿವಾರ್ಯ ಪರಿಸ್ಥಿತಿಗೆ ಪಕ್ಕಾಗಿದ್ದೇವೆ. ವಿವಿಧ ಜ್ಞಾನಶಿಸ್ತುಗಳ ಬಗ್ಗೆ ಕನ್ನಡದಲ್ಲಿ ಚಿಂತಿಸಿ, ಅಭಿವ್ಯಕ್ತಿಸುವ ಕನ್ನಡಿಗನ ಶಕ್ತಿಯೇ ಉಡುಗಿಹೋಗುತ್ತಿದೆ.

ತಾಂತ್ರಿಕ ಹಾಗೂ ವಾಣಿಜ್ಯ ಕ್ಷೇತ್ರಗಳು ಒಳಗೊಂಡಂತೆ ಎಲ್ಲ ಕ್ಷೇತ್ರಗಳಲ್ಲೂ ಕನ್ನಡದ ಬಳಕೆಯು ಅನಿವಾರ್ಯವಾಗುವಂತಹ ನೀತಿಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಸರ್ಕಾರದ ಕರ್ತವ್ಯ. ಇಂಗ್ಲಿಷ್ ಭಾಷೆಯನ್ನು ಅಷ್ಟಾಗಿ ತಿಳಿಯದ, ಕನ್ನಡ ಬಳಕೆಯ ಪರವಾಗಿರುವ ರಾಜ್ಯ ಜನಸಂಖ್ಯೆಯ ಬಹುದೊಡ್ಡ ಭಾಗ ಇದನ್ನು ಸ್ವಾಗತಿಸುತ್ತದೆ.

ಶ್ರೀ ನಾರಾಯಣ ಮೂರ್ತಿಯವರು ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತ "ಜಾಗತೀಕರಣ"ವನ್ನು ಹೀಗೆ ನಿರ್ವಹಿಸಿದ್ದಾರೆ : ಜಗತ್ತಿನಲ್ಲಿ "ಎಲ್ಲಿ ಬಂಡವಾಳ ದೊರೆಯುವುದೋ, ಅಲ್ಲಿಂದ ಬಂಡವಾಳ ಪಡೆದು, ಎಲ್ಲಿ ಉತ್ಪಾದನೆ ಮಾಡಲು ಸಾಧ್ಯವೋ ಅಲ್ಲಿ ಉತ್ಪಾದನೆ ನಡೆಸಿ, ಎಲ್ಲಿ ಉತ್ಪನ್ನಗಳನ್ನು ಮಾರಲು ಸಾಧ್ಯವೋ ಅಲ್ಲಿ ಮಾರಾಟ ಮಾಡುವುದೇ ಜಾಗತೀಕರಣ". ಇಂತಹ ಪರಿಕಲ್ಪನೆಯಲ್ಲಿ "ಮಾನವ"ನ ಸ್ಥಾನವೇನು ಎಂಬ ಮೂಲಭೂತ ಪ್ರಶ್ನೆ ಏಳುತ್ತದೆ. ಜೊತೆಗೆ, ಅವನ ಭಾಷೆ, ಬಾಳ್ವೆ, ಜೀವನ ವಿಧಾನ, ಸಾಂಸ್ಕೃತಿಕ ಅನನ್ಯತೆಗಳ ಸ್ಥಾನವೇನು ಎಂಬ ಪ್ರಶ್ನೆಯೂ ಎದುರಾಗುತ್ತದೆ. ಶ್ರೀ ಮೂರ್ತಿಯವರ ಆರ್ಥಿಕ ಪರಿಕಲ್ಪನೆಯಲ್ಲಿ, ಮಾನವನು ಅರ್ಥಶಾಸ್ತ್ರದ ಕೇಂದ್ರ ಕಾಳಜಿಯಾಗಿ, ಆ ಶಾಸ್ತ್ರವು ಅವನ ಸುತ್ತಅವನಿಗಾಗಿ ನೇಯಲ್ಪಟ್ಟ ಜ್ಞಾನಶಿಸ್ತಾಗುವ ಬದಲು, ಅದು ಮಾನವನಿಂದ ಪೂರ್ಣವಾಗಿ ಬೇರ್ಪಟ್ಟ, ಸರ್ವಸ್ವತಂತ್ರ ಪರಿಕಲ್ಪನೆ ಹಾಗೂ ನಿಯಮಗಳ ಜ್ಞಾನಶಾಖೆಯಾಗಿ ಸ್ಥಿತ್ಯಂತರ ಹೊಂದಿರುತ್ತದೆ. ಅಂತಹ ಪರಿಕಲ್ಪನೆಯಲ್ಲಿ "ಮಾನವ" ಮೂಲೆಗೆ ಎಸೆಯಲ್ಪಟ್ಟು, ಆ ಶಾಸ್ತ್ರ ಕೊಟ್ಟಷ್ಟನ್ನು ಮಾತ್ರ ಪಡೆವ, ಬಡ ಪ್ರಾಣಿಯಾಗುತ್ತಾನೆ. ಆದರೆ, ಇಂತಹ ಮೂಲಭೂತ ಮಾನವೀಯ ಪ್ರಶ್ನೆಗಳನ್ನು ಎತ್ತಲು ನವನವೀನ ತಂತ್ರಶಾಸ್ತ್ರಿಗಳಿಗೆ ವ್ಯವಧಾನವಾದರೂ ಎಲ್ಲಿದೆ?

ಶ್ರೀ ನಾರಾಯಣ ಮೂರ್ತಿಯವರು ಮುಂದುವರೆದು, ಕನ್ನಡ ಭಾಷೆಯು ತಮ್ಮ ಜಾಗತೀಕರಣ ಪರಿಕಲ್ಪನೆಗೆ ಹೊಂದದಿರುವುದರಿಂದ, ಅದರ ಸ್ಥಾನದಲ್ಲಿ, ಶಿಕ್ಷಣದಲ್ಲಿ ಭಾಷಾ ಮಾಧ್ಯಮವೂ ಸೇರಿ ಎಲ್ಲ ಕ್ಷೇತ್ರಗಳಲ್ಲೂ ಪೂರ್ಣ ಪ್ರಮಾಣದಲ್ಲಿ ಇಂಗ್ಲಿಷ್ ಭಾಷೆಯನ್ನು ತರೋಣ ಎಂದು ಸೂಚಿಸುತ್ತಾರೆ. ನವೀನ ಅಭಿವೃದ್ಧಿ ಮಾದರಿಯಲ್ಲಿ ಕರ್ನಾಟಕದ ಜನತೆ ಬಾಳಿ ಬದುಕಬೇಕಾದರೆ, ಕನ್ನಡ ತನ್ನೆಲ್ಲ ಆಶೋತ್ತರಗಳನ್ನು, ಸಾಧ್ಯತೆಗಳನ್ನು ಬಿಟ್ಟುಕೊಡಬೇಕು ಎಂಬ ಬಹಳ ಅಪಾಯಕಾರಿಯಾದ ವಾದವನ್ನು ಅವರು ಸೂಚ್ಯವಾಗಿ ಹೇಳುತ್ತಾರೆ. ಎಲ್ಲ ಸ್ಪೈಜ ವಾಸ್ತವಗಳಿಗೂ ಕಣ್ಮುಚ್ಚುವ ಅವರು, ಕನ್ನಡಪರ ವಾದವನ್ನು, ಅವರದೇ ಮಾತುಗಳಲ್ಲಿ, "ಕೇವಲ ಭಾವೋದ್ವೇಗದ ವಿಷಯ"ವಾಗಿ ಕಾಣುತ್ತಾರೆ.

ಜಾಗತೀಕರಣ ಒಂದೊಮ್ಮೆ ಅನಿವಾರ್ಯವೆಂದಾಗಲೂ, ಕನ್ನಡ ಮತ್ತು ಕನ್ನಡಿಗರ ಉಳಿವು ಹಾಗೂ ಬೆಳವಣಿಗೆಗೆ ಜಾಗತೀಕರಣ ಪರಿಕಲ್ಪನೆ ಹಾಗೂ ಅದರ ನೀತಿ ಮತ್ತು ಕಾರ್ಯಕ್ರಮಗಳಲ್ಲಿ ಸರ್ಕಾರವು ಯಾವ "ಕನಿಷ್ಠ ತಿದ್ದುಪಡಿ"ಗಳನ್ನು ಕೈಗೊಳ್ಳಬೇಕು ಎಂದು ಸೂಚಿಸುವ ಜವಾಬ್ದಾರಿಯೂ ಕನ್ನಡಪರ

ಚಿಂತನಶೀಲರ ಮೇಲಿದೆ. ನಾವು ಇಲ್ಲಿ ಗಾಂಧೀಜಿಯವರಿಂದ ಪಾಠ ಕಲಿಯಬೇಕು. ತಪ್ಪು ನೀತಿಗಳನ್ನು ವಿರೋಧಿಸುವವುದರೊಂದಿಗೇ ಪರ್ಯಾಯ, ಕಾರ್ಯಸಾಧ್ಯ, ಸೂಕ್ತ ನೀತಿ ಹಾಗೂ ಕಾರ್ಯಕ್ರಮಗಳನ್ನು ಸೂಚಿಸುವುದೂ ನಮ್ಮ ಜವಾಬ್ದಾರಿ ಎಂದು ಗಾಂಧೀಜಿ ಭಾವಿಸುತ್ತಿದ್ದರು.

ನವನವೀನ ಅಭಿವೃದ್ಧಿ ಮಾದರಿಯ ಉತ್ಪನ್ನಗಳಿಗೆ ರಫ್ತು ಆಧಾರಿತ ಮಾರುಕಟ್ಟೆ ಮಾತ್ರವಷ್ಟೇ ಅಲ್ಲ, ಕರ್ನಾಟಕ ರಾಜ್ಯದೊಳಗೇ ಒಂದು ಆಂತರಿಕ ಮಾರುಕಟ್ಟೆ ಇದೆ, ಗ್ರಾಹಕರಿದ್ದಾರೆ ಎಂಬುದನ್ನು ಸರ್ಕಾರ ಮೊದಲು ಸ್ಪಷ್ಟವಾಗಿ ಗುರುತಿಸಬೇಕು.

ಕರ್ನಾಟಕದೊಳಗಿನ ಮಾರುಕಟ್ಟೆ ಹಾಗೂ ಗ್ರಾಹಕರಿಗೆ ಒದಗಿಸುವ ಉತ್ಪನ್ನ, ಸೇವೆಗಳು ಮತ್ತು ಅವುಗಳಿಗೆ ಅಗತ್ಯವಾದ ಉತ್ಪಾದನಾ ಪ್ರಕ್ರಿಯೆಗಳಲ್ಲಿ ಕನ್ನಡವನ್ನೂ ಹಾಗೂ ರಾಜ್ಯದೊಳಗಿನ ಸಹೋದರ ಭಾಷೆಗಳನ್ನು ಮಾತ್ರ ಉಪಯೋಗಿಸಬೇಕು. ರಾಜ್ಯದ ಆಚೆಗಿನ ರಫ್ತು ಆಧಾರಿತ ಉತ್ಪನ್ನ, ಸೇವೆಗಳಿಗೆ ಮೊದಲು ಹಿಂದಿ, ನಂತರ ಇಂಗ್ಲಿಷ್ ಭಾಷೆಯನ್ನು ದುಡಿಸಿಕೊಳ್ಳಬೇಕು.

ಇಂತಹ ರಫ್ತು ಆಧಾರಿತ ಉತ್ಪನ್ನ, ಸೇವೆಗಳಿಗೆ ಬೇಕಾಗುವ ನಿರ್ದಿಷ್ಟ ಮಾದರಿಯ ಇಂಗ್ಲಿಷನ್ನು ಪರಿಣಾಮಕಾರಿಯಾಗಿ ಕಲಿಸುವ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತರಬೇಕು. ಅದೂ, ಕನಿಷ್ಠ ಎಷ್ಟು ಪ್ರಮಾಣದಲ್ಲಿರಬೇಕೋ ಅಷ್ಟು ಪ್ರಮಾಣದಲ್ಲಿ ಮಾತ್ರ ಕಲಿಸುವುದನ್ನು ಅಂತಹ ಯೋಜನೆಯಲ್ಲಿ ಅಳವಡಿಸಿ ಜಾರಿಗೆ ತರಬೇಕು. ಇಂತಹ ಇಂಗ್ಲಿಷ್ ಕಲಿಕೆಯ ಪರಿಕಲ್ಪನೆಯೇ "ನಿರ್ದಿಷ್ಟ ಅಗತ್ಯಗಳಿಗಾಗಿ ಕಲಿಯುವ ಭಾಷೆ" ಎನ್ನಿಸಿಕೊಳ್ಳುತ್ತದೆ.

ಜೊತೆಗೆ, ಶಾಲಾಹಂತದಲ್ಲಿ, ಇಂಗ್ಲಿಷ್ ಭಾಷೆಯನ್ನು ಕನ್ನಡಕ್ಕೆ ಸಂವಾದಿಯಾಗಿ, ಸಮಾನಾಂತರ ಮಟ್ಟದಲ್ಲಿ ಕಲಿಸುವ ಪರಿಪಾಠವನ್ನು ನಾವು ಕೈಬಿಡಬೇಕು. ಇಂಗ್ಲಿಷ್ ಭಾಷಾ ಪಠ್ಯಕ್ರಮದ ಬದಲು, ಸ್ಪಷ್ಟವಾಗಿ ಗುರುತಿಸಲ್ಪಟ್ಟ ಅಗತ್ಯಗಳನ್ನು ಪೂರೈಸುವ ಇಂಗ್ಲಿಷ್ ಭಾಷಾ ಪಠ್ಯಕ್ರಮವನ್ನು ರೂಪಿಸಿ, ಜಾರಿಗೊಳಿಸಬೇಕು.

ನಿರ್ದಿಷ್ಟ ಅಗತ್ಯಗಳಿಗಾಗಿ ನಮಗೆ ಬೇಕಾಗುವ ಇಂಗ್ಲಿಷನ್ನು ಕಲಿಸುವುದು ಒಂದು ಬೃಹತ್ ಶೈಕ್ಷಣಿಕ ಯಾಗವಲ್ಲ. ಅದೊಂದು ಸರಳ ಪ್ರಕ್ರಿಯೆ ಎಂದು ಸಾಧಿಸಿ ತೋರಿಸಲು, ನಾವು ಇಂಗ್ಲಿಷ್ ಭಾಷಾ ಕಲಿಕೆ ಬಗ್ಗೆ ವಿಶೇಷ ಅಧ್ಯಯನ ಹಾಗೂ ಸಂಶೋಧನೆ ನಡೆಸುವ ಸಂಸ್ಥೆಗಳ ಸಹಾಯ ಪಡೆದು, ಕಲಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕು. ಹೈದರಾಬಾದಿನಲ್ಲಿರುವ "ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಕೇಂದ್ರೀಯ ಸಂಸ್ಥೆ", "ಇಂಗ್ಲಿಷ್ ಕಲಿಸುವ ಪ್ರಾದೇಶಿಕ ಸಂಸ್ಥೆಗಳು" ಹಾಗೂ ಇತರ ಸಂಶೋಧನಾ ಕೇಂದ್ರಗಳ ಸಹಾಯ ಪಡೆದು, ಸರಳವಾಗಿ, ಸುಲಭವಾಗಿ ಹಾಗೂ ಪರಿಣಾಮಕಾರಿಯಾಗಿ ಇಂಗ್ಲಿಷ್ ಕಲಿಸುವ ವಿಧಾನಗಳ ಬಗ್ಗೆ ಶಿಕ್ಷಕರಿಗೆ ಪೂರ್ಣಮಟ್ಟದ ತರಬೇತಿ ನೀಡಬೇಕು.

ಜೊತೆಗೆ, ಉತ್ತಮ ಶೈಕ್ಷಣಿಕ ಗುಣಮಟ್ಟದ ವ್ಯಕ್ತಿಗಳನ್ನು ಶಿಕ್ಷಕರಾಗಲು ಆಕರ್ಷಿಸುವ ಮತ್ತು ಅಂತಹವರನ್ನು ಮಾತ್ರ ನೇಮಿಸಿಕೊಳ್ಳುವ ರಾಜಕೀಯ ಇಚ್ಛಾಶಕ್ತಿಯನ್ನು ಸರ್ಕಾ ಪ್ರಕಟಿಸಬೇಕು. ಒಂದು ಪೀಳಿಗೆಯ ಶಿಕ್ಷಕರು ಮೂವತ್ತು ವರ್ಷಗಳ ತಮ್ಮ ಸೇವಾವಧಿಯಲ್ಲಿ ಕನಿಷ್ಠ ಮೂರು ತಲೆಮಾರುಗಳ ವಿದ್ಯಾರ್ಥಿಗಳ ಸಾಫಲ್ಯ-ವೈಫಲ್ಯಗಳಿಗೆ ಕಾರಣರಾಗುತ್ತಾರೆ ಎಂಬ ಅರಿವು ನಮ್ಮೆಲ್ಲರಿಗಿರಬೇಕು.

ಇಂಗ್ಲಿಷ್ ಭಾಷಾ ಕಲಿಕೆ ಮತ್ತು ಅದರಲ್ಲಿ ಪರಿಣತಿ ಸಾಧಿಸುವುದನ್ನೇ ದೊಡ್ಡ ಬೌದ್ಧಿಕ ಸಾಧನೆಯೆಂಬಂತೆ ಒಂದು ಸಾಮಾಜಿಕ-ಶೈಕ್ಷಣಿಕ ಮೌಲ್ಯವಾಗಿ ಮಕ್ಕಳಲ್ಲಿ ಶಿಕ್ಷಕರು ಮತ್ತು ಪಾಲಕರು ರೂಢಿಸಿರುವುದು ದುರಾದೃಷ್ಟಕರ.

ಅಕ್ಕಪಕ್ಕದ ಸೋದರ ರಾಜ್ಯಗಳ ಭಾಷೆಗಳಾದ ಮಲೆಯಾಳಂ, ತಮಿಳು, ತೆಲುಗು ಹಾಗೂ ಮರಾಠಿ ಮತ್ತು ನಮ್ಮ ರಾಜ್ಯದ ಭಾಷೆಗಳೇ ಆದ ತುಳು, ಕೊಡವ, ಕೊಂಕಣಿ ಮತ್ತು ಉರ್ದು ಭಾಷೆಗಳ ಬಗ್ಗೆ, ಆ ಭಾಷೆಗಳ ಮೂಲಕ ಅಭಿವ್ಯಕ್ತಿಗೊಳ್ಳುವ ಸಂಸ್ಕೃತಿ, ಬಾಳ್ವೆಯ ವಿಧಾನಗಳ ಬಗ್ಗೆ ಏನೂ ಗೊತ್ತಿರದಿರುವ ನಾವು, ಇಂಗ್ಲಿಷ್ ಪಠ್ಯಕ್ರಮದ ಮೂಲಕ ಶಾಲಾಮಟ್ಟದಲ್ಲಿ ಇಂಗ್ಲೆಂಡ್, ಅಮೆರಿಕ, ಐರೋಪ್ಯ ರಾಷ್ಟ್ರಗಳ ಸಾಹಿತ್ಯ ಸಂಸ್ಕೃತಿಗಳನ್ನು ಅಭ್ಯಾಸಿಸುವಂತೆ ಮಕ್ಕಳನ್ನು ಪ್ರೇರೇಪಿಸುವುದು ಒಂದು ವಿಪರ್ಯಾಸ ಎಂದು ಅರಿಯಬೇಕಾಗಿದೆ. ಪಶ್ಚಿಮದ ಸಾಹಿತ್ಯ, ಬಾಳ್ವೆಗಳ ಬಗ್ಗೆ ಕಲಿಯಲು ಉತ್ಸುಕರಾದವರು ಐಚ್ಛಿಕವಾಗಿ ಅವುಗಳನ್ನು ಕಲಿಯಲಿ. ಆದರೆ, ಅದಕ್ಕೆ ಮೊದಲು, ನಮ್ಮ ರಾಜ್ಯದೊಳಗಿನ ಸೋದರ ಭಾಷೆಗಳು, ನಂತರ ನಮ್ಮ ರಾಜ್ಯದ ಅಂಚಿನಲ್ಲಿರುವ ನೆರೆಹೊರೆಯವರ ಭಾಷೆ, ಸಾಹಿತ್ಯ, ಸಂಸ್ಕೃತಿ, ಬಾಳ್ವೆಗಳ ಬಗ್ಗೆ ಕಲಿಯಬೇಕು. ಸ್ಥಳೀಯತೆಯಿಂದ ಪ್ರಾರಂಭಿಸಿ ಜಾಗತಿಕಕ್ಕೆ ಏರೋಣ. ಆ ಮಧ್ಯೆ, ಆ ಹಾದಿಯಲ್ಲಿ ವಿವಿಧ ಘಟ್ಟಗಳಲ್ಲಿರುವ ನಮ್ಮ ಭಾಷಿಕ ನೆಂಟರ ಬಗ್ಗೆ ಕಲಿಯೋಣ. ಇಂತಹ ಭಾಷಾ ನೀತಿ ನಮ್ಮದಾಗಬೇಕು.

ಈ ಭಾಷಾ ನೀತಿ ಕುರುಡು ಪಶ್ಚಿಮ ವಿರೋಧಿ ಎಂದಾಗಲೀ, ಇಂಗ್ಲಿಷ್ ವಿರೋಧಿ ಎಂದಾಗಲೀ ಯಾರೂ ತಪ್ಪಾಗಿ ಭಾವಿಸದಿರಲಿ. ಪಶ್ಚಿಮ, ಯೂರೋಪ್, ಇಂಗ್ಲಿಷ್, ಫ್ರೆಂಚ್, ಜರ್ಮನ್ - ಎಲ್ಲರೂ ನಮ್ಮ ಸೋದರರೇ. ಅವರಿಂದ ನಾವು ಅಗಾಧವಾಗಿ ಕಲಿತಿದ್ದೇವೆ, ಕಲಿಯುತ್ತಿದ್ದೇವೆ ಮತ್ತು ಕಲಿಯುವುದು ಬಹಳವಿದೆ. ಆದರೆ ಅವರೊಂದಿಗಿನ ಅನುಸಂಧಾನ ಸಮಾನ ನೆಲೆಯಲ್ಲಿ ನಡೆಯಬೇಕು. ಅವುಗಳ ಅಧಿನಾಯಕತ್ವದ ಅಡಿಯಲ್ಲಿ ಅಲ್ಲ. ಪಶ್ಚಿಮದ ಬಗ್ಗೆ ಅಧ್ಯಯನ ಮಾಡೋಣ, ಅವರ ಭಾಷೆಗಳನ್ನು ಕಲಿಯೋಣ. ಅದಕ್ಕೆ ಮೊದಲು, ನಮ್ಮ ಬಗ್ಗೆ, ನಮ್ಮ ನೆರೆಹೊರೆಯವರ ಬಗ್ಗೆ ನಾವು ತಿಳಿಯೋಣ, ಕಲಿಯೋಣ.

ನಮಗಿಂದು ಬೇಕಾಗಿರುವುದು ಇಂತಹ ಅನುಸಂಧಾನ ನಡೆಸಲು ಸನ್ನದ್ಧವಾದ ದೇಶಿಯತೆಯ ಪುನರುತ್ಥಾನ. ಅದು ಸಂಪ್ರದಾಯಶೀಲವಲ್ಲದ, ಆದರೆ ಆತ್ಮಸ್ಥೈರ್ಯವುಳ್ಳ, ಶಕ್ತಿಶಾಲಿಯಾದ, ಸೃಜನಶೀಲತೆಯಿಂದ ಮಿಡಿಯುವ ದೇಶೀಯ ಪುನರುತ್ಥಾನ.


ನವನವೀನ ಅಭಿವೃದ್ಧಿ ಮಾದರಿಯ ಮಧ್ಯೆಯೂ ಕನ್ನಡವನ್ನು ಉಳಿಸಲೇಬೇಕೆಂಬ ಆಶಯ ನಮ್ಮದಾಗಿದ್ದಲ್ಲಿ, ಮೇಲೆ ವಿಷದೀಕರಿಸಿದ ಅಂಶಗಳನ್ನೊಳಗೊಂಡ "ಸಮಗ್ರ ಕನ್ನಡ" ಮತ್ತು "ಸೂಕ್ತ ಇಂಗ್ಲಿಷ್" ಭಾಷಾ ನೀತಿಯನ್ನು ರೂಪಿಸಿ ಜಾರಿಗೆ ತರಬೇಕಾಗಿದೆ. ■

ಸಂಪರ್ಕ ಯುಗದಲ್ಲಿ ಸ್ವಗತ

■ ಕೆ.ವಿ. ಅಕ್ಷರ

ನಾವೀಗ ಬದುಕುತ್ತಿರುವ ಕಾಲಮಾನಕ್ಕೆ ಒಂದು ಹೆಸರು ಕೊಡಬೇಕೆಂದರೆ ನಾವದಕ್ಕೆ 'ಸಂಪರ್ಕ ಯುಗ' ಎಂದು ಕರೆದುಕೊಳ್ಳಬಹುದು. ಹಿಂದೆ ಇಂಗ್ಲಿಷ್ ಭಾಷೆಯಲ್ಲಿ 'ಸಾರಿಗೆ' ಎಂಬರ್ಥದಲ್ಲಿ ಬಳಕೆಯಾಗುತ್ತಿದ್ದ 'ಕಮ್ಯೂನಿಕೇಶನ್' ಎಂಬ ಶಬ್ದವು ಕಳೆದ ಶತಮಾನದ ಹೊತ್ತಿಗೆ ಹಲವು ಅರ್ಥಾಂತರಗಳನ್ನು ಪಡೆದು ಈಗ 'ಸಂಪರ್ಕ' ಎಂಬರ್ಥವನ್ನು ಪಡೆದುಕೊಂಡು ಪ್ರತಿಷ್ಠಿತವಾಗಿದೆ. ಈ ಯುಗದ ಒಂದು ಸೂಚಕ ಶಬ್ದವಾಗಿ ಸ್ಥಾಪಿತವಾಗಿದೆ. ಕನ್ನಡದಲ್ಲಿಯೂ ಸಂಪರ್ಕವೆಂಬ ಶಬ್ದ ಸಾಕಷ್ಟು ಅರ್ಥಾಂತರಕ್ಕೆ ಒಳಗಾಗಿದೆ. ಹಳೆಯ ಶಬ್ದಕೋಶಗಳನ್ನು ತೆಗೆದು ನೋಡಿದರೆ ಅವು ಸಂಪರ್ಕವೆಂಬ ಶಬ್ದಕ್ಕೆ ಕೂಡುವಿಕೆ, ಸ್ಪರ್ಶ, ಮಿಲನ ಇತ್ಯಾದಿ ಭೌತಿಕ ಸಂಬಂಧಗಳನ್ನೇ ಸೂಚಿಸುವ ಅರ್ಥಗಳನ್ನು ಕೊಡುತ್ತದೆ. ಆದರೆ ಇವತ್ತು ಆ ಶಬ್ದದ ಅರ್ಥ ಹೆಚ್ಚಾಗಿ ದೂರದಿಂದಲೇ ನಡೆಯುವ ವ್ಯವಹಾರಗಳಿಗೆ ಸೂಚಕವಾಗಿ ಬಿಟ್ಟಿದೆ. ಅಷ್ಟೇ ಅಲ್ಲ, ಹಿಂದೆ ಸಂಪರ್ಕವು, ಹರಿಯುವ ನೀರಿನ ಹಾಗೆ, ವ್ಯಕ್ತಿ-ಸಮುದಾಯಗಳ ಸಮ್ಮಿಲನದ ಮೂಲಕ ಅಸಮಾನತೆಗಳನ್ನು ಕಡಿಮೆ ಮಾಡುವ ಒಂದು ಸಹಜ ಪ್ರಕ್ರಿಯೆಯಾಗಿದ್ದರೆ ಇವತ್ತು ಅದು ಅಸಮಾನತೆಗಳನ್ನು ಕಾಯ್ದು ರಕ್ಷಿಸಿಕೊಳ್ಳುವುದಕ್ಕೆ ಅಧಿಕಾರ ಮತ್ತು ಧನಶಕ್ತಿಗಳು ಬಳಸುವ ಉಪಾಯವಾಗಿ ಪರಿಣಮಿಸಿದೆ.

ಹೀಗೆ ಹಳೆಯ ಒಂದು ಪರಿಕಲ್ಪನೆಯು ಆಧುನಿಕ ಯುಗದಲ್ಲಿ ವಿಪರೀತಾರ್ಥ ಪಡೆಯುವುದು ಅಪರೂಪದ ಸಂಗತಿಯೇನೂ ಅಲ್ಲ. ಆಧುನಿಕತೆಯ ಕಟುಟೀಕಾಕಾರನೆಂದು ಹೆಸರಾದ ಚಿಂತಕ ಇವಾನ್ ಇಲ್ಲಿಚ್ ಇಂಥ ಅರ್ಥ ಪಲ್ಲಟಗಳ ಒಂದು ತಪಶೀಲನ್ನೇ ತನ್ನ ಬರಹಗಳಲ್ಲಿ ಬಿಚ್ಚಿಡುತ್ತ ಹೋಗಿದ್ದಾನೆ. ಇಲ್ಲಿಚ್‌ನ ಪ್ರಕಾರ ಆಧುನಿಕ ಯುಗದಲ್ಲಿ 'ಶಿಕ್ಷಣ'ದಿಂದಾಗಿಯೇ 'ತಿಳಿವಳಿಕೆ' ಕಡಿಮೆಯಾಗಿದೆ. 'ಸಾರಿಗೆ'ಯ ಬೆಳವಣಿಗೆಯಿಂದಲೇ 'ಚಲನೆ' ಕುಂಠಿತಗೊಂಡಿದೆ. 'ವೈದ್ಯಕೀಯ' ದಿಂದಾಗಿಯೇ 'ಆರೋಗ್ಯ'ಕ್ಕೆ ಅಪಾಯ ಒದಗಿದೆ. 'ರಕ್ಷಣಾ ಯೋಜನೆ' ಗಳಿಂದಾಗಿಯೇ 'ಭದ್ರತೆ' ಕಷ್ಟಕರವಾಗಿದೆ. ಇಲ್ಲಿಚ್‌ನ ಈ ಪಟ್ಟಿಗೆ ನಾವು 'ಸಂಪರ್ಕ'ದಿಂದಾಗಿಯೇ 'ಸಮ್ಮಿಲನ' ದುಸ್ತರವಾಗಿದೆ ಎಂಬುದನ್ನೂ ಬೇಕಿದ್ದರೆ ಸೇರಿಸಿಕೊಳ್ಳಬಹುದು. ವರ್ಷಗಳ ಹಿಂದೆ, ಅಮೆರಿಕನ್ ಪತ್ರಿಕೆಯೊಂದರಲ್ಲಿ ಕಂಡಿದ್ದ ಒಂದು ವ್ಯಂಗ್ಯಚಿತ್ರ ನನಗಿಲ್ಲಿ ನೆನಪಾಗುತ್ತದೆ. ಒಂದ ಸಂತೋಷ ಕೂಟದಲ್ಲಿ ಬಹಳ ಜನ ಸೇರಿ ಕೈಕೈ ಹಿಡಿದು



ನರ್ತಿಸುತ್ತಿದ್ದಾರೆ. ಆದರೆ ಅವರೆಲ್ಲರೂ ತಮ್ಮ ಕೈಯಲ್ಲಿರುವ ಮೊಬೈಲ್ ಫೋನಿನಿಂದ ಇನ್ನಾರ ಜತೆಗೋ ಮಾತಾಡುತ್ತಿದ್ದಾರೆ! ಅಸಂಗತ ನಾಟಕದ ಒಂದು ದೃಶ್ಯವನ್ನು ನೆನಪಿಸುವ ಈ ಚಿತ್ರ ಇವತ್ತಿನ ಸಂಪರ್ಕ ಯುಗಕ್ಕೊಂದು ಸೊಗಸಾದ ರೂಪಕವೆಂದು ನನಗನ್ನಿಸುತ್ತದೆ.

ಸಂಪರ್ಕವೆಂಬ ಪರಿಕಲ್ಪನೆಯ ಇಂಥ ವೈಪರೀತ್ಯಕ್ಕೆ ಪ್ರತಿರೋಧವಾಗಿ ನಾನಿಲ್ಲಿ 'ಸ್ವಗತ'ವೆಂಬ ಇನ್ನೊಂದು ಪರಿಭಾಷೆಯನ್ನು ಹೂಡಿ ಬಳಸಲು ಹೊರಟಿದ್ದೇನೆ. ಮೇಲ್ನೋಟಕ್ಕೆ ಸ್ವಗತವೆಂದರೆ 'ತನ್ನೊಳಗೆ ತಾನೇ ಆಡಿಕೊಳ್ಳುವ ಮಾತು' ಅರ್ಥಾತ್ ಅದು ಸಂಪರ್ಕವೆಂಬ ಪರಿಕಲ್ಪನೆಗೆ ವಿರುದ್ಧವಾದದ್ದು. ಆದರೆ ತುಸು ಕೆದಕಿ ನೋಡಲು ಹೊರಟರೆ, ಸ್ವಗತವೆಂಬ ಶಬ್ದದ ನಿಜವಾದ ಅರ್ಥವ್ಯಾಪ್ತಿ ಇನ್ನೂ ವಿಶಾಲವಾದದ್ದು. ರಂಗಭೂಮಿಯ ಮೂಲದಿಂದ ಬಂದಿರುವ ಈ ಶಬ್ದವನ್ನು ವಿವರಿಸಲು ಅಲ್ಲಿಯ ಒಂದು ಉದಾಹರಣೆಯನ್ನೇ ಎತ್ತಿಕೊಳ್ಳೋಣ-ಹ್ಯಾಮ್ಲೆಟ್ ತನ್ನ ಪ್ರಸಿದ್ಧ ಸ್ವಗತದಲ್ಲಿ 'ಟು ಬಿ ಆರ್ ನಾಟ್ ಟು ಬಿ...'ಎಂದು ಚಿಂತಿಸುವಾಗ ಅಥವಾ ಪುತಿನರ ಆಹಲ್ಯೆ ನಾಟಕದಲ್ಲಿ ಅಂತ್ಯದಲ್ಲಿ 'ಬಯಸುವೆ ನಾ ಗಂಗೆಯ ತೆರ ಪದದಿ ಕರಗಿ ಹರಿಯೆ...' ಎಂದು ಉದ್ಗರಿಸುವಾಗ ಆಯಾ ಪಾತ್ರಗಳು ನಡೆಸುತ್ತಿರುವ ಸಂವಹನೆಯ ವ್ಯಾಪಾರ ಯಾವ ಬಗೆಯದು? ಅದು ಒಂದು ವ್ಯಕ್ತಿ ತನ್ನೊಳಗೇ ತಾನು ಆಡಿಕೊಳ್ಳುತ್ತಿರುವ ಮಾತು ನಿಜ. ಆದರೆ ಆ ಮಾತನ್ನು ಒಂದು ಪ್ರೇಕ್ಷಕ ವರ್ಗದ ಸನ್ನಿಧಿಯಲ್ಲಿ ಆಡುತ್ತಿದ್ದೇವೆಂಬ ಅರಿವೂ ಆ ಪಾತ್ರಗಳಿಗೆ ಇದೆ. ಹಾಗಾಗಿ ಸ್ವಗತವೆಂಬುದು ಅತ್ತ ನೇರವಾದ ಸಂಪರ್ಕವೂ ಅಲ್ಲ. ಇತ್ತ ಪೂರ್ಣ ಸಂಪರ್ಕ ವಿಹೀನತೆಯೂ ಅಲ್ಲ. ಸಂಪರ್ಕ ಹಾಗೂ ಅಸಂಪರ್ಕದ ನಡುವೆ ಅಂತರಂಗದ ಮತ್ತು ಬಹಿರಂಗಗಳ ನಡುವೆ ಇರಬಹುದಾದ ಒಂದು ಬೂದುಪಟ್ಟಿಯ ಮೇಲಿನ ಸಂವಹನ ಕ್ರಿಯೆ ಇದು.

ಈ ಸಂವಹನೆಯ ವಿಧಾನದಲ್ಲಿರುವ ವೈಶಿಷ್ಟ್ಯವೊಂದು ಗೊತ್ತಾಗಲಿಕ್ಕೆ ನಾನಿದನ್ನು ಅಂತರ್ಜಾಲದಲ್ಲಿ ನಡೆಸುವ ಚಾಟಿಂಗ್ ಎಂಬ ಹರಟೆಗೆ ಹೋಲಿಸುತ್ತೇನೆ. ಬಹುತೇಕ ವೃಥಾ ಕಾಲಕ್ಷೇಪಕ್ಕಾಗಿಯೇ ನಡೆಯುವ ಈ ಚಾಟಿಂಗ್ ಇವತ್ತು ತುಂಬ ಜನಪ್ರಿಯ ಮಾತ್ರವೇ ಅಲ್ಲ. ಅದು ನಮ್ಮ ಸಂಪರ್ಕಸಾಧ್ಯತೆಗಳ ಒಂದು ಮಹತ್ವದ ಮುನ್ನಡೆ ಎಂದು ನಾವು ಭಾವಿಸಿಕೊಂಡಿದ್ದೇವೆ. ಆದರೆ ಅದರಿಂದ ನಿಜವಾಗಿಯೂ ಸಾಧಿತವಾಗುವ 'ಸಂಪರ್ಕ' ಯಾವ ಬಗೆಯದು? ಇಂಥ ಸಂಪರ್ಕದ ಹಿಂದಿರುವ ಮುಖಾಮುಖಿ ಯಾವ ರೀತಿಯದು? ಅಂತರ್ಜಾಲದಲ್ಲಿ ನಡೆಯುವ ಚಾಟಿಂಗ್‌ನಲ್ಲಿ ತುದಿಯಲ್ಲಿ ನಾವಿದ್ದರೆ ಇನ್ನೊಂದು ತುದಿಗೆ ದೇಶಾಂತರ-ಖಂಡಾಂತರದ ಇನ್ನೊಂದು ವ್ಯಕ್ತಿ ಇರುತ್ತಾನೆ/ಳೆ. ಆದರೆ ಆ ವ್ಯಕ್ತಿ ಯಾರು ನಮಗೆ ಗೊತ್ತಿಲ್ಲ. ಆ ವ್ಯಕ್ತಿ ತಾನಾರೆಂದು ಹೇಳಿಕೊಳ್ಳುತ್ತಾನೋ/ಳೋ ಅದೇ ಆ ವ್ಯಕ್ತಿ ಹೌದೇ ಎಂಬುದೂ ನಮಗೆ ನಿಶ್ಚಿತವಿಲ್ಲ ಹಾಗಿದ್ದರೂ ನಾವು ಆ ಹರಟೆಯನ್ನು ಮುಂದುವರಿಸುತ್ತೇವೆ ಇರವಿನ ಭ್ರಮೆಯನ್ನೇ ಇರವೆಂದು ತಿಳಿದು. ಆದ್ದರಿಂದಲೇ ಖಂಡಾಂತರದ ವ್ಯಾಪ್ತಿಯಲ್ಲಿ ನಡೆಯುವ ಈ ಸಂಪರ್ಕವು ಲೋಕಾಭಿರಾಮಕ್ಕಿಂತ ಹೆಚ್ಚಿನದೇನನ್ನೂ ಸಾಧಿಸಲಾರದು. ಅದೇ ಸ್ವಗತದ ಸನ್ನಿವೇಶ ಇದಕ್ಕೆ ತದ್ವಿರುದ್ಧ. ಇಲ್ಲಿ ಪ್ರೇಕ್ಷಕರ ಇರವು ಗೊತ್ತಿದೆ. ಹಾಗಿದ್ದರೂ ಅದನ್ನು ಭ್ರಮೆಯೆಂದು ಭಾವಿಸಿಕೊಳ್ಳಲಾಗುತ್ತದೆ. ಆದ್ದರಿಂದಲೇ ಇಲ್ಲಿ ನಿರ್ದಿಷ್ಟ ಸ್ಥಳ-ಕಾಲ ವ್ಯಕ್ತಿಗಳಿಗೆ ಬದ್ಧವಾಗಿ ನಡೆಯುವ ಮಾತುಕತೆ ಅಂತರಂಗ ಮತ್ತು ಬಹಿರಂಗದ ಜಗತ್ತಿನ ಎತ್ತರಗಳನ್ನು ಹಿಡಿಯಬಲ್ಲದು. ಅರ್ಥಾತ್. ಚಾಟಿಂಗ್‌ನಲ್ಲಿ ಭ್ರಮೆಯೇ ಇರವು. ಸ್ವಗತದಲ್ಲಿ ಇರವೇ ಭ್ರಮೆ. ಅದ್ದರಿಂದಲೇ ಇವತ್ತು

ಸಂಪರ್ಕವೆನ್ನುವುದು ಸ್ವಗತ ರೂಪ ಪಡೆಯತೊಡಗಿದೆ. ಸ್ವಗತಕ್ಕೆ ಹೆಚ್ಚು ಸಂಪರ್ಕದ ಸಾಧ್ಯತೆಗಳು ಕಾಣಿಸುತ್ತಿವೆ.

ಹಾಗಂತ ಸ್ವಗತವೆಂಬ ಪರಿಕಲ್ಪನೆಯು ಆತ್ಯಂತಿಕವಾಗಿ ಪರಿಶುದ್ಧವೆಂದೂ ಅದು ಯಾವತ್ತೂ ಭ್ರಷ್ಟವಾಗಲಾರದೆಂದೂ ನಾನೇನೂ ಸೂಚಿಸುತ್ತಿಲ್ಲ. ಸ್ವಗತದ ಧಾಟಿಯನ್ನು ಕೃತಕವಾಗಿ ಅಳವಡಿಸಿದರೆ ಅದು ಅತ್ಯಂತ ಕುಟಿಲವಾದ ಆತ್ಮರತಿ, ಆತ್ಮ ಪ್ರದರ್ಶನಗಳ ಮಾಧ್ಯಮವಾಗಿ ಮಾರ್ಪಡುತ್ತದೆನ್ನುವುದನ್ನು ಕನ್ನಡದ ಈಚಿನ ಹೊಸ ಪತ್ರಿಕೋದ್ಯಮ ತುಂಬ ಸ್ಪಷ್ಟವಾಗಿಯೇ ತೋರಿಸಿದೆ. ಆದ್ದರಿಂದ ಇವತ್ತು ನಾವು ಸಂಪರ್ಕಕ್ಕಿಂತ ಹೆಚ್ಚು ಸ್ವಗತಕ್ಕೆ ಒತ್ತು ಕೊಡುವುದು ಮಾತ್ರವಲ್ಲ. ಸ್ವಗತವನ್ನು ಇಂಥ ಅಪಾಯಗಳಿಂದ ರಕ್ಷಿಸುವುದು ಕೂಡಾ ಮುಖ್ಯವಾದ ಕೆಲಸ ಎಂದು ನಾನು ಭಾವಿಸುತ್ತೇನೆ. ■

ಕೃಪೆ : ಉದಯವಾಣಿ ಪತ್ರಿಕೆಯ ಅಕ್ಷರ ಅವರ ಹೊಸ ಅಂಕಣ 'ಸ್ವಗತ'




ಮಾಹಿತಿ ತಂತ್ರಜ್ಞಾನ (ದ) : ಮಡಿಕೆಗಳ ವಿರುದ್ಧ ಒಂದು ಓದು

■ *ಡನ್‌ಕಿನ್ ಜಳಕಿ*

ಬಹುಷಃ ಡೆರಿಡನೊಂದಿಗೆ ನಾವು ವಿಮರ್ಶೆಯ ಹೊಸ ಯುಗ ಒಂದಕ್ಕೆ ಕಾಲಿಡುತ್ತೇವೆ. ಒಂದೇ ಸಾಲಿನಲ್ಲಿ ಅದನ್ನು ವಿವರಿಸುವುದಾದರೆ (ಈ ರೀತಿಯ ಪ್ರಯತ್ನ ತಪ್ಪು ವ್ಯಾಖ್ಯಾನಕ್ಕೆ ದಾರಿಮಾಡಿಕೊಡುವ ಅನಾಹುತ ಇದೆ ಎಂಬುದನ್ನು ಮರೆಯದಿರೋಣ) ವಿಮರ್ಶೆಗಾಯ್ದುಕೊಂಡ ಯಾವುದೇ ವ್ಯವಸ್ಥೆ, ರೂಪಕ ಇತ್ಯಾದಿಗಳನ್ನು ಸರಿ/ತಪ್ಪು ಎಂಬ ಮಾತಿನಲ್ಲಿ ವಿಶ್ಲೇಷಿಸುವುದು, ವಿವರಿಸುವುದು ಸರಿಯಲ್ಲ. ಕಾರಣ ಸರಿ /ತಪ್ಪು ಎನ್ನುವ ಪರಿಕಲ್ಪನೆ ತನ್ನೊಳಗೆ ವಿಶ್ಲೇಷಿಸಬಹುದಾದ ಯಾವ ವಸ್ತುವೂ ಪರಿಪೂರ್ಣವಲ್ಲ, ಪರಿಪೂರ್ಣವಾಗಿಯು, ಯಾವಾಗಲು 'ಸರಿ' ಯಾಗಿಯು ಇರುವ (ಅಲೌಕಿಕ) ಶುದ್ಧ ರೂಪ ಒಂದು ಇರುತ್ತದೆ. ಎಂಬ ನಂಬಿಕೆಯನ್ನು ತುಂಬಿಕೊಂಡಿರುತ್ತದೆ. ಇದು ಸತ್ಯಕ್ಕೆ ದೂರವಾದ ಮಾತು ಎಂದು ಬೇರೇನು ವಿವರಿಸಬೇಕಾಗಿಲ್ಲ. ಆದ್ದರಿಂದ ವಿಮರ್ಶೆಯ ಈ ಹೊಸ ಯುಗದಲ್ಲಿ ರೂಪಕ ವ್ಯವಸ್ಥೆಯೊಂದನ್ನು ವಿಶ್ಲೇಷಿಸಲು ಅದನ್ನು ಹೋಲಿಸುವುದಿಲ್ಲ ಬದಲಿಗೆ ಅದನ್ನು ಎಳೆ ಎಳೆಯಾಗಿ ಬಿಡಿಸಿ, ಹರಡಿಟ್ಟು ಅದರ ಸಂರಚನೆಯಲ್ಲಿ ಆದರ ಹಿಂದೆ ಕೆಲಸ ಮಾಡುತ್ತಿರುವ ಸಾಂಸ್ಕೃತಿಕ, ರಾಜಕೀಯ ಶಕ್ತಿ ಸಂಬಂಧಗಳನ್ನು ಓದುತ್ತೇವೆ. ಇದನ್ನು ಆ ವ್ಯವಸ್ಥೆಯ ಮಡಿಕೆಗಳ ವಿರುದ್ಧ (against the grains) ಓದುವ ಕ್ರಮ ಎನ್ನಬಹುದು.

ಮಾಹಿತಿತಂತ್ರಜ್ಞಾನದಂತ 'ಆಧುನಿಕ' ವಿಜ್ಞಾನವನ್ನು ನಾವು ಪುರುಷ ನಿಷ್ಠ ಸಂಸ್ಕೃತಿ, ಧಾರ್ಮಿಕ ಮೂಲಭೂತವಾದ, (ಕೆಲ ಸಂದರ್ಭಗಳಲ್ಲಿ) ಬಂಡವಾಳಶಾಹಿ ಇತ್ಯಾದಿಗಳನ್ನು ಅಳೆಯುವ ಮಾನದಂಡಗಳಲ್ಲಿ ಅಳೆಯುವುದಿಲ್ಲ. ಅಷ್ಟೆ ಅಲ್ಲ ಇವೆಲ್ಲವನ್ನು ಒಟ್ಟಿಗೆ ಹೋಲಿಸಿ ನೋಡಿದಾಗ ಮಾಹಿತಿ ತಂತ್ರಜ್ಞಾನವನ್ನು ಹೆಚ್ಚು ಪ್ರಜಾತಾಂತ್ರಿಕವೆಂದು ಎತ್ತಿ ಹಿಡಿಯುವುದರಲ್ಲಿ ಯಾವ ಸಂದೇಹವಿಲ್ಲ. 'ಭೇಧ ಭಾವವಿಲ್ಲದೆ ಎಲ್ಲರನ್ನು ಸಮಾನ ದೃಷ್ಟಿಯಲ್ಲಿ ನೋಡುತ್ತದೆ', ಯಾವ (ಶಿಕ್ಷಕರು ಇತ್ಯಾದಿ) ದಲ್ಲಾಳಿಗಳ (!) ಸಹಾಯವಿಲ್ಲದೆ ಶಿಕ್ಷಣವನ್ನು ಪ್ರಸಾರ ಮಾಡುತ್ತದೆ. ಆಧುನಿಕತೆಯ ಯಾವ ಸಾಧನ ಸಲಕರಣೆಗಳೂ ತಲುಪಲಾಗದ ಸಮಾಜದ ಮೂಲೆ ಮೂಲೆಗೂ ಇದು ತಲುಪುತ್ತದೆ, ಎಂಬಿತ್ಯಾದಿ ಭರವಸೆಗಳೇ ಆದಕ್ಕೆ ಕಾರಣ. ಈ ಎಲ್ಲಾ ಜನಪ್ರಿಯ ಕಲ್ಪನೆಗಳನ್ನು ಸಮಸ್ಯೆಯಾಗಿಸಿ ನಮ್ಮ ಅತೀ ಭರವಸೆಯ ಅಡಿಯಲ್ಲಿ ಅಡಗಿಕೊಳ್ಳುವ ಹಲವು ಒಪ್ಪಿಕೊಳ್ಳಲಾಗದಂತಹ ವಿಚಾರಗಳನ್ನು



ವಿಶ್ಲೇಷಿಸುವುದೇ ಈ ಲೇಖನದ ಉದ್ದೇಶ. ಪಕ್ಕದ ಮನೆಯವರಂತೆ ಕಾಣುವ ಜನರೆ ಹೆಚ್ಚು ಆತಂಕಕಾರಿ ಎಂದು ಫುಕೋ ಎಚ್ಚರಿಸಿರುವುದನ್ನು ನೆನಪಿನಲ್ಲಿಟ್ಟುಕೊಳ್ಳೋಣ. ಮಾಹಿತಿ ತಂತ್ರಜ್ಞಾನದ ಕೊರತೆಗಳನ್ನು ಯಾರೂ ಟೀಕಿಸಿ ವಿಮರ್ಶಿಸಿಲ್ಲವೆಂದೇನಿಲ್ಲ. ಆದರೆ ಈ ರೀತಿಯ ವಿಮರ್ಶೆಗಳೆಲ್ಲ ಅದರ ನೇರ ಪ್ರಭಾವಕ್ಕೆ ಒಳಪಡುವ ವ್ಯವಸ್ಥೆ ವ್ಯಕ್ತಿಗಳ ಮೇಲಷ್ಟೇ ಕೇಂದ್ರಿತವಾಗಿರುತ್ತದೆ. ನಾವು ನಿತ್ಯ. ಕೇಳುವ 'ಮಾಹಿತಿ ತಂತ್ರಜ್ಞಾನ' ಕೇವಲ ಮೆಟ್ರೋಪಾಲಿಟನ್ ಕೇಂದ್ರಗಳಿಗೆ ಸೀಮಿತವಾಗಿದೆ, 'ಶ್ರೀಮಂತರ ಕೈಗಷ್ಟೆ ಎಟುಕುತ್ತಿದೆ'. ಎಂಬೆಲ್ಲಾ ಬೊಬ್ಬೆ ಇದಕ್ಕೆ ಉದಾಹರಣೆ. ಆಶ್ಚರ್ಯವೆಂದರೆ ಮಾಹಿತಿ ತಂತ್ರಜ್ಞಾದ ವಕ್ತಾರರೂ ಕೂಡ ಈ ರೀತಿಯ ಹೇಳಿಕೆಗಳನ್ನು ನೀಡಿ ಆಗಾಗ ನಿಟ್ಟುಸಿರಿಡುತ್ತಾ ಇರುತ್ತಾರೆ. ಆತ್ಮ ವಿಮರ್ಶೆಯಂತೆ ಕಾಣುವ ಈ ನಿಟ್ಟುಸಿರುಗಳ ಹಿಂದೆ ನಿಜವಾದ ಸಮಸ್ಯೆಗಳು ಅಡಗಿ ಕುಳಿತಿರುತ್ತವೆ ಎಂಬುದು ನಿಜವಾಗಿಯು ಭಯಪಡಬೇಕಾದಂತ ವಿಚಾರ. ಆದ್ದರಿಂದ (ಫುಕೋನ ವಿಶ್ಲೇಷಣಾ ಮಾದರಿಯ ಸಹಾಯ ಪಡೆಯುವುದಾದರೆ) ಮಾಹಿತಿ ತಂತ್ರಜ್ಞಾನದ ಶಕ್ತಿ ಸಂಬಂಧಗಳ (Power - relations) ಕೇಂದ್ರವನ್ನಲ್ಲ ಆದರ ಅಂಚುಗಳನ್ನು ವಿಶ್ಲೇಷಿಸಬೇಕು. ಈ ಅಂಚುಗಳಲ್ಲಿ ಶಕ್ತಿಸಂಬಂಧಗಳು ಹೆಚ್ಚು ಸ್ಥಳೀಯವಾಗಿಯೂ, ತನ್ನ ದಿನ ನಿತ್ಯದ ಸಾಮಾನ್ಯ ರೂಪದಲ್ಲಿಯು, ಪ್ರಾಂತೀಯ ವ್ಯವಸ್ಥೆಯಾಗಿಯೂ, ದೂರೆಯುತ್ತದೆ ಎಂಬುದು ಫುಕೋನ ವಾದ. ಮಾಹಿತಿ ತಂತ್ರಜ್ಞಾನ ಕೂಡ ಯಾರ ಭಯವೂ ಇಲ್ಲದೆ ಈ ಅಂಚುಗಳಲ್ಲಿ ತನ್ನ ನಿಜರೂಪದಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವುದನ್ನು ನಾವು ಗಮನಿಸಬಹುದು. ಈ ರೀತಿಯ ವಿಮರ್ಶೆಗೆ ನಮ್ಮ ಲಕ್ಷ್ಯಕ್ಕೆ ಬಾರದಿರುವ ಮಾಹಿತಿ ತಂತ್ರಜ್ಞಾನದ ಅಂಚಿನ ಅಂಚಿನಲ್ಲಿರುವ ಈ ಎರಡು ವ್ಯವಸ್ಥೆಗಳನ್ನು ನಾನು ಆಯ್ದುಕೊಂಡಿದ್ದೇನೆ. (1)ಜಾಹಿರಾತುಗಳು ಹಾಗೂ (2) ದಿನಪ್ರತಿಕೆಯಲ್ಲಿನ ವಧು-ವರ ಅನ್ವೇಷಣಾ ಅಂಕಣ.

ಮೇಲ್ಮಟ್ಟದಲ್ಲಿ ನಾವು ಹಾನಿಕಾರಕವಲ್ಲವೆಂದು ನಕ್ಕು ಮರೆತು ಬಿಡುವ ಜಾಹಿರಾತುಗಳು ನಿಜಜೀವನದಲ್ಲಿ ನಮ್ಮ ಸುಪ್ತ ಮನಸ್ಸಿಗೆ ಲಗ್ಗೆ ಇಟ್ಟು ನಮ್ಮ ಸಂಪೂರ್ಣ ಶರಣಾಗತಿಗೆ ಒತ್ತಾಯಪಡಿಸ ತೊಡಗುತ್ತದೆ. .....ಸಂಪತ್ತನ್ನು ಕ್ರೋಢೀಕರಿಸುವ ಹಾಗೂ ಅನುಭೋಗಿಸುವ ಬಂಡಾವಾಳಶಾಹಿಯ ಸಾಂಸ್ಕೃತಿಕ ಪ್ರತಿ ರೂಪ ಪ್ರಪಂಚವೊಂದನ್ನು ಕಲ್ಪಿಸಿ ಪ್ರಚಾರ ಪಡಿಸುವುದೇ ಜಾಹಿರಾತುಗಳ ಕಾರ್ಯ...... ಎನ್ನುತ್ತಾರೆ. ಆರ್. ಶ್ರೀವತ್ಸನ್, ಈ ವಿಷಯದ ಗಾಂಭೀರ್ಯತೆಯ ಅರಿವಾಗಬೇಕಾದರೆ ಬಹುರಾಷ್ಟ್ರೀಯ ಕಂಪನಿಗಳ ಮಾಹಿತಿ ತಂತ್ರಜ್ಞಾನದ ಜಾಹಿರಾತುಗಳನ್ನು ಗಮನಿಸಿ. ಸಿಗರೇಟ್, ವಾಹನ ಇತ್ಯಾದಿ ಗಳೆಲ್ಲದರ ಜಾಹಿರಾತಿನಲ್ಲೆಲ್ಲ ಮಹಿಳೆಯರನ್ನೇ ಬಳಸುವ ಈ ಕಂಪನಿಗಳು ಕಂಪ್ಯೂಟರ್ ಸಂಬಂಧಿತ ಜಾಹಿರಾತುಗಳಿಗೆ ಮಾತ್ರ ಪುರುಷರನ್ನೇ ಮೊರೆ ಹೋಗುತ್ತಿರುವುದು ಯಾಕೆ? 'ಸ್ಪೂರ್ತಿದಾಯಕ ಯುವಜನರ ನಿರೀಕ್ಷೆಯಲ್ಲಿದ್ದೇವೆ. ಆಹ್ವಾನಿಸುತ್ತೇವೆ'.ಎಂದು ಅವು ಕಾಂಪ್ಯೂಟರ್ ಶಿಕ್ಷಣದ ಜಾಹಿರಾತು ನೀಡಿದಾಗಲೆಲ್ಲ ಅಲ್ಲಿ ಸುಂದರ ಯುವಕನೋರ್ವನ ಭಾವ ಚಿತ್ರವಿರುತ್ತದೆ ಯಾಕೆ? ಅಥವಾ ದೊಡ್ಡ ಕಂಪನಿಗಳ ಜಾಹಿರಾತುವಿನಲ್ಲಿ ಅವರ ಕಾಂಪ್ಯೂಟರ್ ಸಂಬಂಧಿತ ಜಾಹಿರಾತುಗಳಿಗೆ ಮಾತ್ರ ಪುರುಷರನ್ನೆ ಮೊರೆ ಹೋಗುತ್ತಿರುವುದು ಯಾಕೆ? ಅಥವಾ ದೊಡ್ಡ ಕಂಪನಿಗಳ ಜಾಹಿರಾತುವಿನಲ್ಲಿ ಅವರ ಕಾಂಪ್ಯೂಟರ್ ಸಂಬಂಧಿತ ಉತ್ಪನ್ನಗಳ ಪಕ್ಕದಲ್ಲಿ ಪುರುಷರನ್ನು ನಿಲ್ಲಿಸಿದರೆ, ಅವರದ್ದೇ ಗೃಹೋಪಯೋಗಿ ವಸ್ತುಗಳಾದ ಬಟ್ಟೆ ಒಗೆಯುವ ಯಂತ್ರ , ಮೈಕ್ರೋವೇವ್ ಒಲೆ ಇತ್ಯಾದಿಗಳ ಪಕ್ಕದಲ್ಲಿ ಮಹಿಳೆಯರನ್ನು ನಿಲ್ಲಿಸಿರುತ್ತಾರೆ ಕಾರಣವೇನು? ಇವುಗಳನ್ನು ನಾವು ದಿನನಿತ್ಯ ನೋಡುತ್ತೇವೆ. ಮರೆತುಬಿಡುತ್ತೇವೆ. (ಅಥವಾ ಹಾಗಂದು ಕೊಳ್ಳುತ್ತೇವೆ.) ಹಾಗೊಂದು ವೇಳೆ ನಾವು ಈ

ಜಾಹಿರಾತುಗಳನ್ನು ಮರೆತುಬಿಟ್ಟರೆ ಅವು ಹೆಚ್ಚು ಹಾನಿಕಾರವಾಗುವುದಿಲ್ಲ. ಆದರೆ ಜಾಹಿರಾತುಗಳು ಜನರು ತಮ್ಮನ್ನು ಮರೆಯದ ಹಾಗೆ ಎಚ್ಚರ ವಹಿಸುತ್ತವೆ.

ಈ ಜಾಹಿರಾತಿನ ಮೇಲ್ಪದರದ (ಪುರುಷ/ಮಹಿಳೆಯರ) ಚಿತ್ರ / ಪ್ರತಿಮೆಗಳನ್ನೆಲ್ಲಾ ಯಾವ ಪ್ರತ್ಯೇಕ ಜಾತಿ, ಧರ್ಮ, ಸ್ಥಳಗಳನ್ನು ಪ್ರತಿನಿಧಿಸದಂತೆ ಬಹಳ ಸೂಕ್ಷ್ಮವಾಗಿ ಆರಿಸಲಾಗಿರುತ್ತದೆ. ಅದರ ಜೊತೆ ಜೊತೆಯಲ್ಲೇ ಅವುಗಳು ಒಂದು ನಿಶ್ಚಿತ ಆರ್ಥಿಕ, ವಿದ್ಯಾಭ್ಯಾಸದ ಅಂತಸ್ತನ್ನು ಸೂಚಿಸುವ ರೀತಿಯಲ್ಲೂ ಆರಿಸಲ್ಪಟ್ಟಿರುತ್ತದೆ ಅವು ಸಹಜ, ಸಾಮಾನ್ಯವಾಗಿಯೂ, ಸಾರ್ವತ್ರಿಕವಾಗಿಯೂ ಕಾಣುತ್ತವೆ. (ಅವರ ಬಟ್ಟೆ, ರೂಪ ಇತ್ಯಾದಿ ಗಮನಿಸಿ) ಹೀಗೆ ಆಯ್ದ ಆರ್ಥಿಕ ಅಂತಸ್ತು ಒಂದು ಜರಡಿಯಿದ್ದಂತೆ ಈ ಜರಡಿಯಲ್ಲಿ ಕಡೇಗೆ ಉಳಿಯುವುದೆಲ್ಲ ಮೇಲ್ಜಾತಿ, ಮೇಲ್ವರ್ಗದ ಪುರುಷರು ಎಂಬುದು ಜಾಹಿರಾತಿನ ಒಂದು ನಿಶ್ಚತ ರಾಜಕೀಯ ಕಾರ್ಯಚರಣೆಯ ಫಲ. ಒಳ್ಳೆಯ ವಿದ್ಯಾವಂತ ಸಮಾಜ ಜಾತಿ ಮತ್ತು ಲಿಂಗ ಭೇಧ ರಹಿತ ಎಂಬ ಕಲ್ಪನೆ. ಈ ಜಾಹೀರಾತನ್ನು ಸಹಜಗೊಳಿಸುವ ಸಮಯದಲ್ಲೇ ಜಾಹೀರಾತು ಈ ಜನಪ್ರಿಯ ಕಲ್ಪನೆಯನ್ನು ಗಟ್ಟಿಗೊಳಿಸುತ್ತಿರುತ್ತದೆ. ಅಂದರೆ ಜಾಹಿರಾತು ಪ್ರತಿನಿಧಿಸುವ ಸಮಾಜದ ಆ ಭಾಗವನ್ನು, ಆ ಭಾಗ ತನ್ನ ಸ್ವತ್ತಂತೆ ವರ್ತಿಸುವ ಮಾಹಿತಿ ತಂತ್ರಜ್ಞಾನವನ್ನು ಜಾತಿ, ಲಿಂಗ ಬೇಧ ರಹಿತ ಎಂದು ಸಾಧಿಸುತ್ತಿರುತ್ತದೆ. ಮಾಹಿತಿ ತಂತ್ರಜ್ಞಾನ ತನ್ನ ಈ ಪ್ರದರ್ಶಿತ ನವ್ಯ ವ್ಯವಸ್ಥೆಯಲ್ಲಿ ಮಹಿಳೆ, ದಲಿತ, ಬಡವರಿಗೆ ಸ್ಥಳ ನಿರಾಕರಿಸುವ ಅವರಿಗೆ ಆಸೆ ತೋರಿಸಿ ಆ ಮೂಲಕ ಅವರನ್ನು ತನ್ನತ್ತ ಸೆಳೆಯುವ ಅವಿರತ ಪ್ರಯತ್ನದಲ್ಲಿ ತೊಡಗಿರುತ್ತದೆ.

ಈ ಜಾಹಿರಾತುಗಳ ರಾಜಕೀಯದ ಸ್ಪಷ್ಟ ಅರಿವು ತುಂಬಾ ಅವಶ್ಯಕ. ಇಂದು ಒಂದು ಆಂಗ್ಲ ದಿನ ಪತ್ರಿಕೆಯಲ್ಲಿನ ಒಟ್ಟು ಜಾಹಿರಾತಿನ ಸುಮಾರು 20%ರಿಂದ 25% ಸ್ಥಳವನ್ನು ಮಾಹಿತಿ ತಂತ್ರಜ್ಞಾನ ಆವರಿಸಿಬಿಟ್ಟಿದೆ. ಇದರ ಒಟ್ಟು ಪರಿಣಾಮ ನಮ್ಮನ್ನು ಬೆಚ್ಚಿಬೀಳಿಸುವಷ್ಟು ಪರಿಣಾಮಕಾರಿಯಾಗಿದೆ. ಕಳೆದ ನವೆಂಬರ್‌ನಲ್ಲಿ ನಾವಿಲ್ಲಿ (ಹೈದರಾಬಾದ್) ಎರಡು ಸಣ್ಣ ಸರ್ವೆ ಮಾಡಿದೆವು. ಸುಮಾರು ನೂರಕ್ಕೆ ನಲವತ್ತಕ್ಕೂ ಹೆಚ್ಚು ಪುಟ್ಟ ಮಕ್ಕಳು, ಅವರು ದೊಡ್ಡವರಾದ ಮೇಲೆ ಕಾಂಪ್ಯೂಟರ್ ಸಂಬಂಧಿತ ಉದ್ಯೋಗಕ್ಕೆ ಸೇರಬಯಸುತ್ತಿದ್ದರು. ಅವರಿಗಿಂತ ಹೆಚ್ಚು ಮಂದಿ ಪೋಷಕರ ಹಿರಿದಾಸೆಯೂ ಅದೇ ಆಗಿತ್ತು. ಈ ಸರ್ವೆ ನಡೆದದ್ದು (ಬೇರೆ ಕಾರಣಕ್ಕೆ) ಒಂದು ಕೊಳಚೆ ಪ್ರದೇಶದಲ್ಲಿ ಎಂಬುದು ಈ ಮಾಹಿತಿಯ ಪ್ರಾಮುಖ್ಯತೆ ಹೆಚ್ಚಿಸುತ್ತದೆ.

ಮಾಹಿತಿ ತಂತ್ರಜ್ಞಾನದ ಮೂಲಕ ಆಧುನಿಕ ಭಾರತವನ್ನು ನಿರ್ಮಿಸುತ್ತೇವೆ ಎಂಬ ಸುಂದರ ಕನಸನ್ನು ಕರ್ನಾಟಕ, ಆಂಧ್ರ ಇತ್ಯಾದಿ ಸರ್ಕಾರಗಳು ಪ್ರತಿನಿತ್ಯ ಪ್ರಚಾರ ಮಾಡುತ್ತಿವೆ. ಈ ಕಲ್ಪನೆಯ ಆಧುನಿಕ ಭಾರತ ಇಂದಿನ ಪ್ರಸುತ್ತ ಬಡವ / ದಲಿತ/ ಮಹಿಳೆಯರ ಭಾರತವನ್ನು ಕಾನೂನು ಬಾಹಿರಗೊಳಿಸುತ್ತಿದೆ. ಅಷ್ಟೇ ಅಲ್ಲ ಅದು ವಾಸಿಸಲು ಅಯೋಗ್ಯವೆಂಬ ಅಂತಿಮ ತೀರ್ಪನ್ನು ಕೊಟ್ಟುಬಿಟ್ಟಂತಿದೆ. ಇದಕ್ಕೆ ಏಕೈಕ ಪರಿಹಾರ ಮಾಹಿತಿ ತಂತ್ರಜ್ಞಾನ (ಜೊತೆಗೆ ನಮ್ಮ ಸರ್ಕಾರ) ನಮಗೆ ಬೋಧಿಸುತ್ತಿರುವಂತೆ ಅದಕ್ಕೆ ಶರಣಾಗುವುದಷ್ಟೆ. ಈ ಮಾಹಿತಿ ತಂತ್ರಜ್ಞಾನದಲ್ಲಿ ನಾವು ಪಾಲ್ಗೊಳ್ಳದಿದ್ದರೆ / ಖರೀದಿಸದಿದ್ದರೆ ನಾವು ' ಆಧುನಿಕರಲ್ಲ' ಎಂದು ತಪ್ಪೊಪ್ಪಿಕೊಳ್ಳುವ ಪರಿಸ್ಥಿತಿಯನ್ನು ಈ ಜಾಹಿರಾತುಗಳು ನಿರ್ಮಿಸುತ್ತಿವೆ. ನಾವು 'ಆಧುನಿಕತೆಯನ್ನು' 'ಸ್ವಾತಂತ್ರ್ಯ' ಕ್ಕೆ ಸಮಾನಾಗಿ ಬಳಸುತ್ತೇವೆ. ಈ ಜಾಹಿರಾತುಗಳಾದರೋ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಮಗೆ ಅಂತಹ ಆಧುನಿಕತೆ ಹಾಗೂ ಸ್ವಾತಂತ್ರ್ಯಗಳೆರಡನ್ನು

ಕೊಡುತ್ತೇವೆ ಎಂದು ಹೇಳುತ್ತವೆ. ಆದರೆ ಈ 'ಆಧುನಿಕತೆ' ಹಾಗೂ 'ಸ್ವಾತಂತ್ರ್ಯ'ಕ್ಕೆ ಬಂಡವಾಳ ಶಾಹಿ - ಮಾಹಿತಿ ತಂತ್ರಜ್ಞಾನದ ಬೇಲಿ ! ಅರ್ಥಾತ್ ಇಲ್ಲಿ ಸ್ವಾತಂತ್ರ್ಯ - ವಿವಿಧ ರೀತಿಯ ಕಾಂಪ್ಯೂಟರ್‌ನಲ್ಲಿ ಒಂದನ್ನು ಆರಿಸಿಕೊಳ್ಳಲು, ಅಥವಾ ಹತ್ತಾರು ಸಂಸ್ಥೆಗಳಲ್ಲಿ ಒಂದನ್ನು ಆರಿಸಿಕೊಂಡು ಕಂಪ್ಯೂಟರ್ ತಂತ್ರಜ್ಞಾನ ಕಲಿಯಲು ಎಂದಷ್ಟೆ. 'ಸ್ವಾತಂತ್ರ್ಯ' ಪದದ ಒಟ್ಟು ಅರ್ಥವನ್ನೇ ಈ ಶಕ್ತವ್ಯವಸ್ಥೆಗಳು ಪುನರ್ವ್ಯಾಖ್ಯಾನಿಸುತ್ತಿವೆ. ತಮ್ಮ ಉದ್ದೇಶಗಳನ್ನು ಪೂರೈಸಲು ಇಂದು ಮಾಹಿತಿ ತಂತ್ರಜ್ಞಾನವನ್ನು ತಪ್ಪು/ಬೇಡ ಎಂದು ಅಲ್ಲಗಳೆಯುವ ಹಕ್ಕು ನಮಗಿಲ್ಲ, ಈ ಅಸಹಾಯಕತೆಯನ್ನು ಒಪ್ಪಿಕೊಳ್ಳುವ ಒತ್ತಾಯ ದಿನೇ ದಿನೆ ಹೆಚ್ಚುತ್ತಿದೆ.

ಭಾರತದ ಜಾತಿ, ರಾಜಕೀಯ ವಿಶ್ಲೇಷಣಾ ಕ್ಷೇತ್ರದಲ್ಲಿ ತೊಡಗಿರುವ ಚಂದ್ರಬಾನ್‌ಪ್ರಸಾದ್ (The Pioneer)ನಿತ್ಯಕಾಲಿಕೆಯಲ್ಲಿ ಭಾರತದಲ್ಲೆ ಮೊದಲ ಬಾರಿಗೆ ಎನ್ನಬಹುದಾದ Dalit Diary ಅಂಕಣ ಆರಂಭಿಸಿ, ಈಗಲೂ ಬರೆಯುತ್ತಿರುವ ವ್ಯಕ್ತಿ. "ಮಾಹಿತಿ ತಂತ್ರಜ್ಞಾನ ಒಂದು ಹೊಸ ಬ್ರಾಹ್ಮನಿಸಂ" ಎಂಬ ಹೊಸ ವಿಚಾರ ವೊಂದರನ್ನು ಕೆಲ ಸಮಯದ ಹಿಂದೆ ಪ್ರಸ್ತಾಪಿಸಿ ಚರ್ಚೆಗೊಂದು ಹೊಸ ಕ್ಷೇತ್ರವನ್ನೇ ತೆರೆದರು. ಇತಿಹಾಸದಲ್ಲಿ ದಲಿತರು ಯಾವುದೇ ಒಂದು ಜ್ಞಾನದ ಕ್ಷೇತ್ರವನ್ನು ಪ್ರವೇಶಿಸುವಷ್ಟರಲ್ಲಿ ಬ್ರಾಹ್ಮಣರು ಆ ಕ್ಷೇತ್ರದಲ್ಲಿ ಶತಮಾನಗಳಷ್ಟು ಹಿಂದೆಯೆ ತಮ್ಮನ್ನು ತೊಡಗಿಸಿಕೊಂಡು ಬಿಟ್ಟಿದ್ದರು. ಇಂದು ಮಾಹಿತಿತಂತ್ರಜ್ಞಾನ ದಲಿತರನ್ನು (ಮಹಿಳೆಯರನ್ನು) ದೂರ ಇಡುತ್ತಿರುವ ಸಂದರ್ಭದಲ್ಲೆ ದಲಿತರೂ ಅದರಿಂದ ದೂರ ಉಳಿದುಬಿಟ್ಟರೆ ಈ ಹೊಸ ಜ್ಞಾನದ ಕ್ಷೇತ್ರವು ಬ್ರಾಹ್ಮಣೀಕರಣಗೊಂಡು ಬಿಡುತ್ತದೆ- ದಲಿತರನ್ನು (ಮಹಿಳೆಯರನ್ನು, ಬಡವರನ್ನು) ಆಳುವ, ಶೋಷಿಸುವ ಒಂದು ಹೊಸ ಸಾಧನವಾಗಿ ಬಿಡುತ್ತದೆ. ಎಂಬುದೆ ಅವರ ಸಂಕಟ.

ಎಲೆಕ್ಟ್ರಾನಿಕ್ ಮಾಧ್ಯಮಗಳ ಆವಿಷ್ಕಾರದೊಂದಿಗೆ ನಮ್ಮ ಮನೋರಂಜನೆ ಖಾಸಗೀಕರಣವಾಗಿದ್ದು ನಮಗೆ ತಿಳಿದ ವಿಷಯವೆ. ಅಂದರೆ ಮನೋರಂಜನೆಯ ಹೊಸ ಜವಾಬ್ದಾರಿ ವಹಿಸಿಕೊಂಡ (ಕಸಿದು ಕೊಂಡ?) ಟಿ.ವಿ. ರೇಡಿಯೋ, ಸಿನಿಮಾಗಳೆಲ್ಲಾ ಖಾಸಗೀ ಮಾಲಿಕತ್ವದಲ್ಲೆ ಉಳಿದುಬಿಟ್ಟಿವೆ. ಇಂದು ಕಾಂಪ್ಯೂಟರೀಕರಣದಿಂದ ಜ್ಞಾನವು ಖಾಸಗೀಕರಣ ಆಗುವ ಹಂತದಲ್ಲಿದೆ. ಸಹಜವಾಗಿ ಈಗಾಗಲೇ ಶಿಕ್ಷಣ ಹೊಂದಿರುವ ಹಣವಿರುವ ಮೇಲ್ಜಾತಿ - ಮೇಲ್ವರ್ಗವೇ ಜ್ಞಾನದ ಒಡೆತನವನ್ನು ಪಡೆದು ಕೊಳ್ಳುತ್ತದೆ.

ಇನ್ನು ವಧು ಅನ್ವೇಷಣಾ ಪುಟಗಳತ್ತದೃಷ್ಟಿಹರಿಸೋಣ. (ಈ ವಿಶ್ಲೇಷಣೆಯ ಅನುಕೂಲಕ್ಕಾಗಿ ನಾನು ಭಾನುವಾರ, ಮಾರ್ಚ್ 25, 2001 ರ 'ದಿ ಹಿಂದು' ದೈನಿಕದ Classifides ಪುಟಗಳನ್ನಷ್ಟೆ ಉಪಯೋಗಿಸಿಕೊಂಡಿದ್ದೇನೆ. ಆದರೆ ಈ ಕ್ರಮವನ್ನೇನು 'ದಿ ಹಿಂದು' ವನ್ನು ಬಲಿಪಶುವನ್ನಾಗಿಸಿ ಉಳಿದ ಪತ್ರಿಕೆಗಳಿಗೆಲ್ಲ ಕ್ಲೀನ್ ಚಿಟ್ ಕೊಟ್ಟಿದ್ದೇನೆಂದು ಅರ್ಥೈಸಬೇಕಾಗಿಲ್ಲ.) ಈ ಪುಟಗಳಿಗೂ ಮಾಹಿತಿ ತಂತ್ರಜ್ಞಾನಕ್ಕೂ ಎಲ್ಲಿಯ ಸಂಬಂಧ ಎಂದು ನೀವು ಆಶ್ಚರ್ಯಪಡುವ ಮುನ್ನ ವಧು ಅನ್ವೇಷಣೆಯ ಈ ಕೆಲ ಜಾಹಿರಾತುಗಳನ್ನು ಓದಿ.

"...good looking, fair girl with BE / MCA/Degree with Computer Knowledge"

"...suitable, auffluent graduate bride with Computer Knowledge for ..."

" ....Wanted fair graduate bride with Computer knowledge ..... "

" ....good looking bride with computer background ...."

(ಆ ದಿನ ಮುದ್ರಿತ ಒಟ್ಟು 273ವಧುಅನ್ವೇಷಣಾ ಜಾಹಿರಾತುಗಳಲ್ಲಿ 44 ಜಾಹಿರಾತುಗಳು ಕಾಂಪ್ಯೂಟರ್‌ಶಿಕ್ಷಣ ಹೊಂದಿರುವ ವಧುವನ್ನು ಅಪೇಕ್ಷಿಸಿದ್ದರು) ಈ ಜಾಹಿರಾತುಗಳಿಗೆ ಉತ್ತರವೆಂಬಂತೆ ವರಾನ್ವೇಷಣೆಯ ಈ ಜಾಹಿರಾತುಗಳನ್ನು ಓದಿ

"...suitable alliance for ...fair, well accomplished, M A. and computer basics...."

" ....B. com., Computer Knowledge officer in Bank"....

" ....M. Sc (phy) computer literate, hornely ...."

ಗೋತ್ರ , ಹಣ, ಜಾತಿ, ಸೌಂದರ್ಯಗಳ ನಡುವೆ ಇಂದು ಕಾಂಪ್ಯೂಟರ್ ಶಿಕ್ಷಣವು ಮದುವೆ ಮಂಡಿ ಪ್ರವೇಶಿಸಲು ಅನಿವಾರ್ಯ ಅರ್ಹತೆಯಾಗಿ ಬೆಳೆಯುತ್ತಿದೆ. ಪುರುಷನ ಅಂತಸ್ತು ನಿರ್ಣಯಿಸುವಲ್ಲಿ ಹೆಂಡತಿಯ ಇತರ ಎಲ್ಲಾ ಅರ್ಹತೆಗಳೊಂದಿಗೆ ಕಾಂಪ್ಯೂಟರ್ ಶಿಕ್ಷಣವು ಒಂದು ಅಳತೆಗೋಲಾಗಿರುವುದು ಬಂಡವಾಳಶಾಹಿಯ ಜಾಹಿರಾತಿನ ಪರಿಣಾಮವೆಂದೆ ನನ್ನವಾದ. ಇದರಿಂದ ಶಿಕ್ಷಣಕ್ಕೆ ಒತ್ತಾಯ ಸಿಕ್ಕಿದಂತಾಗಿಲ್ಲವೆ ಎಂದು ಯಾರಾದರು ಪ್ರಶ್ನಿಸಿದರೆ ಬಂಡವಾಳಶಾಹಿ ಆಧುನಿಕತೆಗಳು ಮಾಹಿತಿತಂತ್ರಜ್ಞಾನದ ಹೆಸರಿನಲ್ಲಿ ನಡೆಸಿದ ಪ್ರಯತ್ನವೆಲ್ಲ ಸಫಲವಾಯಿತೆಂದೆ ಅರ್ಥ. ಕಾರ್ಮಿಕ ಕಾನೂನುಗಳೆಲ್ಲದರ ಹೊರಗುಳಿದುಕೊಂಡೇ ಪುರುಷನ ಮನೆಯ ಸೇವೆಗಳನ್ನೆಲ್ಲ ಉಚಿತವಾಗಿ ಮಾಡುತ್ತ ಬಂದಿರುವ ಪತ್ನಿ ಎಂಬ ಹೆಣ್ಣು (ಅದಕ್ಕೆ ಬೋನಸ್ ಆಗಿ ಹಲವು ಬಾರಿ ಹಿಂಸೆ, ಅವಹೇಳನ, ಇತ್ಯಾದಿ ಆಕೆಗೆ ಸಿಗುತ್ತಿರುತ್ತವೆ.)ಇನ್ನು ಮುಂದೆ ಪ್ರತಿಷ್ಟಿತ ಕಂಪನಿಯಲ್ಲಿ ಕೆಲಸ ಮಾಡುವ ಗಂಡನೆಂಬ ಪುರುಷನ ಕಾರಕೂನ (ಕ್ಲರ್ಕ್)ಳಾಗಿಯ ಕೆಲಸ ನಿರ್ವಹಿಸುವ ಪರಿಸ್ಥಿತಿ ಉಂಟಾಗುತ್ತಿರುವುದನ್ನು ನಾವಿಲ್ಲಿ ತಿಳಿಯಬಹುದು. ಇದು ಪ್ರಜಾತಂತ್ರ, ಸ್ವಾತಂತ್ರ್ಯ ಪ್ರಿಯ, ಆಧುನಿಕ ಮಾಹಿತಿ ತಂತ್ರಜ್ಞಾನ ಸ್ತ್ರೀಯರಿಗೆ ಕೊಡುತ್ತಿರುವ ಬಳುವಳಿ. ಮಾಹಿತಿ ತಂತ್ರಜ್ಞಾನವನ್ನು ಪುರುಷ ನಿಷ್ಠಸಂಸ್ಕೃತಿ ಪ್ರಚಾರ ಪಡಿಸುತ್ತಿರುವುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇರೆ ಸಿಗದು. ಸ್ತ್ರೀಯರ ನಾಕೈದು ದಶಕಗಳ ಅವಿರತ ಹೋರಾಟಕ್ಕೆ ಬಂಡವಾಳಶಾಹಿ ಯಂತ್ರ ಶಕ್ತಿ ವ್ಯವಸ್ಥೆಗಳು ಪ್ರತಿಕ್ರಿಯಿಸಿರುವ ಮತ್ತೊಂದು ಮಾರ್ಗ 'ಜನಪ್ರಿಯ ಸ್ತ್ರೀವಾದ'(pop-Feminism) ಚಲನಚಿತ್ರದ ಉದ್ದಕ್ಕು ಹೆಣ್ಣನ್ನು ಅವಮಾನಪಡಿಸಿ ಕಡೆಯಲ್ಲಿ ನಾಯಕಿ ಅಥವಾ ನಾಯಕಿ/ಕ ನ ತಾಯಿಯ ಕೈಯಲ್ಲಿ ದೂರ್ತ ಖಳನಾಯಕನನ್ನು ಸಾಯಿಸಿ ತನ್ನ ಸ್ತ್ರೀ ನಿಷ್ಟತೆ ಮೆರೆಯುವ ರೀತಿಯೆ ಈ Pop-feminism.

ಬಂಡವಾಳಶಾಹಿಯಂತ ವಿಶ್ವ ಶಕ್ತಿವ್ಯವಸ್ಥೆ(power system) ಇತರ ಶಕ್ತಿ ವ್ಯವಸ್ಥೆಗಳೊಂದಿಗೆ ಸದಾ ಹೋರಾಡುತ್ತಿರುವ ಅನಿವಾರ್ಯತೆಗೆ ಕಟ್ಟುಬಿದ್ದಿರುತ್ತದೆ. ಉದಾ: ಬಂಡವಾಳಶಾಹಿ ಭಾರತದಲ್ಲಿ ಸ್ವದೇಶಿವಾದ, ಸ್ತ್ರೀ /ದಲಿತವಾದಗಳಿಂದ ಹಲವಾರು ರೀತಿಯ ಕಠಿಣ ವಿರೋಧ ಎದುರಿಸಬೇಕಾಗಿದೆ. ಇದರ ಫಲವಾಗಿ ಈ ಬಂಡವಾಳ ಶಾಹಿ ಬದುಕುಳಿಯಬೇಕಾದರೆ ತನ್ನ ಎದುರಾಳಿಗಳ ವಿರುದ್ಧ ತನ್ನನ್ನೆ ಅದು ಪ್ರತಿನಿತ್ಯ ಪುನರ್ ಪ್ರತಿಷ್ಠಾಪಿಸಬೇಕಾಗುತ್ತದೆ, ಹೊಸದಾಗಿ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಹೊಸ

ರೂಪ ಧರಿಸಿಕೊಂಡು ಹೋರಾಟಕ್ಕೆ ಸಿದ್ಧವಾಗಬೇಕಾಗುತ್ತದೆ, ಈ ರೀತಿಯ ಒಂದು ಶಕ್ತಿ ವ್ಯವಸ್ಥೆ ತನ್ನ ಪುನರಪಿ ಜನನಗಳಲ್ಲಿ ಎರಡು ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ.

(1) ಶೋಷಣೆಯ ಸಾಧನ, ಸಾಮಗ್ರಿಗಳ ಆಧುನೀಕರಣ. ಅಂದರೆ ಹಿಂದೆ (ಉದಾರಣೆಗೆ)ದಲಿತರ / ಸ್ತ್ರೀಯರ ಶೋಷಣೆಗೆ ಅಸ್ಪೃಶ್ಯತೆ / ಮಡಿಇತ್ಯಾದಿಗಳ ಬಳಕೆಯಾಗುತ್ತಿತ್ತು. ಮಾಹಿತಿ ತಂತ್ರಜ್ಞಾನದ ರೀತಿಯ ಪ್ರಜಾತಂತ್ರ ಮಾನವೀಯ, ಸ್ವಾತಂತ್ರ್ಯ ಪ್ರಿಯ! ವ್ಯವಸ್ಥೆಯಡಿ ಇಂದು ಅವೆರಡನ್ನು ಬಳಸಲು ಸಾಧ್ಯವಿಲ್ಲ. ಆದ್ದರಿಂದ ಹಿಂದುಳಿದವರನ್ನು ಅಸ್ಪೃಶ್ಯ ಎಂದು ದೂರವಿಡುವ ಬದಲು ಮಾಹಿತಿ ತಂತ್ರಜ್ಞಾನ ಇಂದು ಮೆರಿಟ್ ಎಂಬ ಹೊಸ ಉಚ್ಚಾಟನ ತಂತ್ರ ಬಳಸುತ್ತಿದೆ. ಸಹಜವಾಗಿ ಬ್ರಾಹ್ಮಣ / ಪುರುಷ ನಿಷ್ಠ ಸಮಾಜದಲ್ಲಿ ಮೆರಿಟ್ ಮಾದರಿಯಲ್ಲಿ ಮೇಲ್ವರ್ಗ, ಮೇಲ್ಜಾತಿ ಜನಗಳಿಗೇ ಕೊಡಬೇಕಾಗುತ್ತದೆ. ಆದ್ದರಿಂದಲೇ ಖಾಸಗೀಕರಣವೆನ್ನುವುದು (ಮಾಹಿತಿ ತಂತ್ರಜ್ಞಾನ ಖಾಸಗೀಕರಣದ ಏಕೈಕ ಗಂಡು ಮಗು!) ಸರ್ಕಾರ ಕೇವಲ ಪ್ರಸ್ತುತ ಆರ್ಥಿಕ, ರಾಜಕೀಯ, ಅಥವಾ ಔದ್ಯೋಗಿಕ ನೀತಿ, ಒತ್ತಡಗಳನ್ನು ಎದುರಿಸಲು ಬಳಸುತ್ತಿರುವ ಸಾಧನವಲ್ಲ, ಹೆಚ್ಚುತ್ತಿರುವ ಬಡವರ, ವಿಶೇಷವಾಗಿ ದಲಿತರ ಬೇಡಿಕೆಗಳನ್ನು ದಮನಿಸಲು ಉಪಯೋಗಿಸುತ್ತಿರುವ ಅಸ್ತ್ರವೂ ಕೂಡ ಹೌದು. ಇದಕ್ಕೆ ಉಳಿದಿರುವ ಏಕೈಕ ಪರಿಹಾರವೆಂದರೆ ಖಾಸಗೀಕ್ಷೇತ್ರದಲ್ಲಿ ಎಲ್ಲಾ ರೀತಿಯ. ಮೀಸಲಾತಿಯನ್ನು ಜಾರಿಗೊಳಿಸುವುದಷ್ಟೆ.

(2) ಆತ್ಮ ಸ್ತುತಿಯಲ್ಲಿ ತೊಡಗಿಸಿಕೊಳ್ಳುವುದು, ತನ್ನ ಬಗ್ಗೆ ಸುಲಭ ಅಭಿಪ್ರಾಯಗಳನ್ನು ಪ್ರಚಾರ ಮಾಡುವುದು/ ಮಾಡಿಸುವುದು ಇತ್ಯಾದಿ. ಜನಪ್ರಿಯ ಸ್ತ್ರೀವಾದ, ದಲಿತರ ಬಗ್ಗೆ ಹುಸಿ ಅನುಕಂಪ (ಉದಾ:ಕೆಲವು ಕಡೆ ಉಚಿತ ಕಂಪ್ಯೂಟರ್ ಶಿಕ್ಷಣ - ಮಹಿಳೆ (ದಲಿತರಿಗೆ ಇತ್ಯಾದಿ) ಹುಟ್ಟುಹಾಕುವುದು ಹಾಗೂ ಕ್ರಿಕೆಟ್‌ನಂತಹ ಜನಪ್ರಿಯ ಕಾರ್ಯಕ್ರಮಗಳನ್ನು ಪ್ರಾಯೋಜಿಸಿ ಜನಮನ ಗೆಲ್ಲುವುದು.

ಈ ಲೇಖನ ಆ ರೀತಿಯ ಬಂಡವಾಳ ಶಾಹಿಯ ಕೆಲಪ್ರಯತ್ನಗಳನ್ನೇ ವಿರಚಿಸುವ ಪ್ರಯತ್ನ ಮಾಡಿದ್ದು. ಆದರೆ ಇದು ಏಕ ವ್ಯಕ್ತಿಯ ಹೋರಾಟ ಆಗಲಾರದು/ಆಗಬಾರದು. ಚರ್ಚೆ ಬೆಳೆಯಬೇಕು, ನಿಲುವು ಗಟ್ಟಿಗೊಳ್ಳಬೇಕು. ಈ ಕಾರ್ಯದಲ್ಲಿ ಹಲವು ಜನರು ಭಾರತದಲ್ಲಿ ಈಗಾಗಲೇ ತಮ್ಮನ್ನೇ ತೊಡಗಿಸಿಕೊಂಡಿದ್ದಾರೆ. ಬಹುಶಃ ಆದರ ಪ್ರಯತ್ನವನ್ನು ನಾವು ಅರ್ಥಮಾಡಿಕೊಳ್ಳುವುದೆ ಅವರಿಗೆ ಕೊಡುವ ಪ್ರಾಥಮಿಕ ಬೆಂಬಲ.

■

ಜಾಗತೀಕರಣದ ಸಾಂಸ್ಕೃತಿಕ ನೆಲೆ

ಎಸ್. ಆರ್. ವಿಜಯಶಂಕರ

ನಿನ್ನ ನಗೆಯನ್ನೆ ಮೊಳಗುತ್ತಿರುವ ಮಲ್ಲಿಗೆ,
ನಿನ್ನ ನಲ್ಮೆಯ ನೆಳಲನೀವ ಮಾವು;
ನಿನ್ನೊಲವನಪ್ಪಿ ತೋರುವ ಕೊಳದ ತಳ ಕೆಸರು-
ಇಲ್ಲಾಡುವುದು - ಇದೇ ಹೊಸ ಠರಾವು


(ಕೂಪ ಮಂಡೂಕ)
-ಗೋಪಾಲಕೃಷ್ಣ ಅಡಿಗ

ಆರ್ಥಿಕ ರಂಗದಲ್ಲಿ 'ಜಾಗತೀಕರಣ' ಇಂದು ಎಲ್ಲಾ ಸರ್ಕಾರಗಳ ಮೂಲಮಂತ್ರ. ಅದಕ್ಕೆ ಪೂರಕವಾಗಿರುವುದು ಮಾಹಿತಿ ತಂತ್ರಜ್ಞಾನ ಜಗತ್ತಿನಾದ್ಯಂತ ಹೆಣೆದಿರುವ ಅತ್ಯದ್ಭುತವಾದ ಜಾಲ-ಇಂಟರ್‌ನೆಟ್. ಇವೆಲ್ಲಾ ಸಾಂಸ್ಕೃತಿಕವಾಗಿ ಉಂಟುಮಾಡುವ ಪರಿಣಾಮಗಳೇನು ಎಂಬುದು ನಮ್ಮ ಇಂದಿನ ಮುಖ್ಯ ಕಾಳಜಿಗಳಲ್ಲಿ ಒಂದು.

ನಿರಂತರವಾಗಿ ಅರಸುವ ಮನುಷ್ಯನ ಮನಸ್ಸೇ ಮಾನವ ಸಂಸ್ಕೃತಿಯ ಜೀವಾಳ. ಆ ತಳಹದಿಯ ಮೇಲೆ ನಾವು ಅನೇಕ ವಿವರಗಳನ್ನು ನಿರ್ಮಿಸಿಕೊಂಡಿದ್ದೇವೆ. ಪರಿಸರ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ರೂಪಗಳು ಬೇರೆ. ನಿರಂತರವಾದ ಈ ಶೋಧನೆಯ ಕ್ರಮಗಳೂ ಬೇರೆ.

ಮನುಷ್ಯ ಅರಿಯುವ ಒಂದು ರೀತಿ-ತಾನು ಇರುವ ತಾಣವೇ ಸಮಸ್ತ ಲೋಕವೂ ಇರುವ ತಾಣವೆಂದು ತಿಳಿದು ಶೋಧಿಸುವುದು. ಇನ್ನೊಂದು ಪ್ರಪಂಚವಿಡೀ ಸುತ್ತಿ, ಹುಡುಕಿ ಅರಸಿ ಕಾಣಲು ಹೊರಡುವುದು. ಇದನ್ನೊಂದು ಪೌರಾಣಿಕ ಉದಾಹರಣೆಯಿಂದ ಹೇಳುವುದಾದರೆ - ಪ್ರಪಂಚ ಪ್ರದಕ್ಷಿಣೆ ಮಾಡು ಎಂದರೆ ಗಣಪತಿ, ತನ್ನ ತಾಯಿತಂದೆಯರಿಗೆ ಒಂದು ಸುತ್ತು ಬರುತ್ತಾನೆ. ಷಣ್ಮುಖನಾದರೋ ಪಕ್ಷಿವಾಹನನಾಗಿ ಭೂ ಪ್ರದಕ್ಷಿಣೆ ಮಾಡುತ್ತಾನೆ.

ಈ ಗಣಪತಿ ಹಾಗೂ ಸುಬ್ರಹ್ಮಣ್ಯರ ಗಮನ ಆದಿಯಿಂದಲೂ ಮನುಷ್ಯ ನಿರಂತರವಾಗಿ ಅರಸುತ್ತಾ ಬಂದ ಎರಡು ಸಾಧ್ಯತೆಗಳನ್ನು ಸೂಚಿಸುತ್ತದೆ. ಒಂದು ಇರುವಲ್ಲೇ ಇದ್ದು ಕಾಣಬಹುದಾದ್ದು. ಮತ್ತೊಂದು ಭೂ ಪ್ರದಕ್ಷಿಣೆಯಲ್ಲಿ ಪಡೆಯಬಹುದಾದ್ದು. ತೀರ್ಥಯಾತ್ರೆಗೆ ಎದುರಾಗಿ ಗಂಗೇಚ ಯಮುನೇ ಚೈವಾ ಗೋದಾವರೀ ಸರಸ್ವತಿ ಎಂದು ತನ್ನ ಮನೆ ಬಾವಿಯ ನೀರನ್ನು ಪ್ರೋಕ್ಷಣೆ ಮಾಡಿಕೊಳ್ಳುವ ಕ್ರಮದಂತೆ. ಇವರೆಡೂ ಪ್ರತ್ಯೇಕವಾದ ಎರಡು ಸಾಧ್ಯತೆಗಳನ್ನು ನಿರಂತರವಾಗಿ ತೋರಿಸುತ್ತಾ



ಬಂದಿವೆ. ನಾವು ಟೆಕ್ನಾಲಜಿ (Technology) ಎನ್ನುವ ಇಂದಿನ ಯಂತ್ರಕಲಾ ಶಾಸ್ತ್ರವು ಬಹುಶಃ ಈ ಎರಡೂ ಸಾಧ್ಯತೆಗಳನ್ನು ಒಂದಾಗಿ ನೀಡಲು ಪ್ರಯತ್ನಿಸುತ್ತಿದೆಯೇನೋ ಎಂದು ಅನಿಸುತ್ತಿದೆ.

ಇಂದಿನ ಇಂಟರ್‌ನೆಟ್ ಟೆಕ್ನಾಲಜಿ-ಒಂದು ರೀತಿಯಲ್ಲಿ ಗಣಪತಿ ಹಾಗೂ ಸುಬ್ರಹ್ಮಣ್ಯರನ್ನು ಒಟ್ಟಿಗೆ ಕೊಡಬಲ್ಲ ಜಾಲ. ಇರುವ ತಾಣದಲ್ಲೇ ಇದ್ದರೂ ಜಗತ್ತಿನ ನಂಟಿನ ನೇರ ಸಂಪರ್ಕ. ಒಂದನ್ನು ಇನ್ನೊಂದಕ್ಕೆ ಹೆಣೆಯುವ ಈ ಬಂಧ ಇದ್ದಲ್ಲೇ ಇದ್ದೂ ನಿಜವಾದ ಪ್ರಪಂಚ ಪ್ರದಕ್ಷಿಣೆಯನ್ನು ಒದಗಿಸಿಕೊಡುವಂತಹದ್ದು.

ಅನಾದಿಯಿಂದ ಇಂದಿನವರೆಗೆ ಮನುಷ್ಯನ ಮುಖ್ಯ ಸಂಕ್ರಮಣ ಹಂತಗಳನ್ನು ಗುರುತಿಸಿ ಉದ್ಯೋಗದ ಸಂಸ್ಕೃತಿ ಹಾಗೂ ಅದಕ್ಕೆ ಬೇಕಾದ ಆಡಳಿತ ತಂತ್ರದ ಬದಲಾವಣೆಗಳನ್ನು ನಾವು ಸುಲಭವಾಗಿ ಪಟ್ಟಿ ಮಾಡಬಹುದು. ಮರದಿಂದ ಇಳಿದ ಕಾಡು ಮನುಷ್ಯ ಒಂದು ಕಡೆ ನೆಲೆ ನಿಲ್ಲಲು ಕಲಿತದ್ದು. ನಂತರದ ಹಂತಗಳು ಕೃಷಿ, ಕೈಗಾರಿಕಾ ಕ್ರಾಂತಿ. ಮುಂದಿನ ಹಂತವಾದ ಕಂಪ್ಯೂಟರ್ ಮೂಲದಿಂದ ಇಂಟರ್‌ನೆಟ್ ವ್ಯವಸ್ಥೆ ಬೆಳೆದಂತೆ ನಮ್ಮ ಉತ್ಪಾದನೆ ಹಾಗೂ ಕೆಲಸದ ಕ್ರಮದಲ್ಲಿ - ಮುಖ್ಯವಾಗಿ ಕೆಲಸದ ಜಾಗಗಳ ವಿಕೇಂದ್ರೀಕರಣ ಆಗುತ್ತದೆ. ಹಾಗೆಯೇ ಈ ವಿಕೇಂದ್ರೀಕರಣದ ನಿಯಂತ್ರಣವೂ ಕೇಂದ್ರೀಕರಣಕ್ಕೆ ಒಳಗಾಗುತ್ತದೆ.

ನೇರವಾದ ಎಂಜಿನಿಯರಿಂಗ್ ಉತ್ಪಾದನೆ, ಗಣಿಗಾರಿಕೆ ಮುಂತಾದವನ್ನು ಬಿಟ್ಟರೆ, ಇತರ ವಾಣಿಜ್ಯ ವ್ಯವಹಾರದ ಕೆಲಸದ ಜಾಗಕ್ಕೆ ಕಚೇರಿಗಳೇ ಬೇಕಾಗಿಲ್ಲ. ಮನೆಯಲ್ಲಿ, ಪ್ರವಾಸದಲ್ಲಿ ಎಲ್ಲಿದ್ದರೂ ಇಂಟರ್‌ನೆಟ್ ಸಂಪರ್ಕದ ಮೂಲಕ ಕೆಲಸ ಮಾಡುತ್ತಾ ಇರಬಹುದು. ಕೆಲಸಕ್ಕಾಗಿ ಕಚೇರಿಗಳಿಗೆ ಹೋಗಬೇಕಾಗಿಯೇ ಇಲ್ಲ. ನಾನು ಈಗ ಕೆಲಸ ಮಾಡುತ್ತಿರುವ ಸಿಸ್ಕೊ ಸಿಸ್ಟಮ್ಸ್ ಕಂಪೆನಿ ಭಾರತದಲ್ಲೇ ಇಂತಹ ಸಾಧ್ಯತೆಗಳ ಸೂಕ್ಷ್ಮರೂಪಗಳನ್ನು ತೋರಿಸುತ್ತಾ ಇದೆ. ಸಿಸ್ಕೊ ಸಿಸ್ಟಮ್‌ನ ಮುಂಬಯಿ ಕಚೇರಿಯಲ್ಲಿ ಒಬ್ಬ ಉದ್ಯೋಗಿಗೆ ಆಫೀಸಿನಲ್ಲಿ ನಿಶ್ಚಿತವಾದ ಮೇಜು ಕುರ್ಚಿ, ಜಾಗ ಇಲ್ಲ. ಆಫೀಸಿಗೆ ಬಂದಾಗ ಖಾಲಿ ಇದ್ದ ಮೇಜು ಕುರ್ಚಿಯಲ್ಲಿ ಕುಳಿತು ಅಲ್ಲಿರುವ ಇಂಟರ್‌ನೆಟ್ ಸಾಕೆಟ್‌ಗೆ ಲ್ಯಾಪ್‌ಟಾಪ್ ಕಂಪ್ಯೂಟರನ್ನು ಜೋಡಿಸಿಕೊಂಡರೆ ಆಯಿತು. ಇಂಟರ್‌ನೆಟ್ ಮೂಲಕ ಮೇಜಿನ ಫೋನು, ಧ್ವನಿ ರೆಕಾರ್ಡಿಂಗ್ ಎಲ್ಲವೂ ಸಂಪರ್ಕಕ್ಕೆ ಬಂದು ತಾನು ಇರುವ ತಾಣದಲ್ಲೇ ಕೆಲಸದ ಕಚೇರಿ ಸಿದ್ಧವಾಗುತ್ತದೆ. ಇದು ಸಿಸ್ಕೊ ಕಂಪೆನಿಯ Nine World Office. ಮುಂದೆ ಇದೇ ಟೆಕ್ನಾಲಜಿಯ ಬಳಕೆ ಹೆಚ್ಚಾದಾಗ ಅದಕ್ಕೆ ಆಫೀಸು, ಮನೆ, ಯಾವ ವ್ಯತ್ಯಾಸಗಳೂ ಇಲ್ಲ. ಬರೆಯುವ ಪೇಪರುಗಳ ಅಗತ್ಯವೇ ಇಲ್ಲ.

ಇಂತಹ ಟೆಕ್ನಾಲಜಿ ಕೆಲಸಕ್ಕೆ ವಿಕೇಂದ್ರೀಕೃತ ವ್ಯವಸ್ಥೆ ಮಾಡಿದಂತೆಯೇ, ಇಡೀ ಜಗತ್ತಿಗೇ ಒಂದು ಕೇಂದ್ರೀಕೃತ ವ್ಯವಸ್ಥೆಯನ್ನು ಸಮರ್ಥವಾಗಿ ಅದೇ ಇಂಟರ್‌ನೆಟ್ ಟೆಕ್ನಾಲಜಿ ಮೂಲಕ ನಿರ್ಮಿಸಿಕೊಡಬಲ್ಲದು. ಇಂತಹ ಟೆಕ್ನಾಲಜಿ ಸಂಸ್ಕೃತಿಯ ಮೇಲೆ ಬೀರುವ ಪ್ರಭಾವ ಈ ಹೊಸ ರಚನೆಯಲ್ಲೇ ಅಡಗಿದೆ.

ಸಾಫ್ಟ್‌ವೇರ್ ಕಂಪೆನಿಯ ಕೆಲಸಗಾರರು ನಿತ್ಯ ತಮ್ಮ ಮೇಜಿನ ಮೇಲಿರುವ ಕಂಪ್ಯೂಟರ್ ಹಾಗೂ ಇಂಟರ್‌ನೆಟ್‌ನಿಂದಾಗಿ ಪ್ರಪಂಚದಾದ್ಯಂತ ತಮ್ಮದೇ ಒಂದು ಗುಂಪನ್ನು ಅದರದ್ದೇ ನೀತಿ ನಿಯಮಗಳನ್ನು ಹೊಂದಿರುತ್ತಾರೆ. ನಾನು ಕೆಲಸ ಮಾಡುವ ಕಂಪೆನಿ ಸಿಸ್ಕೊ ಸಿಸ್ಟಮ್ಸ್ ಭಾರತದಲ್ಲೇ ಬಹುದೊಡ್ಡದಾದ

ಸಂಪರ್ಕಜಾಲ ಹೊಂದಿದೆ. ಕೆಲಸದ ಕಚೇರಿಯಲ್ಲಿ ನನ್ನ ಮೇಜಿನ ಮೇಲೆ ಸದಾ ಇರುವ 12 ಎಂ.ಬಿ. ಪಿ.ಸಿ. (ಒಂದು ಸೆಕಂಡಿಗೆ ನೀಡಬಲ್ಲ 12 ಮೆಗಾಬಿಟ್ಸ್ ಕಂಪ್ಯೂಟರ್ ಇಂಟರ್‌ನೆಟ್ ಜಾಲ ಸಂಪರ್ಕ) ಇಂಟರ್‌ನೆಟ್ ಸಂಪರ್ಕ ಅನೇಕ ಟೆಕ್ನಾಲಜಿ ವಿಚಾರಗಳನ್ನು ಒಂದು ಸಾಧಾರಣ, ಸಾಮಾನ್ಯ ವಿಚಾರವೆನ್ನಿಸುವಂತೆ ಮಾಡಿದೆ. ಆದರೆ ಭಾರತದಲ್ಲಾಗಲಿ, ಅಮೆರಿಕಾ ದೇಶದಲ್ಲೇ ಆಗಲಿ ಕಂಪ್ಯೂಟರ್ ಕಂಪೆನಿಗಳಿಂದ ಹೊರಗೆ ಕೆಲಸ ಮಾಡುವವರ ಜೊತೆ ವ್ಯವಹರಿಸುವಾಗ , ಈ ಟೆಕ್ನಾಲಜಿ ನನ್ನಲ್ಲಿ ಉಂಟು ಮಾಡಿದ ಮನಸ್ಥಿತಿ ಬಹಳ ಸಂಕಷ್ಟಗಳನ್ನು ಒಡ್ಡುತ್ತದೆ.

ಈಗ ಐದಾರು ವರುಷಗಳ ಹಿಂದೆ, ದೊಡ್ಡ ಪ್ರಮಾಣದ ಎಂಜಿನಿಯರಿಂಗ್ ವಸ್ತುಗಳ ತಯಾರಿಕಾ ಸಂಸ್ಥೆಯಾದ ಎಚ್.ಎಂ.ಟಿ. ಕಂಪೆನಿಯ ಕೆಲಸ ಬಿಟ್ಟು ಅಮೆರಿಕಾದ ಪ್ರಖ್ಯಾತ ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಒಂದಾದ ನಾವೆಲ್ ಸಾಫ್ಟ್‌ವೇರ್ ಸಂಸ್ಥೆಯ ಟೆಕ್ನಾಲಜಿ ಕಮ್ಯುನಿಕೇಷನ್‌ನ ಮುಖ್ಯ ಅಧಿಕಾರಿಯಾಗಿ ಸೇರಿಕೊಂಡಾಗ ಅದು ಸಾರ್ವಜನಿಕ ಸಂಪರ್ಕ ವಲಯದಲ್ಲಿ ಬೆಂಗಳೂರು ನಗರದೊಳಗೆ ಎಲ್ಲರೂ ಗಮನಿಸಿದ ಸುದ್ದಿಯಾಯಿತು. ಬಹಳ ಜನ ಆ ಹುದ್ದೆಗೆ ಆಯ್ಕೆಯಾಗದೇ ಇದ್ದಾಗ ಸಾರ್ವಜನಿಕ ಸ್ವಾಮ್ಯದ ಕಂಪೆನಿಯೊಂದರ ಉದ್ಯೋಗಿಯಾಗಿದ್ದ ನನ್ನ ಆಯ್ಕೆಗೆ ಇದ್ದ ವಿಶೇಷತೆ ಏನು ಎಂಬುದು ಅನೇಕರಿಗೆ ಆಶ್ಚರ್ಯ ಉಂಟಾಗಲು ಕಾರಣ. ಯಾವುದೇ ಪ್ರಭಾವಕ್ಕೂ ಒಳಗಾಗದೆ ಇಂತಹ ಅಂತರಾಷ್ಟ್ರೀಯ ಕಂಪೆನಿಗಳ ಆಯ್ಕೆ ನಡೆಯುವುದರಿಂದ ಈ ಆಯ್ಕೆಯ ಕಾರಣದ ಕುತೂಹಲ ಹೆಚ್ಚಿರುತ್ತದೆ.

ನನ್ನ ಆಯ್ಕೆಗೆ ಕಾರಣವಾದ ಬಯೋಡೇಟ ನೀಡುವುದು ಇಲ್ಲಿ ನನ್ನ ಉದ್ದೇಶವಲ್ಲ. ಸಾಂಸ್ಕೃತಿಕ ಗಮನ ಎಲ್ಲಾ ಕಡೆ ಹೇಗೆ ಅನಿವಾರ್ಯ ಎಂಬುದನ್ನು ಸೂಚಿಸುವುದಕ್ಕಾಗಿ ಮಾತ್ರ ಈ ಮಾತು. ಬಹು ದೀರ್ಘವಾಗಿ ನಡೆದ ಅನೇಕ ಸುತ್ತಿನ ಸಂದರ್ಶನದ ಕೊನೆಯಲ್ಲಿ ನಾವೆಲ್‌ನ ಆಡಳಿತ ನಿರ್ದೇಶಕರು ನನಗೆ ಕೇಳಿದ ಪ್ರಶ್ನೆ. "ಒಂದೇ ವಾಕ್ಯದಲ್ಲಿ ಹೇಳಬೇಕಾದರೆ, ಸಂಪರ್ಕದ ಮುಖ್ಯಾಧಿಕಾರಿಯಾಗಿ ನಿನ್ನ ಕೆಲಸವನ್ನು ಹೇಗೆ ಸಂಗ್ರಹಿಸುತ್ತಿ" ನಾನು ನೀಡಿದ ಉತ್ತರ ಸಾಂಸ್ಕೃತಿಕ ನೆಲೆಯಿಂದ ಬಂದುದಾಗಿತ್ತು. ನಾನು ಹೇಳಿದ ಒಂದೇ ವಾಕ್ಯ "I want to break man and machine relationship to establish humam relationship within & outside" ನನಗಿದ್ದ ಇತರ ಎಲ್ಲಾ ಅರ್ಹತೆಗಳಿಗಿಂತ ಹೆಚ್ಚಾಗಿ ಈ ಒಂದು ಮಾತು, ನನಗೆ ಕೆಲಸ ಸಿಕ್ಕುವಲ್ಲಿ ನಿರ್ಣಾಯಕ ಪಾತ್ರ ವಹಿಸಿತ್ತು.

ಸಾಫ್ಟ್‌ವೇರ್ ಹಾಗೂ ಕಂಪ್ಯೂಟರ್ ಕಂಪೆನಿಗಳೊಳಗೆ ಮನುಷ್ಯ ಮತ್ತು ಯಂತ್ರದ ಸಂಬಂಧಗಳ ಬಗ್ಗೆ ಅನೇಕ ಸಾವಿರ ಹಾಸ್ಯ ಚಟಾಕಿಗಳಿವೆ. ಅವೆಲ್ಲದರ ಹಿಂದೆ ಮನುಷ್ಯ ಪರಸ್ಪರ ಹೆಚ್ಚು ಹೆಚ್ಚು ಪರಕೀಯನಾಗುತ್ತಾ ಹೋಗುವ ಬಗ್ಗೆ ಆತಂಕ ತುಂಬಿದೆ. ಕಂಪೆನಿಯೊಳಗಿನ ಅಂತರ್ಜಾಲದ (ಇನ್‌ಟ್ರಾನೆಟ್) ನೋಟೀಸು ಬೋರ್ಡಿನಲ್ಲಿ ನೋಡಿ, ತನ್ನಿಂದ ನಾಲ್ಕು ಮೇಜು ಆ ಕಡೆ ಇರುವವನಿಗೆ ಹುಟ್ಟು ಹಬ್ಬದ ಶುಭಾಶಯ ಹೇಳಿ ಒಂದು ಇ-ಮೈಲ್ ಕಳುಹಿಸುತ್ತಾರೆ. ಐದು ನಿಮಿಷಗಳ ಬಳಿಕ ಆತ ಎದುರು ಸಿಕ್ಕಾಗ ಹುಟ್ಟುಹಬ್ಬದ ಶುಭಾಶಯ ಹೇಳುವುದಿಲ್ಲ. ಇದೊಂದು ಪುಟ್ಟ ಉದಾಹರಣೆ ಮಾತ್ರ. ಆದರೆ ಪರಿಣಾಮವೆಂದರೆ ಪರಸ್ಪರ ಮಾತಾಡುವ ಅವಶ್ಯಕತೆಯನ್ನೂ ಮನುಷ್ಯ ಯಂತ್ರಗಳ ಮೂಲಕವೇ ಪೂರೈಸುತ್ತಿದ್ದಾನೆ. ಇದು ದೂರವಾಣಿಯಂತೆ ಕನಿಷ್ಟ ಮಾತಿನ ಧ್ವನಿಯ ಅವಶ್ಯಕತೆಯನ್ನು ಹೊಂದಿಲ್ಲ. ಹುಟ್ಟಿದ ಹಬ್ಬದ ಶುಭಾಶಯಕ್ಕೆ, ಆಟೋಮೆಟಿಕ್ ಆದ 'ಕೃತಜ್ಞತೆಗಳು' ಇ-ಮೈಲ್ ಉತ್ತರವನ್ನು

ನಮ್ಮ ಕಂಪ್ಯೂಟರ್ ಸ್ವತಂತ್ರವಾಗಿ ಕಳುಹಿಸುವಂತೆ ಪ್ರೋಗ್ರಾಂ ಮಾಡಬಹುದು. ಅದೇ ರೀತಿ ಹುಟ್ಟುಹಬ್ಬದ ಶುಭಾಶಯಗಳನ್ನು ಕಂಪ್ಯೂಟರ್ ಸ್ವತಂತ್ರವಾಗಿ ಇನ್ನೊಂದು ವಿಳಾಸಕ್ಕೆ ಕಳುಹಿಸಬಹುದು. ಅಂದರೆ ಒಬ್ಬ ತೊಡಗಿಕೊಳ್ಳದೆ, ಸಹಜ ಸಂಪರ್ಕದಲ್ಲಿ ಆಪ್ತವಾಗಬೇಕಾಗಿದ್ದ ಒಂದು ಅಭಿವ್ಯಕ್ತಿಯನ್ನು, ಮಾನವ ಸಂಪರ್ಕವನ್ನು ಯಾವುದೇ ತೊಡಗುವಿಕೆ ಇಲ್ಲದೆಯೇ ಕೃತಕವಾಗಿ ಮಾಡಿ ಮುಗಿಸಬಹುದು.

ನಿರಂತರವಾಗಿ ಮೌಖಿಕ ಸಂವಹನದಲ್ಲಿ ಸಾವಿರಾರು ವರ್ಷಗಳ ಕಾಲ ಬೆಳೆದು ಬಂದ ಭಾರತದಂತಹ ದೇಶಗಳ ಸಾಂಸ್ಕೃತಿಕ ಸಂದರ್ಭದಲ್ಲಿ ಇದು ಬಹಳ ಆಘಾತಕಾರಿ. ಅದನ್ನು ತಡೆದುಕೊಳ್ಳುವ ಸಲುವಾಗಿ ಕಂಪ್ಯೂಟರ್ ಉದ್ಯೋಗದಲ್ಲಿ ತೊಡಗಿರುವವರು ಅನೇಕ ಹವ್ಯಾಸಗಳಿಗೆ ಇಳಿದಿರುತ್ತಾರೆ. ನಿತ್ಯ ಕಂಪ್ಯೂಟರ್ ಎದುರಿರುವವರು ಅತ್ಯಂತ ಹೆಚ್ಚು ಪಿಕ್‌ನಿಕ್, ಚಾರಣ, ಟ್ರೆಕ್ಕಿಂಗ್‌ಗಳಲ್ಲಿ ಭಾಗವಹಿಸುವವರಾಗಿರುತ್ತಾರೆ. ಸಾಕಷ್ಟು ಜನ ಉದ್ಯೋಗಿಗಳು, ಸಂಗೀತ, ಸಾಹಿತ್ಯ, ಚಿತ್ರಕಲೆ ಹೀಗೆ ಯಾವುದಾದರೊಂದು ಆಸಕ್ತಿ ಕುದುರಿಸಿಕೊಳ್ಳಲು ಹೆಣಗುತ್ತಾ ಇರುತ್ತಾರೆ. ಮ್ಯಾನುಫ್ಯಾಕ್ಚರಿಂಗ್ ಕಂಪೆನಿಗಳಿಗೆ ಹೋಲಿಸಿದರೆ, ಕಂಪ್ಯೂಟರ್ ಕಂಪೆನಿಗಳಲ್ಲಿ ಇಂತಹ ಆಸಕ್ತರ ಪ್ರಮಾಣ ಹೆಚ್ಚು. ಇದು ಸಾಂಸ್ಕೃತಿಕವಾಗಿ ಕಳಕೊಳ್ಳುತ್ತಿರುವುದನ್ನು ಇನ್ನೆಲ್ಲೋ ಪಡೆಯಲು ಪ್ರಯತ್ನಿಸುವ ಪ್ರಯತ್ನದಂತೆ ನನಗೆ ಒಮ್ಮೊಮ್ಮೆ ತೋರುತ್ತದೆ.

ಕಂಪ್ಯೂಟರ್ ಸಂಪರ್ಕ ಸಂಸ್ಕೃತಿ ಬೆಳೆಸುತ್ತಿರುವ ಹೊಸದಾದೊಂದು ಆಸಕ್ತಿ ಕ್ರಮೇಣ ಹೊಸದಾದ ಒಂದು ಸಾಂಸ್ಕೃತಿಕ ನೆಲೆಯಾಗಿ ಬೆಳೆಯುತ್ತಿರುವುದನ್ನು ನಾವು ಗಮನಿಸಬೇಕು. ಇದನ್ನೊಂದು ವೈಯಕ್ತಿಕ ಉದಾಹಣೆಯಿಂದ ಹೇಳಬಹುದು. ಬಾಯಿಂದ ಬಾಯಿಗೆ ಬಂದು ಕೇಳಿದ ಕತೆಗಳು, ಆಡುವ ಮಾತಿನ ಉದಾಹರಣೆ, ಇನ್ನೆಲ್ಲೋ ಕೇಳಿದ ವಿಚಾರ- ಇವುಗಳಿಂದಲೇ ತನ್ನ ವಿಚಾರಗಳನ್ನು ನನ್ನ ಅಜ್ಜ ಮಂಡಿಸುತ್ತಿದ್ದರು. ಬಾಯಿ ಮಾತಿನಿಂದ ಕೇಳಿದ ಜ್ಞಾನದ ಮೂಲಕವೇ ಕ್ರಿಮಿನಲ್ ಹಾಗೂ ಸಿವಿಲ್ ಕಾನೂನಿನ ದೊಡ್ಡ ತಿಳುವಳಿಕೆಯನ್ನೇ ಅವರು ಹೊಂದಿದ್ದರು. ಅವರ ಜ್ಞಾನದ ಮೂಲ ಆಕರ ಮಾತು. ಇಂಗ್ಲೀಷ್ ಅಕ್ಷರಗಳೇ ಅವರಿಗೆ ತಿಳಿದಿರಲಿಲ್ಲ. ಅವರು ಕಳೆದ ಶತಮಾನದ ಆದಿಯಲ್ಲಿ ಜನಿಸಿದವರು.

ಅವರಿಂದ 32 ವರುಷಗಳ ನಂತರ ಹುಟ್ಟಿದ ನನ್ನ ತಂದೆಯವರಿಗೆ ಪ್ರಿಂಟಾದ ಪುಸ್ತಕಗಳೇ ಜ್ಞಾನದ ಮೂಲ ಆಕರ. ಒಂದೋ ಎರಡೋ ಪತ್ರಿಕೆಗಳು ಅವರಿಗೆ ಸುದ್ದಿಯ ಅವಶ್ಯಕತೆಗಾಗಿ ಮಾತ್ರ. ಅಲ್ಲಿಂದ ಮೂವತ್ತು ವರುಷಗಳ ಬಳಿಕ ಜನಿಸಿದ ನನಗೆ ಯಾವ ಪತ್ರಿಕೆಯ ಮೂಲೆಯಿಂದಲೂ ಮಾಹಿತಿ ಸಂಗ್ರಹ ಸಾಮಾನ್ಯ ವಿಚಾರ. ಈಗ ನನ್ನ ಮಗ ಶಾಲೆಯ ಪ್ರಾಜೆಕ್ಟ್ ಮಾಡಬೇಕೆಂದರೆ ಮೊದಲು ಹೊರಡುವುದು ಇಂಟರ್‌ನೆಟ್‌ನಲ್ಲಿ ಏನಿದೆಯೆಂದು ನೋಡಲು. ಪುಸ್ತಕ ಬಿಡಿಸುವ ಬದಲು ಸಿ.ಡಿ.ಯಲ್ಲಿ ಹುಡುಕುವುದು.

ಅಂದರೆ ಕಾಲಕಾಲಕ್ಕೆ ಯಂತ್ರಗಳ, ಕೈಗಾರಿಕೆಗಳ ಬೆಳವಣಿಗೆ ಆಗುತ್ತಾ ಬಂದಂತೆ, ನಾವು ವರ್ತಿಸುವ, ಚಿಂತಿಸುವ, ಅನುಭವಿಸುವ, ಆ ಮೂಲಕ ನಾವು ಬದುಕುವ ರೀತಿ ಬದಲಾಗುತ್ತಾ ಬಂದಿದೆ. ಅದನ್ನು ಬಳಸಿಕೊಳ್ಳುವವರಲ್ಲಿ ಕೆಲವು ಸೃಜನಶೀಲರು ಕಲಾ ಪ್ರೌಢಿಮೆಯನ್ನು ಸಾಧಿಸಿದರೆ, ಇತರ ಅನೇಕರು ಅದರ ಪ್ರಯೋಜನದ ಬಗ್ಗೆ ಮಾತ್ರ ಆಸಕ್ತರಾಗಿದ್ದಾರೆ. ಸಂಸ್ಕೃತಿಯ ಮೇಲಾಗುವ ಪರಿಣಾಮದಲ್ಲಿ ಈ ಎರಡೂ ಅಂಶಗಳೂ ಮುಖ್ಯವಾಗುತ್ತದೆ.

ಇದು ದಿನ ನಿತ್ಯದ ಪರಿಣಾಮದ ಸಾಮಾನ್ಯ ನೆಲೆಗಳು. ಆದರೆ ನಾವಿದನ್ನು ಮೇಲು ಮೇಲಿನ ಸಾಮಾನ್ಯ ನೆಲೆಗಳಲ್ಲಿ ಗ್ರಹಿಸಿದರೆ ದೊಡ್ಡದೇನೂ ಹೇಳಿದಂತಲ್ಲ. ಇಂದಿನ ಜಾಗತೀಕರಣ ಹಾಗೂ

ಅದರೊಳಗೆ ಹಾಸು ಹೊಕ್ಕಂತಿರುವ ಟೆಕ್ನಾಲಜಿಯ ಅವಿನಾ ಸಂಬಂಧ ಸಾಂಸ್ಕೃತಿಕ ನೆಲೆಗಳ ಮೇಲೆ ಮಾಡುವ ಪರಿಣಾಮದ ಹಿನ್ನೆಲೆಯಲ್ಲಿ ಇದನ್ನು ಗಮನಿಸಬೇಕು.

ಇಂದಿನ ಜಾಗತೀಕರಣ ವಿಶ್ವ ಭ್ರಾತೃತ್ವ ಮುಂತಾದ ಉದಾತ್ತ ಆದರ್ಶಗಳ ತಳಹದಿಯಲ್ಲಿ ನಿಂತಿರುವುದಲ್ಲ. ಅದು ಇಡೀ ಜಗತ್ತನ್ನೇ ಅಡೆ ತಡೆಗಳಿಲ್ಲದ ಒಂದೇ ಮಾರುಕಟ್ಟೆಯನ್ನಾಗಿ ಮಾಡುವ ವಿಧಾನ. ಈ ಮಾರುಕಟ್ಟೆಯೊಳಗೆ ಯಾರು ಎಲ್ಲಿಂದ ಬೇಕಾದರೂ ಪ್ರವೇಶಿಸಬಹುದು. ಇದರಲ್ಲಿ ಗೆಲ್ಲುವುದಕ್ಕೆ ಅನೇಕ ಕಾರಣಗಳಿವೆ. ಇಂತಹ ಮಾರುಕಟ್ಟೆ, ಅವು ಕುದುರಿಸುವ ಆಸಕ್ತಿಗಳು, ಮಾನವನ ವೈವಿಧ್ಯವನ್ನು ಎಷ್ಟು ಮೊಟಕಾಗಿಸಬಲ್ಲದು ಎಂಬುದು ಇಂದಿನ ಪ್ರಶ್ನೆ. ಅದರ ಪರ ಹಾಗೂ ವಿರೋಧವಾದ ಅನೇಕ ಚರ್ಚೆಗಳು ಜಗತ್ತಿನಾದ್ಯಂತ ನಡೆಯುತ್ತಾ ಇವೆ. ಅದನ್ನು ಇಲ್ಲಿ ಚರ್ಚಿಸುವುದು ಈ ಬರಹದ ಉದ್ದೇಶವಲ್ಲ. (ಡಾ. ಯು. ಆರ್. ಅನಂತಮೂರ್ತಿಯವರ ನೂತನ ಕಾದಂಬರಿ 'ದಿವ್ಯ' - ಜಾಗತೀಕರಣಕ್ಕೆ ಧ್ಯಾನಸ್ಥ ಲೇಖಕನ ಸೃಜನಶೀಲ ಪ್ರತಿಕ್ರಿಯೆ' ಎಂಬ ನನ್ನ ಲೇಖನವೊಂದರಲ್ಲಿ ಈ ಕೆಲವು ಅಂಶಗಳನ್ನು ಈಗಾಗಲೇ ಚರ್ಚಿಸಿದ್ದೇನೆ.)

ಇಂದು ಬರುವ ಹೊಸ ಟೆಕ್ನಾಲಜಿಯನ್ನು, ಸಮೂಹ ಮಾಧ್ಯಮಗಳನ್ನು ಮನುಷ್ಯ ಯಾವ ರೀತಿ ಬಳಸಲು ಕಲಿಯುತ್ತಾನೆ ಎಂಬುದು ಸಂಸ್ಕೃತಿಯ ಮೇಲೆ ಅದು ಮಾಡುವ ಪರಿಣಾಮವನ್ನು ನಿರ್ಣಯಿಸುತ್ತದೆ. ಪ್ರಿಂಟಿಂಗ್ ಟೆಕ್ನಾಲಜಿಯ ಆವಿಷ್ಕಾರವಾದ ಬಳಿಕ ಅದರ ಅನೇಕ ರೀತಿಯ ಬಳಕೆ ನಾವು, ಬದುಕುವ, ಚಿಂತಿಸುವ ಕ್ರಮದ ಮೇಲೆ ಪರಿಣಾಮ ಬೀರಿವೆ. ಪತ್ರಿಕಾ ಮಾಧ್ಯಮವೇ ಸೃಷ್ಟಿಯಾಗಿದೆ. ಅದು ಸಾಂಸ್ಕೃತಿಕವಾಗಿ ಮಾಡಿದ ಪರಿಣಾಮವೂ ಅಗಾಧ. ಹೀಗೆ ಪ್ರತಿಯೊಂದು ಟೆಕ್ನಾಲಜಿಯ ಆವಿಷ್ಕಾರವೂ ಮನುಷ್ಯ ಜೀವನದ ಮೇಲೆ ಪರಿಣಾಮ ಉಂಟುಮಾಡುತ್ತದೆ. ಇಂದಿನ ಕಂಪ್ಯೂಟರ್ ಟೆಕ್ನಾಲಜಿಯನ್ನು ಮನುಷ್ಯ ಹೇಗೆ ಮುಂದೆ ಬೆಳೆಸಿ ಬಳಸಿಕೊಳ್ಳುತ್ತಾನೆ ಎಂಬುದು ಸಾಂಸ್ಕೃತಿಕ ಪರಿಣಾಮಗಳನ್ನು ನಿರ್ಣಯಿಸುವಂತಹದ್ದು. ಉದಾಹರಣೆಗೆ, ನಾನು ಮಾಡುವ ಯಾವುದೇ ಅಧ್ಯಯನಕ್ಕೆ ಪೂರಕವಾಗಿ ಇಂಟರ್‌ನೆಟ್‌ನ್ನೂ, ಟಿ.ವಿ. ಚಾನೆಲ್‌ಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದು ನನ್ನ ಅರಿವಿಗೆ ಬಂದ ಕ್ಷಣದಿಂದ ಆ ಮಾಧ್ಯಮಗಳು ನನ್ನ ಓದಿನ ಆಸಕ್ತಿಗೆ ಅಡ್ಡ ಬರಲೇ ಇಲ್ಲ.

ಆದರೆ, ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಹೊಸ ಟೆಕ್ನಾಲಜಿ, ಜಗತ್ತಿಗೆ ಒಂದು ಕೇಂದ್ರೀಕರಣದ ನಿಯಂತ್ರಣ ನೆಲೆಯನ್ನೂ ನೀಡುತ್ತದೆ. ಮೈಕ್ರೋ ಸಾಫ್ಟ್ ಕಂಪೆನಿ ನೂರಕ್ಕೂ ಅಧಿಕ ದೇಶಗಳಲ್ಲಿದ್ದರೂ, ಅಮೆರಿಕಾದಲ್ಲಿ ತನ್ನ ಕೇಂದ್ರ ನಿಯಂತ್ರಣವನ್ನು ಹೊಂದಿದೆ. ಅವರ ಸ್ವಂತದ ಇಂಟರ್‌ನೆಟ್ ಜಾಲದ ಮೂಲಕ, ಪ್ರತಿಯೊಂದು ವಿಚಾರವನ್ನು ಕ್ಷಣ ಕ್ಷಣದ ಹಿಡಿತದಲ್ಲಿಟ್ಟು ಇಡೀ ಜಗತ್ತಿನ ವ್ಯವಹಾರವನ್ನು ಒಂದು ಪುಟ್ಟ ಊರಿನೊಳಗಿನ ವ್ಯಾಪಾರದಂತೆ ನಿಯಂತ್ರಿಸುವ ಶಕ್ತಿಯನ್ನು ಕೇಂದ್ರ ಕಚೇರಿಗೆ ಇಂತಹ ಟೆಕ್ನಾಲಜಿ ನೀಡುತ್ತದೆ. ಇದು ವ್ಯಾಪಾರದ ಲಾಭದ ದೃಷ್ಟಿಯಿಂದ ಅನೇಕ ಪ್ರೋತ್ಸಾಹಗಳನ್ನು ನೀಡಬಹುದು. ಆದರೆ ಸಂಸ್ಕೃತಿಯ ಮೇಲೆ ಅದು ಮಾಡುವ ಪರಿಣಾಮ ಏನು? ಜಗತ್ತಿನ ವೈವಿಧ್ಯವನ್ನು ಅದು ಹೇಗೆ ಸ್ವೀಕರಿಸುತ್ತದೆ ಎಂಬುದೇ ಮುಖ್ಯ. ಜಾಗತಿಕ ವ್ಯಾಪಾರದ ಅವಶ್ಯಕತೆ ವೈವಿಧ್ಯಗಳ ಸಂಕಷ್ಟಗಳನ್ನು ಬಯಸುವುದಿಲ್ಲ. ದರ್ಜಿಯ ಬಳಿ ಹೋಗಿ ಬಟ್ಟೆ ಹೊಲಿಸುವಾಗ ಮೈಯಳತೆಗೆ ಹೊಂದಿಕೆಯಾಗುವ ದಿರಿಸು ಫ್ಯಾಷನ್. ಆದರೆ ಪ್ರಪಂಚದಾದ್ಯಂತ ಮಾರುವ ಬ್ರಾಂಡ್‌ಗಳ ರೆಡಿಮೇಡ್ ಬಟ್ಟೆಗಳು ಬಂದಾಗ, ಎಲ್ಲರೂ ಹಾಕಬಲ್ಲ ಸ್ವಲ್ಪ ದೊಗಳೆಯಾದ ಅಂಗಿಗಳೇ ಫ್ಯಾಷನ್ ಆದವು. ಮಾರುಕಟ್ಟೆ ವಿಸ್ತರಣೆಯಾಯಿತು. ವೈವಿಧ್ಯ ನಾಶವಾಯಿತು. ಅಭಿರುಚಿ ಫ್ಯಾಷನ್ ಹೆಸರಲ್ಲಿ ನಿಯಂತ್ರಣಕ್ಕೊಳಗಾಯಿತು.

ಇಂದಿನ ಟೆಕ್ನಾಲಜಿ ತಾನಿರುವ ತಾಣದಲ್ಲೆ ಸಕಲ ಲೋಕದ ವೈವಿಧ್ಯಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಿದೆ. ತನ್ನ ಗರ್ಭದೊಳಗೆ ಉದ್ಯೋಗದ ವಿಕೇಂದ್ರೀಕರಣದ ಕೆಲಸದ ತಾಣಗಳನ್ನು ಅದರ ನಿಯಂತ್ರಣಕ್ಕೆ ಕೇಂದ್ರೀಕರಣದ ಸಾಧ್ಯತೆಯನ್ನು ಒದಗಿಸಿಕೊಡುತ್ತದೆ. ನಾಸ್‌ಡ್ಯಾಕ್ ನಂತಹ ಶೇರು ಮಾರುಕಟ್ಟೆ ಪ್ರಪಂಚದಾದ್ಯಂತ ವ್ಯವಹಾರವನ್ನು ಟೆಕ್ನಾಲಜಿ ಮೂಲಕ ಹಬ್ಬಿಸಲು ಆಕರಗಳನ್ನು ಹೊಂದಿದೆ. ಹೀಗೆ ಭೂಗೋಲ ಒಂದು ಅಂಗೈಯೊಳಗಿನ ವಸ್ತುವಾದಾಗ ನಮ್ಮ ರಾಜಕೀಯ ಸಾಂಸ್ಕೃತಿಕ ಹಾಗೂ ಆಡಳಿತಾತ್ಮಕ ಚಿಂತನೆಗಳು ಟೆಕ್ನಾಲಜಿಯ ವೈರುಧ್ಯಗಳನ್ನು ಹದ್ದುಬಸ್ತಿನಲ್ಲಿಡಲು ಬಹಳ ಸಹಕಾರಿ.

ಕಂಪ್ಯೂಟರ್ ಟೆಕ್ನಾಲಜಿಯ ಇಂಟರ್‌ನೆಟ್ ವ್ಯವಸ್ಥೆ ಒಳಗೇ ಜನಾಭಿಪ್ರಾಯವನ್ನು ರೂಪಿಸಬಲ್ಲ ಅನಿಯಂತ್ರಿತ ವ್ಯವಸ್ಥೆಯನ್ನು ಬೆಳೆಸಬಲ್ಲ ಒಂದು ಸ್ವತಂತ್ರ ಅಭಿವ್ಯಕ್ತಿಯ ಸಾಧ್ಯತೆ ಇದೆ. ಅದನ್ನು ಅನೇಕ ಹಂತಗಳಲ್ಲಿ ನಿಯಂತ್ರಣಕ್ಕೆ ಒಳಪಡಿಸಬಯಸುವ ಸೂಕ್ಷ್ಮವಾದೊಂದು ಪ್ರಯತ್ನವೂ ನಡೆಯುತ್ತಿದೆ. ಈ ಟೆಕ್ನಾಲಜಿಯ ಕಟ್ಟೆ ಹಾಕುವ ಶಕ್ತಿಯೊಡನೆಯೇ ಅದರ ಬಿಡುಗಡೆಯ ಸ್ವಾತಂತ್ರ್ಯದ ಶಕ್ತಿಯೂ ಇದೆ. ಅಂತಹ ಬಿಡುಗಡೆಯ ಅಂತರ್ಗತ ಶಕ್ತಿಗಳನ್ನು ಟೆಕ್ನಾಲಜಿ ಸಮುದಾಯ ಜತನದಿಂದ ಕಾಪಾಡಿಕೊಳ್ಳುವುದೇ ಒಂದು ಅಂತರ್ಗತ ರಕ್ಷಣಾ ವ್ಯವಸ್ಥೆಯಾಗಿ ಬೆಳೆಯಬೇಕು.

ಈ ರೀತಿಯ ಜಾಗೃತ ಪ್ರಯತ್ನಗಳು ಮನುಷ್ಯನ ಎಚ್ಚರಿಕೆಯ ಪ್ರವೃತ್ತಿಯಿಂದ ಉದ್ದೀಪನಗೊಳ್ಳುತ್ತಾ ಇರುತ್ತದೆ. ಅದು ಮನುಷ್ಯನ ಸ್ವಾತಂತ್ರ್ಯ ಪ್ರಜ್ಞೆಯ ನಿರಂತರ ಎಚ್ಚರಿಕೆಯ ಜಾಗೃತ ಸ್ಥಿತಿ. ಇಂತಹ ಪ್ರಯತ್ನಗಳ ಸೂಕ್ಷ್ಮ ಚಿಹ್ನೆಗಳನ್ನು ನಾವು ಅಲ್ಲಲ್ಲಿ ಕಾಣಬಹುದು. ಉದಾಹರಣೆಗೆ, ಟೆಕ್ನಾಲಜಿಯಲ್ಲಿ 'ಪೇಟೆಂಟ್' ಎಂಬುದು ಬಹಳ ಶಕ್ತಿಯುತವಾದ ಕಾನೂನು. ಸಾಫ್ಟ್‌ವೇರ್ ಟೆಕ್ನಾಲಜಿಯಲ್ಲಿ 'ಪೇಟೆಂಟ್' ಬಹಳ ಮುಖ್ಯವಾದೊಂದು ನಿಯಂತ್ರಣ. ಈಗ ಅಮೆರಿಕಾದಲ್ಲಿ ಅನೇಕರು ಸಾಫ್ಟ್‌ವೇರ್‌ನಲ್ಲಿ ಪೇಟೆಂಟ್ ನಿಯಂತ್ರಣ ಇರಕೂಡದು ಎಂಬ ವಾದ ಮಂಡಿಸತೊಡಗಿದ್ದಾರೆ. (ಇವರಲ್ಲಿ ಭಾರತ ಮೂಲದ ಕೆಲವು ವಕೀಲರು ಮುಂಚೂಣಿಯಲ್ಲಿದ್ದಾರೆ.) ಇದಕ್ಕೆ ವಿರುದ್ಧವಾಗಿ 'ಪೇಟೆಂಟ್' 25 ವರುಷಗಳಿಗೆ ಇದ್ದರೆ ಸಾಲದು, ಬದಲಾಗಿ ಅದು '75' ವರುಷಗಳಿಗೆ ವಿಸ್ತರಿಸಬೇಕೆಂದು ಪ್ರತಿವಾದ ಹೂಡಿದ ವಿರೋಧ ಚಳವಳಿಯೂ ಇದೆ.

ಇಂದು ಇಂಟರ್‌ನೆಟ್ ಮೂಲಕ ಒಂದು ಹೊಸ ಸಮಾಜ ವ್ಯವಸ್ಥೆಯ ನಿರ್ಮಾಣ ನಡೆಯುತ್ತಿದೆ. ಇದು ಕೈಗಾರಿಕಾ ಕ್ರಾಂತಿಯ ನಾಗರಿಕತೆಯ ಮುಂದಿನ ಹಂತ. ಇಲ್ಲೂ ಸಾಂಸ್ಕೃತಿಕವಾಗಿ ಜವಾಬ್ದಾರಿ ಉಳ್ಳವರ ಕರ್ತವ್ಯ ಎಂದರೆ - ನಮ್ಮ ಸ್ವಾತಂತ್ರ್ಯವನ್ನು, ಚಿಂತನೆ, ಅಭಿವ್ಯಕ್ತಿಯ ಮೂಲಗುಣಗಳನ್ನು ಉಳಿಸಿಕೊಳ್ಳುವತ್ತ ನಿರಂತರ ಜಾಗೃತವಾಗಿರುವುದು. ಮನುಷ್ಯನ ಬದುಕಿನ ಸ್ವಾತಂತ್ರ್ಯದ ಮೂಲ ಸೆಲೆಗೆ, ಜೀವ ಪ್ರೀತಿಗೆ ಒತ್ತು ನೀಡುವ ಇಂತಹ ನಿರಂತರ ಎಚ್ಚರಕ್ಕೆ ಸಾಂಸ್ಕೃತಿಕ ವೈವಿಧ್ಯತೆ ಪೂರಕವಾಗುತ್ತದೆ. ಇಂತಹ ವೈವಿಧ್ಯವನ್ನು ನಿವಾಳಿಸುವಂತೆ ಬೆಳೆಯುತ್ತಿರುವ ಟೆಕ್ನಾಲಜಿ ಒಳಗೆ ಮನುಷ್ಯನ ಕಲಾವಂತಿಕೆ, ಸ್ವಾತಂತ್ರ್ಯ ಹಾಗೂ ಸಹನೆಗಳು ಮಾತ್ರ ಅಂತಹ ವೈವಿಧ್ಯವನ್ನು ಬೆಳೆಸಬಲ್ಲವು. ಗೋಪಾಲಕೃಷ್ಣ ಅಡಿಗರು ತಮ್ಮ 'ಕೂಪ ಮಂಡೂಕ' ಕವನದಲ್ಲಿ ಹೇಳಿದಂತೆ "ಇಲ್ಲಾಡುವುದು - ಇದೇ ಹೊಸ ಠರಾವು" ■

ಸಾಂಸ್ಕೃತಿಕ ವೈವಿಧ್ಯತೆ ಅಥವಾ ಜಾಗತಿಕ ಏಕಸಂಸ್ಕೃತಿ

ಮಾಹಿತಿ ಯುಗದ ಪರಿಣಾಮಗಳು


ಕೆನಿತ್ ಕೆನ್‌ಸ್ಪನ್

ಅನು : ಡಿ. ವಿ. ಪ್ರಹ್ಲಾದ್

ಈ ಮಾಹಿತಿ ಯುಗದ ಬರುವಿಕೆ ಎನ್ನುವುದು ಸಾವಿರಾರು ಪುಸ್ತಕಗಳ ಲೇಖನಗಳ ಮತ್ತು ಸೆಮಿನಾರುಗಳ ವಿಷಯವಾಗಿದೆ. ಈ ಸಂಕಿರಣವನ್ನೂ ಒಳಗೊಂಡು; ಅತಿರೇಕದ ಆಶಾವಾದದಿಂದ ಭಯಂಕರ ನಿರಾಸೆಯ ಮಿತಿಗಳ ಮಧ್ಯದಲ್ಲಿ ಇದರ ಭವಿಷ್ಯದ ಬಗೆಗಿನ ಅನಿಸಿಕೆ-ಅಭಿಪ್ರಾಯಗಳು ತುಡಿಯುತ್ತವೆ. ಮಾರ್ಕ್ಸಿಸ್ಟ್ ದೃಷ್ಟಿಕೋನದ ವಿಶ್ಲೇಷಣೆ, ಹೊಸ ಮುಕ್ತವಾದಿ, ಆಂಥ್ರೋಪಾಲಜಿ ಆಧಾರಿತ, ಹೀಗೆ ಹತ್ತು ಹಲವು ವಿಭಿನ್ನ ದೃಷ್ಟಿಕೋನಗಳಲ್ಲಿ ನಿಂತು, ಮಾಹಿತಿಯುಗದ ಬಗೆಗೆ ವಕ್ಕಾರಿಕೆಯನ್ನಾಗಲೀ ಅಥವಾ ಬರೀ ಟೀಕೆಯನ್ನಾಗಲೀ ಗಮನಿಸಬಹುದು. ಮನುಷ್ಯನೊಬ್ಬನ ಗ್ರಹಿಕೆಗೂ ನಿಲುಕಲಾರದಷ್ಟು ಇದರ ಬಗ್ಗೆ ಬರೆಯಲಾಗಿದೆ.

ಆದರೆ ಸಾಕಷ್ಟು ಆಳವಾದ ಗುಣಾತ್ಮಕವಾದ ವಿಶ್ಲೇಷಣೆಗಳು ಈ ಮಾಹಿತಿ ಯುಗದ ಸಾಂಸ್ಕೃತಿಕ ಪರಿಣಾಮಗಳನ್ನು ಕುರಿತು ಆಗಿಲ್ಲ. ಸಾಂಸ್ಕೃತಿಕ ಪರಿಣಾಮಗಳು ಎಂದಾಕ್ಷಣ ಸಮೂಹ ಒಂದರ ಆಂತರ್ಯದ ತರ್ಕಗಳು, ಮೂಲ ಪೌರಾಣಿಕ ನಂಬಿಕೆಗಳು, ಸಾಹಿತ್ಯ ಕಲೆ ಸಂಗೀತಗಳೂ ಒಳಗೊಂಡು ಭಾಷಿಕ-ಕಲ್ಪಕ ವ್ಯಕ್ತ-ಅವ್ಯಕ್ತ ನೆಲೆಗಳು, ಲಿಖಿತ-ಅಲಿಖಿತ ಸ್ಮೃತಿಗಳಲ್ಲಿ, ನಮ್ಮ ಪೂರ್ವಜರ ಬಗ್ಗೆ ಇರುವ ನಂಬಿಕೆಗಳು; ಇವೆಲ್ಲವೂ ನಮ್ಮ ನಮ್ಮ ಕುಟುಂಬ ಕರಳುಬಳ್ಳಿಗಳಿಗೆ ಆತುಕೊಂಡು ನಮ್ಮಗಳ ಸಾಮಾಜಿಕ ಜಗತ್ತಿನಲ್ಲಿ, ನಮ್ಮ ಹಾಗಿರುವ ಜನಗಳ ಮಧ್ಯದಲ್ಲಿ ಅಪರಿಚಿತರನ್ನಾಗಿಸದೆ ಗೋಂದಿನ ಹಾಗೆ ಬೆಸೆದು ಮನುಷ್ಯರನ್ನ 'ವ್ಯಕ್ತಿ'ಗಳನ್ನಾಗಿಸುವುದು.

ಮುಂದಿನ ಶತಮಾನಗಳಲ್ಲಿ ಈ ಮಾಹಿತಿಯುಗದ ಇತಿಹಾಸ ಬರೆಯುವಾಗ ಸಂಸ್ಕೃತಿಯ ಜೊತೆಗಿನ ಅದರ ಸಂಬಂಧಗಳು ಹೆಚ್ಚು ಚರ್ಚೆಗೆ ಒಳಗಾಗುತ್ತದೆ ಎಂದು ನಾನು ನಂಬುತ್ತೇನೆ. ಆದರೂ ಈ ಮಾಹಿತಿ ಯುಗದ ಸಾಂಸ್ಕೃತಿಕ ಪರಿಣಾಮಗಳನ್ನು ಕುರಿತು ನಡೆದಿರುವ ಚರ್ಚೆಗಳನ್ನು ಪುಸ್ತಕಗಳಲ್ಲಿ ಸೆಮಿನಾರುಗಳಲ್ಲಿ ಬಲು ಅಲ್ಪಪ್ರಮಾಣದಲ್ಲಿ ಕಾಣಬರುತ್ತದೆ. ಆದರೆ ಈ ಮಾಹಿತಿಯುಗದ ತೀವ್ರವಾದ ಬದಲಾವಣೆ ಬೆಳವಣಿಗೆಗಳುಳ್ಳ ತಾಂತ್ರಿಕ ಸವಾಲುಗಳ ಬಗ್ಗೆ ಆಕರ್ಷಕವಾಗಿ ಕುತೂಹಲ ಹುಟ್ಟಿಸಬಲ್ಲ ಜೀವನಪೂರ್ತಿ ಮನುಷ್ಯನೊಬ್ಬ ತೊಡಗಿಕೊಂಡು



ಗ್ರಹಿಸಬಲ್ಲಷ್ಟು ಬೌದ್ಧಿಕ ಸವಾಲುಗಳಿಂದ ಸಮೃದ್ಧವಾಗಿದೆ. ಅಸಂಖ್ಯ ಅಂತರರಾಷ್ಟ್ರೀಯ ಮೀಟಿಂಗುಗಳ ವ್ಯರ್ಥತೆ ಹೇಳುತ್ತಿದೆ. ಜಾಗತಿಕ ಮಾಹಿತಿ ಜಾಲದ ಆರ್ಥಿಕ ಪರಿಣಾಮಗಳಾಗಿ ಕ್ಷಣಾರ್ಧದ ಸಂವಹನ ಇಕಾಮರ್ಸ್ ಮುಂತಾದವು ಏಕತ್ರಬಿಗಿಗೊಂಡು ಪ್ರತಿವರ್ಷ ದುಪ್ಪಟ್ಟಾಗಿ ಬೆಳೆಯುತ್ತಿದೆ. ಅಂತರರಾಷ್ಟ್ರೀಯ ಹಣಕಾಸು ಮತ್ತು ಆರ್ಥಿಕತೆಗಳು ಇಇಲೆಕ್ಟ್ರಾನಿಕ್ಸ್‌ಗೆ ಸಂಬಂಧಿಸಿದ್ದಾಗಿವೆ. ಇವುಗಳೆಲ್ಲದರ ಪರಿಣಾಮಗಳನ್ನು ತೀವ್ರವಾಗಿ ಅಭ್ಯಾಸ ಮಾಡಬೇಕಾದ ಅಗತ್ಯ ಖಂಡಿತಾ ಇದೆ. ಈ ಮಾಹಿತಿಯುಗದ ಗುಣಮಟ್ಟವನ್ನು ಏಕತ್ರಗೊಳಿಸಿ ಹುಟ್ಟಬಲ್ಲ ಕಾನೂನು ತೊಡಕುಗಳೂ ಮುಖ್ಯವಾದದ್ದೇ. ನೂರಕ್ಕೂ ಹೆಚ್ಚು ದೇಶಗಳಿಗೆ ಮುಖ್ಯ ಆಗಬಲ್ಲ. ಯಾವುದು ಸರಿ ಯಾವುದು ನಿರ್ದಿಷ್ಟವಾದದ್ದು ಸಾರ್ವಜನಿಕ ಅಥವಾ ಖಾಸಗಿಯಾದದ್ದು ಯಾವುದು ಪವಿತ್ರ ಮತ್ಯಾವುದು ಅಶ್ಲೀಲ. ಮಿಲಿಟರಿ ದೃಷ್ಟಿಯಿಂದ ಯಾವ್ಯಾವುದು ಅಪಾಯಕಾರಿ ಎಂಬಂಥಾ ವಿಚಾರಗಳು ಚರ್ಚಿತವಾಗುತ್ತಿವೆ. ಈ ಸಮಸ್ಯೆಗಳು ಯಾವುದನ್ನು ಹೊಸ ಇಲೆಕ್ಟ್ರಾನಿಕ್ ಯುಗದ/ಜಗತ್ತಿನ ಕ್ರಮ ಅಥವಾ ವರ್ಗ ಅಂತ ಗುರುತಿಸುತ್ತೇವೆಯೋ ಅದು ಜಗತ್ತಿನ ಅನೇಕ ಶ್ರೇಷ್ಠ ಕಾನೂನು ತಜ್ಞರನ್ನು ಆಕರ್ಷಿಸಿದೆ. ಜರ್ಮನರು ತಮ್ಮ ಕಂಪ್ಯೂಸರ್ವ್ ಮೂಲ ಹೊರ ದೇಶದ ಕಾನೂನು ಬಾಹಿರ ಮಾಹಿತಿ ಒಳಬರಲು ಅನುಮತಿ ನೀಡಿದ್ದಕ್ಕೆ ಆ ಸಂಸ್ಥೆಯ ಮುಖ್ಯಸ್ಥನನ್ನ ಬಂಧಿಸಬಹುದೆ? ಅಮೆರಿಕಾ ತನ್ನದಲ್ಲದ ವಸ್ತುಗಳ ರಫ್ತು ತಡೆಯಲು ಯತ್ನಿಸುವುದು ಎಷ್ಟು ಸರಿ? ಅಂತರರಾಷ್ಟ್ರೀಯ ಅಪ್ತಮಿತ್ರತ್ವ ಅಶ್ಲೀಲ ಸಾಹಿತ್ಯದ ರಚನೆ, ಮಾದಕವಸ್ತುಗಳ ಮಾರಾಟ, ರಾಷ್ಟ್ರೀಯ ಸುರಕ್ಷತೆ- ಸಹಾಯಧನ, ಭಯೋತ್ಪಾದನೆ ಸೆನ್ಸಾರ್ ಮತ್ತು ಇಇಲೆಕ್ಟ್ರಾನಿಕ್ಸ್ ಕಮ್ಯುನಿಕೇಷನ್ ಯುಗದಲ್ಲಿ ಆಸ್ತಿಯ ಹಕ್ಕುಗಳು ಯಾವ ರೀತಿಯದ್ದಾಗಿರಬೇಕು. ಅಂತರ ರಾಷ್ಟ್ರೀಯ ಕಾನೂನು ಸಮಸ್ಯೆಗಳು ಮತ್ತು ಗುಣಮಟ್ಟಗಳು, ಗಮನಸೆಳೆಯುವ ಸಂಗತಿಗಳಾಗಿವೆ.

ಆದರೆ 'ಸಂಸ್ಕೃತಿ'ಎನ್ನುವುದು ಅತಿ ವಿರಳವಾಗಿ ಇಲ್ಲಿ ಉಲ್ಲೇಖಿಸಲ್ಪಡುತ್ತದೆ. ಜರ್ಮನಿ ಮತ್ತು ಅಮೆರಿಕನ್ ಆಯೋಗಗಳಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೇನೆ. ಅಮೆರಿಕನ್ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಮತ್ತು ಜರ್ಮನಿಯ ಮ್ಯಾಕ್ಸ್‌ಪ್ಲಾಂಕ್ ಸಂಸ್ಥೆಗಳ ಮುಖ್ಯ ಕಾರ್ಯೋದ್ದೇಶ "ಜಾಗತಿಕ ಸಂಪರ್ಕಗಳು ಮತ್ತು ಸ್ಥಳೀಯ ಮೌಲ್ಯಗಳು" ಎಂದು. ನನ್ನೊಬ್ಬನನ್ನ ಬಿಟ್ಟು ಅದರ ಎಲ್ಲಾ ಸದಸ್ಯರೂ ತಾಂತ್ರಿಕ ಪರಿಣತರೇ; ಅವರಲ್ಲಿ ಕೆಲವರು ಅಂತರ ರಾಷ್ಟ್ರೀಯ ವಕೀಲರು ಮತ್ತೆ ಕೆಲವರು ಆರ್ಥಿಕ ಮತ್ತು ಆರ್ಥಿಕ ಇತಿಹಾಸ ತಜ್ಞರು. ಉಳಿದ ಕೆಲವರು ನಾಳಿನ ತಾಂತ್ರಿಕ ಜಗತ್ತಿನ ಭವಿಷ್ಯವನ್ನ ರಚಿಸಬಲ್ಲ ನಿರ್ದೇಶಿಸಬಲ್ಲ ಪರಿಣಿತರು ಇದ್ದಾರೆ. ಇಲ್ಲಿ ಮಾಹಿತಿ ಯುಗದ ತಾಂತ್ರಿಕ-ಆರ್ಥಿಕ ಮತ್ತು ಕಾನೂನು ತೊಡಕುಗಳು ಸಮಸ್ಯೆಗಳ ಬಗ್ಗೆ ಅತ್ಯಂತ ಮಾಹಿತಿಪೂರ್ಣವಾಗಿರುತ್ತದೆ.

ಆದರೆ 'ಸಂಸ್ಕೃತಿ'ಯ ವಿಷಯ ಮಾತ್ರಾ ಈ ಸಮಿತಿಗಳಲ್ಲಿ ತೀರಾ ವಿರಳವಾಗಿ ಚರ್ಚಿಸಲ್ಪಡುತ್ತವೆ. ಅದರಲ್ಲೂ ಅಮೆರಿಕನ್ ಸಾಂಸ್ಕೃತಿಕ ಆಧಿಪತ್ಯ ಕುರಿತು ಹೆಚ್ಚು ಕಡಿಮೆ ಅಮೆರಿಕದಷ್ಟೇ ತಾಂತ್ರಿಕವಾಗಿ ಮುಂದುವರೆದ ಸಮಬಲವಾದ ಜರ್ಮನಿಯಲ್ಲಿ; ಅದು ಅಮೆರಿಕದ ಹಾರ್ಡ್‌ವೇರ್ ಉದ್ಯಮದ ಮುಂಚೂಣಿಯಲ್ಲಿ ನಿಲ್ಲಬಲ್ಲ ತಾಂತ್ರಿಕ ಮತ್ತು ಆರ್ಥಿಕ ಬಲವನ್ನು ಹೊಂದಿಯೂ. ಅಲ್ಲಿ ಅಮೆರಿಕನ್ ಸಾಫ್ಟ್‌ವೇರ್ (ತತ್ರಾಂಶ) ಜರ್ಮನಿಗೆ ಭಾಷಾಂತರಗೊಂಡು ಅದರ ಆಧಿಪತ್ಯಕ್ಕೆ ಒಳಪಟ್ಟೇ ಇದೆ. ಒಂದು ಅಂದಾಜಿನ ಪ್ರಕಾರ 90%ಕ್ಕೂ ಹೆಚ್ಚಿನ ವೆಬ್‌ಸೈಟುಗಳು ಇಂಗ್ಲಿಷ್‌ನಲ್ಲಿವೆ. ಅಮೆರಿಕನ್ ಸಂಸ್ಕೃತಿಯ ಅದಿಪತ್ಯ ಆತಂಕಕ್ಕೆ ಕಾರಣವೂ ಆಗಿದೆ. ಇಂಡಿಯಾದವರ ಪ್ರಕಾರ ಅಮೆರಿಕನ್ನರ ಹಾಗೇ

ಪರಿಗಣಿಸಲ್ಪಡುವ ಯುರೋಪಿಯನ್ನರಿಗೂ, ಯುರೋಪಿನವರೇ ಆದ ಫ್ರಾನ್ಸ್, ಇಟಲಿಯನ್, ಸ್ಪೈನ್‌ನವರಿಗೂ ಜರ್ಮನರಿಗೂ ಈ ಅಮೆರಿಕನ್ 'ಆಧಿಪತ್ಯ' ಆಕ್ರಮಣಕಾರಿಯಾಗಿ - ಪರಕೀಯವಾದ, ಅವರೆಲ್ಲರ ಪಾರಂಪರಿಕ ಸಂಸ್ಕೃತಿಗಳ ವಿನಾಶಕ್ಕೆ ಹೊರಟ ದಾಳಿಯ ಹಾಗೆ ಕಾಣುತ್ತದೆ. ಈ ಅಮೆರಿಕನ್ ಇಂಗ್ಲಿಷ್ ಭಾಷೆಗಳ ದಟ್ಟವಾದ ಪ್ರಾಬಲ್ಯ-ಆಧಿಪತ್ಯದ ನಡುವೆ ಸ್ಥಳೀಯ ದೇಶೀಯ ಮೌಲ್ಯಗಳನ್ನ ಸಾಂಸ್ಕೃತಿಕ ವೈವಿಧ್ಯತೆಗಳನ್ನು ಕಾಪಾಡುವುದು ಹೇಗೆ ಎನ್ನುವುದು ಈ ಎಲ್ಲ ಗುಂಪುಗಳಲ್ಲಿ ಅವ್ಯಕ್ತವಾಗಿ ಕಾಡಿದ ಸಂಗತಿ.

ಈ ವಿಷಯವನ್ನು ಕುರಿತೇ ನಾನು ಹೇಳಹೊರಡುತ್ತಿರುವುದು. ಈ ವಿಚಾರ ಚರ್ಚಿಸಲು ಜಗತ್ತಿನಲ್ಲೇ ಇಂಡಿಯಾ ಸೂಕ್ತವಾದ ದೇಶ ಎಂದು ಭಾವಿಸುತ್ತೇನೆ. ವಿಭಜನೆಯ ನಂತರ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿಯಷ್ಟೇ ಅಲ್ಲ. ಭಾಷಿಕವಾಗಿ ಸಾಂಸ್ಕೃತಿಕವಾಗಿ ಅನೇಕ ವೈವಿಧ್ಯತೆಗಳು ಇಲ್ಲಿವೆ. ಒಂದು ಸ್ವತಂತ್ರ ರಾಷ್ಟ್ರವಾಗಿ ತನ್ನ ಏಕತೆಯನ್ನ ಉಳಿಸಿಕೊಂಡೂ ತನ್ನೊಳಗಿನ ರಾಜ್ಯಗಳ ವೈಶಿಷ್ಟ್ಯಪೂರ್ಣ ಅಸ್ತಿತ್ವವನ್ನು ಈ ದೇಶ ಉತ್ತೇಜಿಸಿದೆ. ಒಂದು ಅಭಿವೃದ್ಧಿಶೀಲ ರಾಷ್ಟ್ರವಾಗಿ ಇಂಡಿಯಾಕ್ಕೆ ಎರಡು ಅಸಾಮಾನ್ಯ ಗುಣಗಳಿವೆ. ಮೊದಲನೆಯದ್ದು ಅದು ಜಗತ್ತಿನ ಎರಡನೆಯ ದೊಡ್ಡ ಮಾನವ ಸಂಪನ್ಮೂಲದ ಕೇಂದ್ರವಾಗಿದೆ. ಬೆಂಗಳೂರು ಈಗ ಮಾಹಿತಿ ತಂತ್ರಜ್ಞಾನದ ಕೇಂದ್ರವಾಗಿ ಅದು ಪ್ರತಿಫಲಿಸುತ್ತಿದೆ. ಎರಡನೆಯದಾಗಿ ಈ ರಾಷ್ಟ್ರದ ಎರಡನೇ ಮುಖ್ಯ 'ಸಂಪರ್ಕ' ಭಾಷೆಯಾಗಿ ಇಂಗ್ಲಿಷ್ ಬೆಳೆದು ಬಂದಿದೆ. ಇಂಡಿಯಾದ ಪಾರಂಪರಿಕ ಭಾಷೆ ಮತ್ತು ಸಂಸ್ಕೃತಿಗಳಿಗೆ ಇದರಿಂದ ಘಾಸಿಯಾಗುವ ಬಗ್ಗೆ ಭೀತಿ ಇರುವವರೂ ಇದ್ದಾರೆ. ಈ ಭೀತಿಯನ್ನ ಅನೇಕ ರೀತಿಗಳಲ್ಲಿ ವಿವರಿಸಬಹುದು, ಇಂಗ್ಲಿಷ್ ಇಲ್ಲಿ ಅಧಿಕಾರಸ್ಥರ ಅಂತಸ್ತುಗಳ ಭಾಷೆಯಾಗಿದೆ ಅಥವಾ ಅಮೆರಿಕನ್ ಮಿಲಿಯನೇರುಗಳ Antics ಹೇಗೆ ಹಿಂದಿಯ ಮೂಲಕ ಭಾರತದ ಸೆಟಲೈಟ್ ಟಿ.ವಿ.ಯ ಮುಖಾಂತರ ದೂರ ದೂರದ ಹಳ್ಳಿಗಳಿಗೆ ತಲುಪುತ್ತಿವೆ ಎನ್ನುವುದು. ಆದರೆ ಈ ಸಂಕಿರಣದ ಮುಖ್ಯ ಗಮನ ಇಂಗ್ಲಿಷ್ ಭಾಷೆ ಮತ್ತು ಅಮೆರಿಕನ್ ಮಾಹಿತಿ ತಂತ್ರಜ್ಞಾನದ ದಾದಾಗಿರಿಯನ್ನು ಕುರಿತಾಗಿದೆ.

ನನ್ನ ಮೊದಲ ಅಂಶ ಬೆಂಗಳೂರಿನಂಥಾ ಊರಿನಲ್ಲಿ ಮಾಹಿತಿ ತಂತ್ರಜ್ಞಾನ ಕುರಿತು ಸಂಸ್ಕೃತಿಯನ್ನ ಹಿನ್ನೆಲೆಯಾಗಿಟ್ಟುಕೊಂಡು ಚರ್ಚಿಸುವುದು ಸೂಕ್ತ ಎಂದು. ಚರ್ಚೆಗೆ ಸೂಕ್ತವಾದ ಚೌಕಟ್ಟೊಂದನ್ನು ನಿರ್ಮಿಸಲು ಈಗ ಪ್ರಯತ್ನಿಸುವ; ತೀರಾ ಸರಳವಾಗಿ ಹೇಳುವುದಾದರೆ, ಆಧುನಿಕ ಜಗತ್ತಿನ ವೈವಿಧ್ಯಮಯ ದೃಷ್ಟಿಕೋನಗಳ ಒಂದು ವರ್ಣಮಾಲೆಯನ್ನು ಕಲ್ಪಿಸಿಕೊಳ್ಳೋಣ; ಅದರ ಒಂದು ತುದಿಯಲ್ಲಿ **'ಸಾಂಸ್ಕೃತಿಕ ಸಾಮ್ರಾಜ್ಯಶಾಹಿತ್ವ'**. ಒಂದೇ ಒಂದು ಸಂಸ್ಕೃತಿ ಒಂದು ಪ್ರಬಲ ಬಣದ ಭಾಷೆಯನ್ನುಳಿದು ಉಳಿದೆಲ್ಲ ಭಾಷೆ ಸಂಸ್ಕೃತಿ ಆಚರಣೆಗಳ ಬಳಕೆಯನ್ನ ಪ್ರತಿಬಂಧಿಸಿ ದಮನಿಸುವುದು. ಕೆಲವು ದೇಶಗಳಲ್ಲಂತೂ ಅಲ್ಲಿನ ಪ್ರಮುಖ ಭಾಷೆ ಬಿಟ್ಟು ಬೇರೆ ಭಾಷೆಯಲ್ಲಿ ನೀವು ಸಾರ್ವಜನಿಕವಾಗಿ ಬರೆಯುವುದನ್ನೊ ಮಾತನಾಡುವುದನ್ನೋ ಮಾಡಿದಲ್ಲಿ ವರ್ಷಗಟ್ಟಲೆ ಜೈಲು ಸೇರಬೇಕಾದೀತು. ಭಾಷಿಕ ಸಾಮ್ರಾಜ್ಯಶಾಹಿತ್ವದ ಮನೋಭಾವ ಅಲ್ಲಿನ ವ್ಯಾಪಾರಕ್ಕೆ ಶಿಕ್ಷಣಕ್ಕೆ ಕಡೆಗೆ ಖಾಸಗಿಯಾಗಿ ಕೌಟುಂಬಿಕ ಜಗತ್ತಿನ ಆಪ್ತಸಂವಾದಕ್ಕೂ ಈ ಅಧಿಕೃತ ಬಾಷೆಯ ಪ್ರಭುತ್ವ ಅಡ್ಡ ಬಂದೀತು.

ಈ ವರ್ಣಪಟಲದ ಮತ್ತೊಂದು ಎಳೆ ಅಥವಾ ಪೂರ್ವಬಿಂದುವನ್ನ **'ಜಾಗತಿಕ ಏಕಸಂಸ್ಕೃತಿ'** ಅಂತ ಗುರುತಿಸಬಹುದು. ಈ ಜಾಗತಿಕ ಏಕಸಂಸ್ಕೃತಿ ಎಂದರೆ ಅನಿವಾರ್ಯವಾಗಿ ಜಗತ್ತಿನ ಎಲ್ಲ

ಮುಖ್ಯ ನೆಲೆಗಳ ಮೇಲೆ ಹೇರಲ್ಪಟ್ಟಿರುವ ಒಂದೇ ಸಂಸ್ಕೃತಿ ಅಂತ ಗುರುತಿಸಬಹುದು. ನಿರ್ಬಂಧ ಇರದೇ ಹೋದ ಪಕ್ಷದಲ್ಲಿ ಅನೇಕ ಭಾಷೆಗಳು ಸಹಿಸಲ್ಪಡುತ್ತವೆ. ಹಾಗೆಯೇ ಬಹುಸಂಸ್ಕೃತಿಗಳೂ ಅಧಿಕೃತವಾಗಿ ಮೆಚ್ಚಿ ಕೊಂಡಾಡಲ್ಪಡುತ್ತವೆ. ಆದರೆ ಈ ಜಾಗತಿಕ ಸಂಸ್ಕೃತಿ (ಅಥವಾ ಗ್ಲೋಬಲ್ ಕಲ್ಚರ್) ಅತ್ಯಂತ ಪ್ರಬಲವಾಗಿ ಎಲ್ಲ ಸ್ಥಳೀಯ ಸಂಸ್ಕೃತಿಗಳನ್ನೂ ಮುಳುಗಿಸಿ ಅವುಗಳಲ್ಲೊಂದು ಕೀಳರಿಮೆ ಹುಟ್ಟಿಸಿಬಿಡುತ್ತದೆ. ರೋಮನ್ ಸಾಮ್ರಾಜ್ಯದ ಉತ್ಕರ್ಷದ ಸಮಯದಲ್ಲಿ ರೋಮ್ ಲ್ಯಾಟೀನ್ ಸಂಸ್ಕೃತಿಗಳು, ಮುಸ್ಲಿಂ ಮತ್ತು ಅರಬ್ ಸಂಸ್ಕೃತಿಗಳು ಇಸ್ಲಾಮಿನ ಯುಗದ ಆರಂಭದ ಸಂದರ್ಭದಲ್ಲಿ ಇಂಥಾ ಪರಿಸ್ಥಿತಿ ಅನುಭವಿಸಿತ್ತು. ಅಂಥದ್ದೇ ಬಲಿಷ್ಟತೆ ಈ ಜಾಗತಿಕ ಏಕ ಸಂಸ್ಕೃತಿ ಹೊಂದಿರುವುದಾಗಿ ಗುರುತಿಸುತ್ತಾರೆ. ಸೆಟಲೈಟ್ ಟಿ.ವಿ. ವರ್ಲ್ಡ್‌ಕಪ್ ಸ್ಪರ್ಧೆಗಳು, ಸಿಎನ್ಎನ್, ಹಾಲಿವುಡ್ 'ಮರ್ಡೊಕ್', ಬಾಲಿವುಡ್, ಮೈಕ್ರೋಸಾಫ್ಟ್ ಇಂಟೆಲ್ ಮುಂತಾದವು. ಶೇ.90ಕ್ಕೂ ಹೆಚ್ಚು ವೆಬ್‌ಸೈಟುಗಳು ಇಂಗ್ಲಿಷ್‌ನಲ್ಲಿದ್ದು ಇವತ್ತಿನ ಭಾರತದಲ್ಲಿ ಯಾರಾದರೂ ಒಳ್ಳೆಯ ಇಂಗ್ಲಿಷ್ ಓದಲು ಬರೆಯಲು ಮತ್ತು ಮಾತನಾಡಲು ಬಾರದೆ, ಕಂಪ್ಯೂಟರ್ ಬಳಸಲಾಗಲೀ ಅಥವಾ ಈಮೇಲ್ ಕಳಿಸುವುದಾಗಲೀ ಅಸಾಧ್ಯ.

ರಾಜಕೀಯ ಶಾಸ್ತ್ರಜ್ಞ ಬಾರ್ಬರ್ ಇದನ್ನ ಮ್ಯಾಕ್‌ವರ್ಲ್ಡ್ ಅಂತ ಗುರ್ತಿಸುತ್ತಾರೆ. ಮ್ಯಾಕ್‌ಡೊನಾಲ್ಡ್ ಮತ್ತು ಮೆಕಿಂತೋಷ್‌ಗಳ ಗುಣವಾಚಕವಾಗಿ. ಬಾರ್ಬರ್ ಗಮನಿಸುವ ಹಾಗೆ ತನ್ನ ರಾಷ್ಟ್ರೀಯತೆ ಮತ್ತು ಸಂಸ್ಕೃತಿಗಳ ಬಗ್ಗೆ ಅಪಾರ ಅಭಿಮಾನ ಹೊಂದಿರುವ ಫ್ರಾನ್ಸ್‌ನಂಥಾ ದೇಶದಲ್ಲಿ ಚಲನಚಿತ್ರ ನಿರ್ಮಾಣದ ಬೌದ್ಧಿಕ ಪರಂಪರೆಯೇ ಇದ್ದೂ ಅಲ್ಲಿನ ಶೇ. 90 ರಿಂದ 100 ಭಾಗದ 'ಜನಪ್ರಿಯ' ಚಲನಚಿತ್ರಗಳು 'ಅಮೆರಿಕನ್' ಆಗಿರುತ್ತವೆ. ಈ ಜನಪ್ರಿಯತೆಯ ಹಿಂದೆ ಸಿಎನ್ಎನ್ ಪಾಲುದಾರಿಕೆಯೂ ಇದೆ. ಅಮೆರಿಕನ್ ನಾಟಕಗಳನ್ನ ಹಿಂದಿ ಸ್ವಾಹಿಲಿ ಅಥವಾ ಸ್ಪ್ಯಾನಿಷ್ ಭಾಷೆಗೆ ಭಾಷಾಂತರಿಸಿ ಬಿತ್ತರಿಸುತ್ತಿವೆ. ಹಾಗೇ ಇಂಡಿಯಾದ ಎಂಟಿವಿ ಕೂಡಾ ಇದೇ ಜಾಡಿನದ್ದು. ಆರಾಮವಾಗಿ ಕೂತ ಇಂಡಿಯನ್ ಯುವಕನೊಬ್ಬ ತನ್ನ ಅಮೆರಿಕನ್ ಶೈಲಿಯಲ್ಲಿ ಇಲ್ಲಿನ ಕಾರ್ಯಕ್ರಮಗಳನ್ನು ನಿರೂಪಿಸುತ್ತಿರುತ್ತಾನೆ. ಅಲ್ಲಿನ ಹಾಡುಗಳು ಅದನ್ನ ಹಾಡಿದವರು ಮತ್ತು ಅದರ ಭಾಷೆ ನಿಜ್ಜವೂ ಭಾರತೀಯವಾಗಿದ್ದರೂ, ಅದರ ಪರಿಕಲ್ಪನೆ ಮಾತ್ರಾ ಭಾರತೀಯವಾದದ್ದಲ್ಲ.

ನಾವು ಈ ಜಗತಿಕ ಸಂಸ್ಕೃತಿಯನ್ನ ಅಳೆಯುವುದು ಹೇಗೆ? 'ತೋರೋ ನಿಷಿಗಾಕಿ' ಎಂಬ ಜಪಾನಿನ ವಿದ್ವಾಂಸ ಹೇಳುವಂತೆ ಬಹು ಸಂಸ್ಕೃತಿಗಳ ಅಸ್ತಿತ್ವ ತೋರುತ್ತಿದ್ದರೂ, ಇವತ್ತಿನ ಜಾಗತಿಕ ಸಂಸ್ಕೃತಿಯ ವಿಶ್ಲೇಷಣೆಯಲ್ಲಿ ಅಮೆರಿಕನ್ ಏಕಸಂಸ್ಕೃತಿಯ ಪ್ರಾಬಲ್ಯ ಗುರುತಿಸುತ್ತಾರೆ. ಅನೇಕ ಗಂಭೀರ ಪರಿಣಾಮಗಳನ್ನು ಬೀರುತ್ತಿರುವ 'ಹಾಲಿವುಡ್ ಸಿನೆಮಾಗಳು' ಅಮೆರಿಕನ್ ಟಿ.ವಿ. ಮತ್ತು ಮನರಂಜನಾ ಉದ್ಯಮಗಳು ಹೊಂದಿರುವ ಪ್ರಾಬಲ್ಯದ ಜೊತೆಗೆ ತಾಂತ್ರಿಕ, ಆರ್ಥಿಕ ಮತ್ತು ಮಿಲಿಟರಿ ಶಕ್ತಿಗಳ ಪ್ರಾಬಲ್ಯವೂ ಸೇರಿಕೊಂಡಿದೆ. ನಿಷಿಗಾಕಿ ಅಮೆರಿಕನ್ ಮೌಲ್ಯಗಳಾದ ಮುಕ್ತವ್ಯಾಪಾರ, ಕೊಳ್ಳುಬಾಕತನ ಮತ್ತು ಭೌತಿಕವಾದಿತ್ವ, ರಾಜಕೀಯ ಸ್ವಾಯತ್ತತೆ ಮುಂತಾದ 'ಅಮೆರಿಕನ್ ಫ್ಲೇಗುರೋಗ' ನಮ್ಮ ಎಲ್ಲಾ ಸಂಸ್ಕೃತಿಗಳ ಮೇಲೂ ಸೋಂಕಿ ಅವುಗಳನ್ನು ಅಪ್ರಸ್ತುತ ಗೊಳಿಸಬಲ್ಲ ಭಯವನ್ನು ವ್ಯಕ್ತಪಡಿಸುತ್ತಾರೆ.

ಇತ್ತೀಚಿನ ಒಂದು ವಿವಾದಾತ್ಮಕ ಕೃತಿಯಲ್ಲಿ ಇದಕ್ಕೆ ಪರ್ಯಾಯ ಒಂದನ್ನ ಸ್ಯಾಮುಯೆಲ್

ಹಂಟಿಂಗ್‌ಸ್ಟನ್ ಪ್ರತಿಪಾದಿಸುತ್ತಾರೆ. ಅವರ ಪ್ರಕಾರ ಒಂದು ಪಾಶ್ಚಿಮಾತ್ಯ ಅಥವಾ 'ಅಮೆರಿಕನ್' ಏಕಸಂಸ್ಕೃತಿಗಿಂತಾ ಭಿನ್ನವಾಗಿ ಜಗತ್ತು ಬಹುಮುಖೀ ಸಾಂಸ್ಕೃತಿಕ ಮತ್ತು ಧಾರ್ಮಿಕ ಕೇಂದ್ರಗಳತ್ತ ಧ್ರುವೀಕರಣಗೊಳ್ಳುತ್ತಿದೆ. ಕನ್‌ಫ್ಯೂಷಿಯನ್ ಜಗತ್ತು ಪೂರ್ವ ಏಷ್ಯಾದಲ್ಲಿ ಧ್ರುವೀಕರಣಗೊಂಡರೆ ಮಧ್ಯಪೂರ್ವ ಮತ್ತು ಉತ್ತರ ಆಫ್ರಿಕಾದಲ್ಲಿ ಇಸ್ಲಾಮಿಕ್ ಜಗತ್ತು, ದಕ್ಷಿಣ ಅಮೆರಿಕಾದಲ್ಲಿ ಲ್ಯಾಟಿನ್ ಅಮೆರಿಕನ್ ಜಗತ್ತು ಇತ್ಯಾದಿ. ಹಂಟಿಂಗ್‌ಸ್ಟನ್‌ರ ಈ ಅಧ್ಯಯನ ಸಿಂಗಪೂರ್, ಮಲೇಷಿಯಾ ಮತ್ತು ಚೈನಾದ ನಾಯಕರುಗಳಲ್ಲಿ ಜನಪ್ರಿಯವಾಗಿದೆ. ಸಹಜವಾಗೇ ಅದರಲ್ಲಿರುವ ಏಷಿಯನ್ ಮೌಲ್ಯಗಳಿಗಾಗಿ, ಪಾಶ್ಚಾತ್ಯ ಮೌಲ್ಯಗಳಿಗಿಂತಾ ತೀರಾ ಭಿನ್ನವಾದ ಏಷಿಯನ್ ಮೌಲ್ಯಗಳು; ಹಿರಿಯರನ್ನ ಗೌರವಿಸಿ, ಕೌಟುಂಬಿಕ ಬದುಕನ್ನ ಗೌರವಪೂರ್ವಕವಾಗಿ ಆದರಿಸುವುದು. ಸಮೂಹನಿಷ್ಠೆ-ಶಿಸ್ತು ಮತ್ತು ವಿನಯ ಪೂರ್ವಕವಾದ ನಾಗರೀಕತನ, ಜೊತೆಗೆ ಅಧಿಕೃತ ರಾಜಸತ್ತೆಯ ನಂಬಿಕೆ ಈ ದೃಷ್ಟಿಕೋನಗಳಿಂದ ಪಾಶ್ಚಾತ್ಯ ಮೌಲ್ಯಗಳಾದ, ಮಾನವ ಹಕ್ಕುಗಳು ಮನುಷ್ಯನ ಗೌರವ, ಮಾಧ್ಯಮಗಳ ಸ್ವಾತಂತ್ರ್ಯ ಧಾರ್ಮಿಕ ಮತ್ತು ವಾಕ್‌ಸ್ವಾತಂತ್ರ್ಯಗಳು ಈ ಏಷಿಯನ್ ಸನ್ನಿವೇಶದಲ್ಲಿ ಸೂಕ್ತವಾದ ಮಹತ್ವವಿಲ್ಲದಂತೆ ಆಗಿಬಿಡುತ್ತದೆ.

ಬಹಳಷ್ಟು ಸಲ ನಿಜವಾದ ಹಾಗೆ ಇಂಡಿಯಾ ತನ್ನ ಅನುಭವದಲ್ಲಿ ಇಂಥಾ ಮೌಲ್ಯಗಳನ್ನ ಪರೀಕ್ಷೆಗೊಡ್ಡುತ್ತದೆ. ವಿಧೇಯ ಪೌರತ್ವ ಮತ್ತು ಪ್ರಭುಶಕ್ತಿ ಎರಡನ್ನೂ ಹೊಂದಿರುವುದು ಏಷಿಯನ್ ಮೌಲ್ಯಗಳೆಂದು ಹೇಗೆ ಕರೆಯಲಾದೀತು? ಭಾರತೀಯರು ರಾಜಕೀಯವಾಗಿ ಪ್ರಭುತ್ವವನ್ನ ನಂಬಿದವರಾದರೂ ಸರಿಸುಮಾರು ಅಮೆರಿಕನ್ನರಷ್ಟೇ ಅಶಿಸ್ತಿನ ಜನ. ಅಭಿವ್ಯಕ್ತಿ ಸ್ವಾತಂತ್ರ್ಯ, ಬಹುಸಂಸ್ಕೃತಿಯ ಸಹಿಷ್ಣುತೆ, ಧಾರ್ಮಿಕ ಸ್ವಾತಂತ್ರ್ಯಗಳನ್ನು ಕುರಿತು ಅವರು ತೋರಿರುವ ಬದ್ಧತೆ ಅಪೂರ್ವವಾದದ್ದು. ಈ ಭಾರತೀಯ ಅನುಭವ ಒಂದು ನೆಲೆಯಲ್ಲಿ ಬೇರೆ ಬೇರೆ ಸಾಂಸ್ಕೃತಿಕ ಜಗತ್ತುಗಳ ವಿನ್ಯಾಸಗಳ ಬಗ್ಗೆ ಧ್ವನಿಸತೊಡಗಿದರೆ ಮತ್ತೊಂದು ನೆಲೆಯಲ್ಲಿ ಈ ರೀತಿ ನೀಟಾಗಿ ವರ್ಗೀಕರಿಸಲ್ಪಟ್ಟ ಮೌಲ್ಯಗಳನ್ನ ಅರ್ಥಾತ್ ಅಮೆರಿಕನ್, ಏಷಿಯನ್ ಅಥವಾ ಭಾರತೀಯ ಮೌಲ್ಯಗಳೆನ್ನುವ ವರ್ಗೀಕರಣವನ್ನೇ ಅನುಮಾನದಿಂದ ನೋಡುವಂತೆ ಮಾಡುತ್ತದೆ. ನಾನು ನಂಬುವುದೆಂದರೆ 'ಮೌಲ್ಯಗಳು' ಮನುಷ್ಯನ ಬದುಕಿನ ಘನತೆ ಹೆಚ್ಚಿಸುವಂಥದ್ದು. ಗೌರವಯುತವಾಗಿ ಬದುಕಲು ಬೇಕಾದ ಹಕ್ಕುಗಳು; ತನ್ನನ್ನ ಆಳುವವರ ಆಯ್ಕೆಯ ಹಕ್ಕು, ಶಿಕ್ಷಣ ಸಾಕ್ಷರತೆಗಳು, ವಾಕ್ ಸ್ವಾತಂತ್ರ್ಯ ಧಾರ್ಮಿಕ ಮತ್ತು ಮಾಧ್ಯಮ ಸ್ವಾತಂತ್ರ್ಯಗಳು ಬರೇ ಅಮೆರಿಕನ್, ಇಸ್ಲಾಮಿಕ್ ಅಥವಾ ಏಷ್ಯನ್ ಮೌಲ್ಯಗಳಲ್ಲ ಸರಳವಾಗಿ ಅವು ಮಾನವೀಯ ಮೌಲ್ಯಗಳು.

ನನ್ನನ್ನೂ ಸೇರಿ ಅನೇಕರು ನಿಷಿಗಾಕಿ ಅವರು ಹೇಳುವ ಹಾಗೆ ಜಗತ್ತಿನಾದ್ಯಂತ ಈ ಅಮೆರಿಕನ್ ಏಕಸಂಸ್ಕೃತಿಯು ಇತರ ಎಲ್ಲ ಸಂಸ್ಕೃತಿಗಳನ್ನ ದಮನಿಸಿ ಪುರಾತನ ಅವಶೇಷಗಳ ಹಾಗೆ ಎರಡನೆಯ ದರ್ಜೆಗೆ ಬದಿಗೊತ್ತಿಬಿಡುವ ಅಪಾಯವನ್ನ ಒಪ್ಪುತ್ತೇವೆ. ಈ ಜಗತ್ತಿನ ವೈರುಧ್ಯಮಯ ಚಿತ್ರಣ ಕೊಡುವುದು ಅಂಥಾ ತಪ್ಪೇನೂ ಅಲ್ಲ. ಅದರಲ್ಲೂ ಟಿ.ವಿ.ಗಳ ಮೂಲಕ ಜಗತ್ತಿನಾದ್ಯಂತ ಹಬ್ಬಿರುವ ವೆಬ್‌ಸೈಟುಗಳ ಮೂಲಕ ಆವರಿಸಿರುವ ಅದು ಪ್ಲಾಟಿನಂ ವಿಸಾ ಕಾರ್ಡುದಾರರ ಜಗತ್ತು. ಪಂಚತಾರ(ಸ್ಟಾರ್) ಹೋಟೇಲುಗಳು, ಹೊಳೆಯುವ ಐಷಾರಾಮಿ ಸ್ಪೋರ್ಟ್ಸ್ ಕಾರುಗಳು ಅವುಗಳ ಡ್ಯಾಷ್ ಬೋರ್ಡಿನ ಮೇಲೆ ಕುಳಿತ ಶ್ಯಾಂಪೂ ಸೋಪುಗಳು ಅವುಗಳು ಹುಟ್ಟಿಸುವ ಭ್ರಮಾಲೋಕದ ಕನಸುಗಳು, ಯಾವುದನ್ನೆಲ್ಲಾ ಗಳಿಸಲು ಸಾಧ್ಯವೋ ಅದನ್ನೆಲ್ಲಾ ಪ್ರಾಮಿಸ್ ಮಾಡಬಲ್ಲ ರಾಜಕಾರಣಿಗಳು,

ಮುಕ್ತ ಲೈಂಗಿಕ ಚಿತ್ರಗಳ ಜಾಹೀರಾತುಗಳ ಈ ಅದ್ಭುತ ಜಗತ್ತು, ಈ ಅದ್ಭುತ ಬುದ್ಧಿವಂತರನ್ನ ಕಂಪ್ಯೂಟರ್ ಬಳಕೆದಾರರುಗಳನ್ನ ಚಕಿತಗೊಳಿಸುತ್ತದೆ.

ಏನನ್ನೂ ಹೇಳದೆ ಅರ್ಥೈಸಬಲ್ಲ ಒಂದು ಸಂಗತಿ ಈ ಜಗತ್ತು ಆಕ್ರಮಣಕಾರಿಯಾದದ್ದು. ಮತ್ತು ಅಸಹ್ಯಕರವಾದದ್ದು; ಮುನ್ನೂರು ಮಿಲಿಯನ್ ಭಾರತೀಯರು ಮತ್ತು ಒಂದು ಬಿಲಿಯನ್ ಇತರ ಮನುಷ್ಯರು ಪ್ರತಿ ರಾತ್ರಿ ಹೊಟ್ಟೆಗಿಲ್ಲದೆ ಬದುಕುವ ಈ ಜಗತ್ತಿನಲ್ಲಿ, ಈ 'ಏಕಸಂಸ್ಕೃತಿ' ಎಂಥಾ ಪೊಳ್ಳುತನದಿಂದ ಕೂಡಿದ್ದೆನ್ನುವುದು ಅರ್ಥವಾಗುತ್ತದೆ. ಅಥವಾ ನಿಜಕ್ಕೂ ಇದನ್ನೊಂದು ಸಂಸ್ಕೃತಿ ಅಂತ ಕರೆಯಲು ಸಾಧ್ಯವೆ ಎನ್ನುವುದನ್ನೂ ಪ್ರಶ್ನಿಸಬೇಕಿದೆ. ನನ್ನ ಇನ್ನೊಬ್ಬ ಮಿತ್ರರು ಹೇಳುವ ಹಾಗೆ ಇದು ಬರೀ ಮೇಲ್ತೋರಿಕೆ ಇರಬೇಕು.

ಒಬ್ಬ ಸಾಮಾನ್ಯ ಮನುಷ್ಯ ಈ ಟೆಲಿಜಗತ್ತನ್ನು ಅಥವಾ ಸೈಬರ್ ಜಗತ್ತನ್ನ ಎಷ್ಟು ಗಂಭೀರವಾಗಿ ಪರಿಗಣಿಸುತ್ತಾನೆ ಎನ್ನುವ ಪ್ರಶ್ನೆ ಕೇಳಿಕೊಳ್ಳಬೇಕಿದೆ. ಪುರಾಣಗಳ ಅಥವಾ ಐತಿಹಾಸಿಕ ಕಥೆಗಳ ಹಾಗೆ ಇವು ಕಾಣಬಹುದೇನೋ. ಇಂಡಿಯಾದ ಹಳ್ಳಿಗನೊಬ್ಬನಿಗೆ ಟಿವಿಯಲ್ಲಿ ಕಾಣುವ ದಲ್ಲಾಸ್ ಅವನ ಜನಪ್ರಿಯ ಪುರಾಣ ಕತೆಗಳಂತೆ ಒಂದು ಅಳತೆಯ ದೂರವನ್ನ ಬೆರಗನ್ನ ಉಳಿಸಿಕೊಂಡೇ ಮನರಂಜನೆಯ ಹಾಗೆ ಆದರ್ಶಗಳ ಹಾಗೆ ಕಾಣುತ್ತಿರಬೇಕು.

ಮತ್ತೊಂದು ಮುಖದಿಂದಲೂ ಈ ಸಾಂಸ್ಕೃತಿಕ ಜಾಗತೀಕರಣವನ್ನ ಅಳೆಯಬಹುದು ಮತ್ತೊಮ್ಮೆ ಇಂಡಿಯಾ ಅಂಥಾ ಪ್ರಯೋಗಕ್ಕೆ ಉದಾಹರಣೆಯಾಗಿ ಗಮನಿಸಬೇಕೆಂದು ತೋರುತ್ತದೆ. ಇಂಗ್ಲಿಷ್ ಸುಮಾರು ಅರ್ಧಶತಮಾನದ ಕಾಲಮಾನದಲ್ಲಿ ಈ ಉಪಖಂಡದ ವಿಭಿನ್ನ ಜನಗಳ ಪರಸ್ಪರ ಸಂಪರ್ಕ-ವ್ಯವಹಾರಗಳ ಭಾಷೆ ಆಗಿದೆ. ಅಂಥಾದ್ದೊಂದು ಭಾಷೆಯು ಇರದಿದ್ದ ಪಕ್ಷದಲ್ಲಿ ಇಲ್ಲಿನ ವ್ಯಾಪಾರ-ವ್ಯವಹಾರಗಳು ನಿಜಕ್ಕೂ ಕಠಿಣವಾಗುತ್ತಿತ್ತು. ಅದಕ್ಕಿಂತಲೂ ಹೆಚ್ಚು; ಭಾರತದಂಥಾ ವೈವಿಧ್ಯಮಯ ದೇಶಕ್ಕೆ ಜಗತ್ತಿನ ಇತರ ಭಾಗಗಳ ಸಂಪರ್ಕ, ಜಗತ್ತಿನ ಎರಡನೆಯ ದೊಡ್ಡ ಇಂಗ್ಲಿಷ್ ಮಾತಾಡಬಲ್ಲ ಜನಸಮೂಹ ಈಗ ಇರುವ ಈ ದೇಶಕ್ಕೆ ಕಷ್ಟಕರವಾಗಿರುತ್ತಿತ್ತು. ಒಂದೇ ಸಂಸ್ಕೃತಿ ಭಾಷೆಗಳ ಬಳಕೆಗಳಿಂದ ಅನೇಕ ಲಾಭಗಳಂತೂ ಇವೆ, ಎರಡನೆಯ ಭಾಷೆ ಮತ್ತು ಸಂಸ್ಕೃತಿಯೊಂದರ ಜೊತೆಗಿನ ಸಂಪರ್ಕ ಜತ್ತಿನ ಇತರ ಭಾಗಗಳೊಂದಿಗೆ ಸಂಪರ್ಕ ಸುಲಭವಾಗಿಸುತ್ತದೆ. ಈ ರೀತಿಯ ಎರಡನೇ ಭಾಷೆಯಿಲ್ಲದೇ ಹೋಗಿದ್ದರೆ ಇವತ್ತಿನ ಬೆಂಗಳೂರು ಸಾಧ್ಯವಾಗುತ್ತಿರಲಿಲ್ಲ.

ನನ್ನದೇ ಒಂದು ಅನುಭವ ಇಲ್ಲಿ ಹಂಚಿಕೊಳ್ಳಬಹುದು. ಒಬ್ಬ ಪಾಕಿಸ್ತಾನಿ ಲೇಖಕನ ಕೃತಿಗಳನ್ನ ನಾನು ನಮ್ಮಿಬ್ಬರ ಸಮಾನ ಮಿತ್ರರೊಬ್ಬರ ಮೂಲಕ (ಇಂಗ್ಲಿಷ್‌ನಲ್ಲಿ) ಓದಿದೆ. ಅವನ ಪುಸ್ತಕ ಎಷ್ಟೊಂದು ಭಿನ್ನವಾಗಿತ್ತೆಂದರೆ, ನಾನು ಆತನ ಈಮೇಲ್ ವಿಳಾಸವನ್ನ ಪತ್ತೆಮಾಡಿ ಆ ಕೃತಿಗಾಗಿ ಆತನನ್ನು ಅಭಿನಂದಿಸಿದೆ. ಉರ್ದು ಗೊತ್ತಿಲ್ಲದ ಕಾರಣ ಸಹಜವಾಗೇ ಇಂಗ್ಲಿಷ್‌ನಲ್ಲಿ ಬರೆದೆ. ಉರ್ದುವಿನಲ್ಲಿ ಈಮೇಲ್ ಕಳುಹಿಸುವುದು ಕಷ್ಟವಾದರೂ ಅಸಾಧ್ಯವೇನಲ್ಲ. ಅದಕ್ಕೆ ಆತ ತಮ್ಮ ಸರಳ ಸುಲಲಿತ ಇಂಗ್ಲಿಷ್‌ನಲ್ಲಿ ಉತ್ತರಿಸಿದರು, ದಕ್ಷಿಣ ಏಷ್ಯಾದ ವಿದ್ಯಾವಂತರು ತಮ್ಮ ಸುಲಲಿತ ಸರಳ ಇಂಗ್ಲಿಷ್‌ನಿಂದ ಜನಪ್ರಿಯರು. ಈ ಮೇಲ್ ಮೂಲಕ ಒಂದು ಸ್ನೇಹ ಸೇತು ಸಾಧ್ಯವಾಯ್ತು, ಈಗ ನಾವು ನಮ್ಮ ಪರಸ್ಪರ ಬರಹಗಳ ಅನಿಸಿಕೆಗಳ ಜೊತೆಗೆ ವ್ಯಕ್ತಿಗತ ಬದುಕಿನ ಅನೇಕ ವಿವರಗಳನ್ನು ಹಂಚಿಕೊಳ್ಳುತ್ತೇವೆ. ನನ್ನ ಹತ್ತಿರದ ಗೆಳೆಯನೊಬ್ಬ ಪಾಕಿಸ್ತಾನದಲ್ಲಿದ್ದಾನೆ.

ಇದು ಹೇಳ ಹೊರಡುವುದೇನೆಂದರೆ ಜಾಗತಿಕ ಏಕಸಂಸ್ಕೃತಿಯೊಂದು ನಮ್ಮಿಬ್ಬರನ್ನೂ ಒಳಗೊಂಡು ಭಾಗವಹಿಸುವಂತೆ ಮಾಡತೊಡಗಿದ್ದು; ಇಂಗ್ಲಿಷ್ ಮತ್ತು ಈಮೇಲ್‌ಗಳ ಮೂಲಕವೇ, ನನ್ನ ಪಾಕಿಸ್ತಾನಿ ಗೆಳೆಯ ಅಲ್ಲೇ ಉಳಿಯುತ್ತಾನೆ ಕಾರಣ ಅದು ಅವನ ಸ್ವದೇಶ, ಅವನು ತನ್ನ ಮಕ್ಕಳನ್ನೂ ಅಲ್ಲೇ ಓದಿಸಬಯಸುತ್ತಾನೆ. ನನ್ನ ಜೊತೆ ಅಷ್ಟು ಸುಲಭವಾಗಿ ಇಂಗ್ಲಿಷ್‌ನಲ್ಲಿ ಸಂವಾದಿಸಿ ಅವನು ಕಡಿಮೆ ಪಾಕಿಸ್ತಾನಿಯಾದಾನೇನು? ಅವನ ಪಾಕಿಸ್ತಾನಿತನದಲ್ಲೇನಾದರೂ ಕಡಿಮೆಯಾಯ್ತೆ? ಭಾರತೀಯರು ಒಳ್ಳೆಯ ಇಂಗ್ಲಿಷ್ ಮಾತನಾಡುವ ಮೂಲಕ ಹಿಂದೂ, ಜೈನ, ಮುಸ್ಲಿಂ ಅಥವಾ ಪಾರ್ಸಿಗಳಾಗಿ ಉಳಿಯದೇ ಹೋಗುತ್ತಾರೆಯೇ? ಇಲೆಕ್ಟ್ರಿಕ್ ಫ್ಯಾನು ರೆಫ್ರಿಜಿರೇಟರ್, ಟಿವಿ ಸೆಟ್, ಸೂಕ್ತವಾದ ವೈದ್ಯಕೀಯ ಆರೈಕೆ, ಒಂದು ಕಾರ್ ಶ್ಯಾಂಪೂ ಅಥವಾ ಕಂಪ್ಯೂಟರ್ ಜಾಗತಿಕ ಏಕಸಂಸ್ಕೃತಿಯ ಗ್ರಾಹಕವಾದವಾಗಿ ಬಿಡುತ್ತದೆಯೆ?

ಮತ್ತೊಮ್ಮೆ ಉದಾಹರಣೆಯಾಗಿ ಇಂಡಿಯಾವನ್ನ ನೋಡುವ ನನ್ನಂಥಾ ಹೊರಗಿನವನಿಗೆ ಕಾಣಬರುವುದೆಂದರೆ, ಜಗತ್ತಿನ ಇನ್ನಾವ ಜನಗಳಿಗಾಗಿ ಸಾಧ್ಯವಾಗದ ಬಹುಮುಖಿ ಸಂಸ್ಕೃತಿಗಳ ಜೊತೆಗೆ ಶಾಂತವಾಗಿ ಆರಾಮವಾಗಿ ಇರಬಲ್ಲ ಗುಣ ರೂಢಿಗತವಾಗಿರುವುದು ಇಲ್ಲಿ ಕಂಡುಬರುತ್ತದೆ. ಈ **'ಜಾಗತಿಕಏಕಸಂಸ್ಕೃತಿ'** ಕಲ್ಪನೆ ಕೂಡಾ ಮೊಳೆಯುವುದಕ್ಕೆ ಮೊದಲೇ ಭಾರತೀಯರು ಅನೇಕ ಸಾಂಸ್ಕೃತಿಕ ಚೌಕಟ್ಟುಗಳ ಜೊತೆಗೆ ಬದುಕುವುದನ್ನ ರೂಢಿಸಿಕೊಂಡಿದ್ದಾರೆ. ಭಾರತೀಯ ಅನುಭವ ಎನ್ನೊದಿದೆಯಲ್ಲ ಅದನ್ನು ನಾನು ಅರ್ಥ ಮಾಡಿಕೊಂಡ ಹಾಗೆ ಸೂಚಿಸುವುದು ಏನೆಂದರೆ; ತನ್ನ ಮೂಲ ಸಾಂಸ್ಕೃತಿಕ ಅಸ್ತಿತ್ವವನ್ನು ಉಳಿಸಿಕೊಂಡೂ ನಿಷಿಗಾಕಿ ಹೇಳುವ ಅಮೆರಿಕನ್ ಅಥವಾ ಪಾಶ್ಚಾತ್ಯ ಅಂಶಗಳನ್ನು ರೂಢಿಸಿಕೊಂಡ ಜಾಗತಿಕ ಸಂಸ್ಕೃತಿಯೊಂದಿಗೂ ಒಡನಾಡಲು ಸಾಧ್ಯ.

ನಾನು ವಿವರಿಸುತ್ತಿರುವ ವರ್ಣಪಟಲದ ಮುಂದಿನ ಅಂಶವನ್ನೂ ಸಮಕಾಲೀನ ಇಂಡಿಯಾ ಸ್ಫುಟವಾಗಿ ವಿಶ್ಲೇಷಿಸಿದೆ, ಅದನ್ನ **"ಸಾಂಸ್ಕೃತಿಕ ವೈವಿಧ್ಯತೆ"** ಎಂದು ಕರೆಯುವ; ತಮ್ಮದೇ ಆದ ನಿರ್ದಿಷ್ಟವಾದ ಶಕ್ತಿ ಮತ್ತು ದೌರ್ಬಲ್ಯಗಳನ್ನು ಜೊತೆಗೂಡಿಸಿ ರೂಢಿಸಿಕೊಂಡು ಈ ಜಗತ್ತಿನಲ್ಲಿ ಅನೇಕ ಸಂಸ್ಕೃತಿಗಳು ಇವೆ. ತಮದೇ ಆದ ಭಾಷೆ ವಿದ್ಯಾಭ್ಯಾಸಕ್ರಮ ರೂಪಿಸಿಕೊಂಡು ಬದುಕುತ್ತಿರುವ ಇವು ತಮ್ಮೊಳಗೆ ಬದುಕುವ ಮನುಷ್ಯರಿಗೆ ತಮ್ಮದೆ ಆದ ಸಂಸ್ಕೃತಿಯ ಬೇರುಗಳಲ್ಲಿ ರೂಢಿಗತವಾದ ಅನನ್ಯತೆ ಪ್ರಚೋದಿಸುತ್ತದೆ.

ಅಂಥಾ ಜಗತ್ತಿನಲ್ಲಿ ಬದುಕುವವರು ಬಹುಭಾಷಿಕವಾಗಿ ಬಹುಸಂಸ್ಕೃತಿಗಳಿಗೆ ಒಡ್ಡಿಕೊಂಡವ ರಾಗೇನೂ ಇರಬೇಕಾಗಿಲ್ಲ. ತಮ್ಮ ಸಂಸ್ಕೃತಿಯ ಮೂಲ ಬೇರಿನಲ್ಲಿ ಹುಡುಗಿಯೂ ಮತ್ತೊಂದು ಸಂಸ್ಕೃತಿಯ ಜೊತೆಗೂಡುವಿಕೆ; ಅರ್ಥೈಸುವ ಸಂವಾದಿಸುವ ಅನುಸಂಧಾನ ಸಾಧ್ಯವಿದೆ. ಭಾರತವು ಜಗತ್ತಿನ ಅತ್ಯುತ್ತಮ ಬಹುಭಾಷಿಕ ಬಹುಸಾಂಸ್ಕೃತಿಕ ಸಹಜೀವನದ ಪ್ರಾತಿನಿಧಿಕ ಉದಾಹರಣೆಯಾಗಿ ನಿಲ್ಲುತ್ತದೆ. ಭಾರತದ ಪ್ರಮುಖ ಪಟ್ಟಣಗಳಲ್ಲಿ ಜನಗಳು ಒಂದಕ್ಕಿಂತಲೂ ಹೆಚ್ಚು ಭಾಷಿಕ ಮತ್ತು ಸಾಂಸ್ಕೃತಿಕ ಜನಸಮೂಹಗಳ ಜೊತೆಗೆ ಒಡನಾಡುತ್ತಾ ಬೆಳೆಯುವುದನ್ನ ಬದುಕುವುದನ್ನ ಕಾಣಬಹುದು. ಜಗತ್ತಿನ ಯಾವ ದೇಶದ ಜನರೂ ಇಷ್ಟೊಂದು ಸುಲಭವಾಗಿ ಸರಳವಾಗಿ ಒಂದು ಸಾಂಸ್ಕೃತಿಕ ಮೂಲದ ಮಾನದಂಡದಿಂದ ಮತ್ತೊಂದಕ್ಕೆ ಸರಿಯುವುದನ್ನು ಕಾಣಲಾಗದು. ತಮ್ಮ ಬಾಲ್ಯ-ಮಾತೃಭಾಷೆಗಳನ್ನು ಒಳಗೊಂಡೂ ಹೇಗೆ ಇರಬಹುದೆನ್ನುವುದಕ್ಕೆ ಇಂಡಿಯಾ ಉದಾರಣೆಯಾಗಿದೆ.

ಕೊನೆಯದಾಗಿ ನಾನು ವಿವರಿಸುತ್ತಿರುವ ವರ್ಣಪಟಲದ ಕೊನೆಯ ಅಂಚಿನಲ್ಲಿ 'ಮಡಿವಂತ ಸಾಂಸ್ಕೃತಿಕ ರಾಷ್ಟ್ರೀಯತೆ'ಯನ್ನು. ಈ ವರ್ಗೀಕರಣ ಶಾಸನಗಳು ಗುಂಪುಗಳು ಅಥವಾ ಪಾರ್ಟಿಗಳು. ಇದನ್ನೇ ಬಾರ್ಬರ್ 'ಜೆಹಾದ್' ಅಂತಲೂ ಗುರುತಿಸುತ್ತಾರೆ. ಕೆಲವು ದೇಶಗಳ ಆಡಳಿತಾರೂಢ ಗುಂಪುಗಳು ಅಥವಾ ಪಾರ್ಟಿಗಳು ತಮ್ಮ ಸಂಸ್ಕೃತಿ-ಧರ್ಮ ಸಂಪ್ರದಾಯ ಇವುಗಳ ಶುದ್ಧೀಕರಣವೇ ತಮ್ಮ ರಾಜಕಾರಣದ ದಿಕ್ಕು ಮತ್ತು ಧ್ಯೇಯಗಳನ್ನಾಗಿ ಮಾಡಿಕೊಂಡಿರುತ್ತವೆ. ಸಾಂಸ್ಕೃತಿಕ ಹೆಮ್ಮೆ ಎನ್ನುವಂಥಾದ್ದು ಒಂದು ಸಮೂಹವನ್ನ ಮತ್ತು ಅದರ ಅನನ್ಯತೆಯನ್ನು ರೂಪಿಸುವಲ್ಲಿ ಅಗತ್ಯವಾದದ್ದು. ಆದರೆ ಇಲ್ಲಿ ಅದು ಹೇಗೆ ಪರಿವರ್ತಿತವಾಗುತ್ತದೆ ಎಂದರೆ ಯಾವುದೆಲ್ಲ ಸಂಪ್ರದಾಯಬದ್ಧ ಅಲ್ಲವೋ ಅದೆಲ್ಲವನ್ನೂ ಹಿಂಸಾತ್ಮಕವಾಗಿ ದಮನಿಸುವ ಒತ್ತರಿಸುವ ಕ್ರಿಯೆಗೆ ತೊಡಗುತ್ತದೆ. ಪಶ್ಚಿಮ ಯುರೋಪ್ಪ ಮತ್ತು ಅಮೆರಿಕಾಗಳಲ್ಲಿ ಇಂಥಾ ಅನೇಕ ಉದಾಹರಣೆಗಳನ್ನ ಗಮನಿಸಬಹುದು. ಅಮೆರಿಕನ್ನರ ಕಮ್ಯುನಿಸ್ಟ್ ವಿರೋಧಿಯಾದ "witch hunts" ಅಥವಾ ರಿವಿಷನಿಸ್ಟರನ್ನ ಮುಗಿಸುವ ಸೋವಿಯತ್‌ನ ಉದ್ದೇಶಿತ ಪ್ರಯತ್ನ "Agents of Imperilism" ಆ ಮನೋಭಾವ ಇತರೆ ಅನೇಕ ದೇಶಗಳಲ್ಲಿ ಇರುವಂಥಾದ್ದೆಂದು ಬೇರೆ ಹೇಳಬೇಕಿಲ್ಲ.

"ಮಡಿವಂತ ಸಾಂಸ್ಕೃತಿಕ ರಾಷ್ಟ್ರೀಯತೆಯ" ಗುಣಗಳು ಬಹು ಪರಿಚಿತವೆ; ಮೊತ್ತ ಮೊದಲಿಗೆ ಒಂದು ಕಲ್ಪಿತ ಕಳೆದು ಹೋದ ಭೂತಕಾಲವನ್ನ ಅಥವಾ ವೈಭವದ ಸ್ಥಿತಿಯನ್ನ ನಿರ್ಮಿಸಿಕೊಳ್ಳುವುದು. ಆ ಕಾಲದಲ್ಲಿ ಯಾವ ಹೊರಗಿನ ಅಥವಾ ಆಧುನಿಕ ಪ್ರಭಾವಗಳು ಇಲ್ಲದೆ ಅಂಥಾದ್ದೊಂದು ಕಾಲದಲ್ಲಿ ತಮ್ಮ ಸಂಸ್ಕೃತಿಯ ಸಾಂಸ್ಕೃತಿಕ ಪ್ರಭಾವ ಬಲು ವಿಸ್ತಾರವಾಗಿ ಹರಡಿದ್ದರ ಬಗ್ಗೆ, ಆಗಿನ ಸಾಮಾಜಿಕ ರಾಜಕೀಯ ನಿಯಮಗಳು ಸಮಾನವಾಗಿ ಗೌರವಿಸಲ್ಪಡುತ್ತಿದ್ದುದು ಅಂಥಾದ್ದೊಂದು 'ಸುವರ್ಣಯುಗವನ್ನ' ಇತ್ತೀಚಿನ ಹೀನಾಯವಾದ ಸ್ಥಿತಿಗೆ ಹೋಲಿಸಿ ತಾವು ಅಂಥಾದ್ದೊಂದು ಸ್ಥಿತಿಗೆ ಪುನರುತ್ಥಾನಗೊಳ್ಳುವುದೇ ನಮ್ಮ ಇವತ್ತಿನ ಸಾಂಸ್ಕೃತಿಕ ಉದ್ದೇಶ ಅಂತ ಸಾಧಿಸುವುದು. ಈ ಪುನರುತ್ಥಾನದ ಮುಖ್ಯ ಶತ್ರುಗಳು ಎಂದರೆ ಸಮಾನ ಗುಣವಿಲ್ಲದವರು, ಸಮದರ್ಶಿಗಳಾದ ಕಾಸ್ಮೋಪಾಲಿಟನ್‌ಗಳು ಹೊರಗಿನಿಂದ ಬಂದು ನೆಲೆಸಿದವರು ಮತ್ತು ಉದ್ಧಟ ನಾಗರೀಕರು, ಅವರುಗಳ ಮುಖ್ಯ ಅಪರಾಧ ಒಂದು ತಲೆಕೆಳಗು ಮಾಡಬಲ್ಲ ಪಲ್ಲಟವನ್ನು ಆರಂಭಿಸುವುದು, ಇವರ ಸಾಂಸ್ಕೃತಿಕ ಪ್ರಾಬಲ್ಯವನ್ನ ಪ್ರಶ್ನಿಸುವುದು, ಅಶ್ಲೀಲ ಚಿತ್ರಗಳ ಪ್ರಚಾರ ಮಹಿಳೆಯರ ಬಗ್ಗೆ ಅಗೌರವ ಧಾರ್ಮಿಕ ಕಟ್ಟಳೆಗಳ ಮತ್ತು ಧಾರ್ಮಿಕ ಸ್ಥಳಗಳ ಬಗ್ಗೆ ವಿರೋಧ ತಮ್ಮ ಮಕ್ಕಳನ್ನ ವಿದೇಶೀ ಅಭ್ಯಾಸ ವಿದೇಶೀ ವಸ್ತ್ರಗಳಿಗೆ ವಿದೇಶೀ ವಿಚಾರಗಳಿಗೆ ಮೋಹಿಸುವಂತೆ ಮರುಳಾಗುವಂತೆ ಮಾಡುವುದು. ಪರಿಶುದ್ಧತೆಯೇ ಇವರ ಆದರ್ಶ, ಆದರ್ಶ ಸಾಧನೆಗೆ ಅದು ಪವಿತ್ರ ಯುದ್ಧವನ್ನೂ ಒಪ್ಪುತ್ತದೆ. ಯಾರ ತಲೆಯನ್ನಾದರೂ ಕಡಿದು ಹೊರಗಿಡುವುದನ್ನೇ ಬಾರ್ಬರ್ 'ಜೆಹಾದ್' ಅಂತ ಕರೆದದ್ದು. ಈ ಮಡಿವಂತ ಸಾಂಸ್ಕೃತಿಕ ರಾಷ್ಟ್ರೀಯತೆ ಎಲ್ಲಿಂದ ಬಂತು? ಒಂದು ಭಾಗ ಆ ಸಂಸ್ಕೃತಿಯ ದಮನ ಮತ್ತು ವಿನಾಶದ ಒಳಸಂಚಿನ ಭೀತಿಯಿಂದ ಮತ್ತೊಂದು ಭಾಗ ಆ ಸಂಸ್ಕೃತಿಯ ಜನಗಳಿಗೆ ನಾವು ಅನರ್ಹರು ಅಶಕ್ತರು ಅಧಿಕಾರವಿಲ್ಲದೆ ಬದುಕುತ್ತಿರುವವರು ಎಂಬ ಭಾವನೆ ಬಲವಾದಾಗ. ಈ ಎಲ್ಲಾ ಭಾವನೆಗಳೂ ಅಸಹಿಷ್ಣು ಮೂಲಭೂತವಾದಿತನ, ಇದು ಅರ್ಥವಾಗುವಂಥದ್ದು. ನಮ್ಮೊಳಗಿನ ನಮ್ಮ ಅನನ್ಯತೆ ಎನ್ನುವುದು ಒಂದು ಗೌರವ ಪೂರ್ಣ ಸಂಸ್ಕೃತಿಯೊಂದರಿಂದ ಬಂದದ್ದು. ನಮ್ಮೊಳಗಿನ 'ನಮ್ಮದು' ಎನ್ನಿಸಬಲ್ಲ ಮೌಲ್ಯ ಹಾಗೂ ಕೆಲವು ಗುಣಗಳು. ಸಂಸ್ಕೃತಿಯೊಂದು ಅಪಮೌಲ್ಯಗೊಂಡರೆ ಅಥವಾ

ಅಗೌರವಿಸಲ್ಪಟ್ಟಲ್ಲಿ ಅದು ಮನುಷ್ಯರನ್ನ ಕ್ರೂರಿಗಳನ್ನಾಗಿ ಅಸಹಿಷ್ಣುಗಳನ್ನಾಗಿ ಕೊಲೆಗಡುಕರನ್ನಾಗಿ ಮಾಡುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಇದನ್ನ ವಿವರಿಸುತ್ತಿದ್ದೇನೆಯೇ ಹೊರತು ಸಮರ್ಥಿಸಿಕೊಳ್ಳುತ್ತಿಲ್ಲ. ಈ "ಜಾಗತಿಕ ಏಕಸಂಸ್ಕೃತಿ" ಇತರ ವೈವಿಧ್ಯಮಯ ಸಂಸ್ಕೃತಿಗಳನ್ನ ದಮನಿಸ ಹೊರಟರೆ ಈ ರೀತಿಯ ಕುರೂಪಿ ಅಸಹಿಷ್ಣು ಸಾಂಸ್ಕೃತಿಕ ರಾಷ್ಟ್ರೀಯತೆ ಉದ್ಭವವಾಗುವುದನ್ನ ಕುರಿತು ಎಚ್ಚರವಹಿಸಬೇಕಿದೆ.

ಈ ಸಂಸ್ಕೃತಿಗಳ ವರ್ಣಪಟಲದ ಸಿದ್ಧಾಂತಗಳನ್ನ ಹೀಗೆ ಬಿಡಿಸಿಟ್ಟು ಕಣ್ಣೆದುರಿಗೆ ತಂದುಕೊಳ್ಳುವುದರ ಮುಖ್ಯ ಉದ್ದೇಶ ಈ ಮಾಹಿತಿ ಯುಗವು ಈಗ ವಿವರಿಸಿದ ಸಾಂಸ್ಕೃತಿಕ ವರ್ಣಪಟಲಕ್ಕೆ ಸಂಬಂಧಿಸಿದೆ. ಕೆಲವು ಸಂಬಂಧಗಳನ್ನ ನಿರೂಪಿಸಿ ಕೊನೆಯಲ್ಲಿ ಕೆಲವು ಎಚ್ಚರಿಕೆಯ ಮಾತುಗಳೊಂದಿಗೆ ಮುಗಿಸಬಯಸುತ್ತೇವೆ.

ಹೊರಗಿನ ಒಬ್ಬ ವೀಕ್ಷಕನಾಗಿ ನಾನು ಕಂಡದ್ದೆಂದರೆ, ಇಂಡಿಯಾಕ್ಕೆ ಸ್ಥಳೀಯ ಭಾಷೆಗಳ ತತ್ರಾಂಶಗಳ (ಸಾಫ್ಟ್‌ವೇರ್) ಆಯ್ಕೆ ಕುರಿತು ಕೆಲವು ತುರ್ತುಗಳಿವೆ. ಪ್ರಾಯಶಃ ನನ್ನ ದೇಶವನ್ನುಳಿದು ಉಳಿದ್ಯಾವ ದೇಶಗಳಲ್ಲೂ ಇಲ್ಲದಷ್ಟು ಸಂಶೋಧಕ ಪ್ರವೃತ್ತಿಯ ಸೃಜನಶೀಲ ಚೈತನ್ಯಶೀಲ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಡಿಸೈನರ್‌ಗಳು ಭಾರತದಲ್ಲಿದ್ದಾರೆ. ಆದರೆ ಬಹುಪಾಲು ಇಂಡಿಯಾದ ದೊಡ್ಡ ಸಾಫ್ಟ್‌ವೇರ್ ಕಂಪೆನಿಗಳು ಸಾಫ್ಟ್‌ವೇರ್ ರಫ್ತಿಗೆ ಬದ್ಧವಾಗಿವೆ. ಅವುಗಳು ಹಾಗೆ ಗಮನವಹಿಸಲಿಕ್ಕೂ ಸೂಕ್ತವಾದ ಕಾರಣಗಳಿಲ್ಲದೇ ಇಲ್ಲ. ಆದರೆ ಸ್ಥಳೀಯ ಮಾರುಕಟ್ಟೆಯ ಬಗ್ಗೆಅವುಗಳಿಗೆ ಆಸಕ್ತಿ ಇಲ್ಲ. ಮುಖ್ಯವಾದ ಅಮೆರಿಕನ್ ಸಾಫ್ಟ್‌ವೇರ್ ಕಂಪೆನಿಗಳು ಯಾವ ಸ್ಥಳೀಯ ಭಾಷೆಗಳಲ್ಲೂ ಸಂಪೂರ್ಣವಾಗಿ ತತ್ರಾಂಶ ಮತ್ತು ಇತರ ಕಾರ್ಯಗಳನ್ನೊಳಗೊಂಡು ರೂಪಿಸಿಲ್ಲ. ಅಂಥಾ ಯೋಜನೆಯೂ ಅವರಲ್ಲಿಲ್ಲ (IBM ಮತ್ತು DOSಗಳ ಹಿಂದಿ ಅವತರಣಿಕೆಗಳನ್ನ ಬಿಟ್ಟು). ಯುರೋಪಿನ ಉದ್ದಗಲಕ್ಕೂ ಹರಡಿಕೊಂಡ ಹಿಂದಿ ಮಾತನಾಡುವ ಜನಗಳಿದ್ದಾಗ್ಯೂ ಹಿಂದಿಯಲ್ಲೊಂದು ಕಂಪ್ಯೂಟರ್ ಇಲ್ಲ. ಇಂಡಿಯಾದ ಇಂಟರ್‌ನೆಟ್‌ಗಳ ಸಂಬಂಧವಂತೂ ಇನ್ನೂ ಗೊಂದಲಕಾರಿಯಾಗಿದೆ. ಅನೇಕ ಸೃಜನಶೀಲ ಪ್ರಸ್ತಾವನೆಗಳಿದ್ದಾಗ್ಯೂ ಕೆಲವರು ಮಾತ್ರ IISCIನ ಗುಣಮಟ್ಟಕ್ಕೆ ತಯಾರಿಸಿದರೆ ಒಂದಕ್ಕೊಂದು ಹೊಂದದ ಹಾಗೆ ಇವು ಇವೆ. IISCIನ ಮಾನದಂಡಗಳನ್ನ ಕುರಿತೇ ಅನೇಕ ಆಕ್ಷೇಪಗಳಿವೆ. ಸಮಕಾಲೀನ ಕಂಪ್ಯೂಟಿಂಗ್‌ನ ಅಗತ್ಯಕ್ಕೆ ತಕ್ಕಹಾಗೆ ಅವುಗಳನ್ನ ಬದಲಾಯಿಸಬೇಕಾದ ಅಗತ್ಯ ಇದೆ. ಅದರಲ್ಲೂ ದಕ್ಷಿಣ ಭಾರತೀಯ ಭಾಷೆಗಳು ಇವುಗಳ ಪ್ರಯೋಜನ ಪಡೆಯಬೇಕಿದೆ. CADC ಮತ್ತು NCSTಗಳು ಸ್ಥಳೀಯ ಗೊಳಿಸುವುದಕ್ಕೆ ಬೇರೆಯರೇ ದಿಕ್ಕುಗಳನ್ನು ಹಿಡಿದಿದೆ. ಇದರ ಹಾಗೆ ಇನ್ನೂ ಹತ್ತು ಹನ್ನೆರಡು ಸಂಸ್ಥೆಗಳೂ ಇವೆ, ಭಾರತೀಯ ಭಾಷೆಗಳ ಇಂಟರ್‌ನೆಟ್‌ಗಳ ಪರಿಣಾಮ ಇನ್ನಷ್ಟು ಕಗ್ಗಂಟಾಗಿ ಹೊರಹೊಮ್ಮಲಿದೆ, ಭಾರತೀಯರು ಏಕತ್ರಗೊಂಡು ತಮ್ಮ ಹದಿನೆಂಟು ಅಧಿಕೃತ ಭಾಷೆಗಳ ಕಂಪ್ಯೂಟರ್ ಸಂಕೇತಗಳನ್ನ ಒಂದು ನಿರ್ದಿಷ್ಟ ಗುಣಮಟ್ಟಕ್ಕೆ ರೂಪಿಸಬೇಕಿದೆ. ಇದು ತತ್‌ಕ್ಷಣದ ತುರ್ತು ಅಗತ್ಯ.

'ಸ್ಥಳೀಯ' ಗೊಳಿಸುವಿಕೆಗೆ ಪರ್ಯಾಯ ಸ್ಪಷ್ಟವಾಗಿದೆ; ಸ್ಥಳೀಯ ಭಾಷಾ ತತ್ರಾಂಶ (ಸಾಫ್ಟ್‌ವೇರ್) ಇಲ್ಲದೆಯೆ ಭಾರತದಲ್ಲಿನ ಕಂಪ್ಯೂಟರ್‌ಗಳು ಈ ಮಾಹಿತಿ ಯುಗದಲ್ಲಿ ಜಾಗತಿಕ ಏಕಸಂಸ್ಕೃತಿಯತ್ತ ಇಡುವ ಮತ್ತೊಂದು ಹೆಜ್ಜೆಯಾಗಿಬಿಡುತ್ತದೆ ಅಷ್ಟೆ. ಬರೀ ಇಂಗ್ಲಿಷ್ ಬಲ್ಲ ಭಾರತೀಯರು (ಈಗಾಗಲೇ

ಇವರದ್ದು ಬಲಾಢ್ಯ ಹಣವಂತರ ಗುಂಪಾಗಿ ರೂಪು ಗೊಂಡಿದೆ) ಅಂಥವರಿಗೆ ಇನ್ನಷ್ಟು ಶಕ್ತಿ ಬಲಗಳನ್ನ ಕೊಡುವ ಕೆಲಸ ಈ ಮಾಹಿತಿ ಯುಗವು ಮಾಡುತ್ತದೆ. ಈ ಸುಶಿಕ್ಷಿತ ಬಲಾಢ್ಯರ ಮತ್ತು ಬಲಹೀನರ ನಡುವಿನ ಅಂತರ ಇನ್ನಷ್ಟು ಹೆಚ್ಚಾಗುತ್ತದೆ, ಹಾಗೆಯೆ ಇಲ್ಲಿನ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗಳು ಬೆಲೆ ಇಲ್ಲದಂತಾಗಿಬಿಡುತ್ತದೆ. ಹೀಗಾಗುವುದರ ಮೂಲಕ ಶಾಂತವಾದ ಉದಾರವಾದ ಸಾಂಸ್ಕೃತಿಕ ವೈವಿಧ್ಯತೆಯನ್ನು ಕುರೂಪಿ ಅಸಹಿಷ್ಣುವಾದ **'ಸಾಂಸ್ಕೃತಿಕ ರಾಷ್ಟ್ರೀಯತೆ'** ನುಂಗಿಹಾಕಿಬಿಡುವ ಅಪಾಯ ಇದ್ದೇ ಇದೆ.

ಯುರೋಪಿನ ನನ್ನದೇ ದೇಶದಲ್ಲಿ ಅಂಥಾ ಅನೇಕ ಉದಾಹರಣೆಗಳಿವೆ, ಜಗತ್ತಿನ ಎಲ್ಲಾ ದೇಶಗಳಲ್ಲೂ ಈ ಸಾಧ್ಯತೆ ಇದೆ. 'ಸ್ಥಳೀಯ ಗ್ರೊಳ್ಳುವಿಕೆ' (ಇಲ್ಲಿನದ್ದಾಗುವುದು ಅದರ ಗುಣಮಟ್ಟದ ವಿಷಯವನ್ನೂ ಒಳಗೊಂಡು) ಇವತ್ತಿನ ಮಾಹಿತಿ ಯುಗದ ಬಹುದೊಡ್ಡ ಅನಿವಾರ್ಯತೆ, ಭಾರತದ ಬಹುಸಂಖ್ಯಾತ ಜನಗಳನ್ನ ಅದು ತಲುಪಬೇಕಿದೆ. ಕಂಪ್ಯೂಟರೀಕರಣ ಮರೆತು ಹೋಗಿರುವ ಶೇ. 95 ಭಾಗದ ಜನಸಮೂಹಗಳಿಗೆ ಅದು ಅಗತ್ಯವಾಗಿ ತಲುಪಬೇಕಿದೆ.

ಮತ್ತೊಂದು ಮುಖ್ಯವಾದ ಧೋರಣೆ ರೂಪುಗೊಂಡಿದೆ. ಅದು ಅಮೆರಿಕದ ಕೆಲವು ಮುಖ್ಯ ಸಾಫ್ಟ್‌ವೇರ್ ತಯಾರಕರು ಮತ್ತು ಭಾರತೀಯ ಕಂಪೆನಿಗಳ ಜೊತೆಗೆ ಚರ್ಚಿಸಿದಾಗ, ಅಮೆರಿಕಾದಲ್ಲಿ ಹಲವು ಸಂಕೀರ್ಣ ಕಾರಣಗಳಿಂದಾಗಿ ಭಾರತೀಯ ಭಾಷೆಗಳಲ್ಲೇ ವಿಂಡೋಸ್ ಎನ್‌ಟಿ ಮುಂತಾದ ಸಾಫ್ಟ್‌ವೇರ್‌ಗಳನ್ನ ರೂಪಿಸಲು ಸಾಧ್ಯವಾಗಲಿಲ್ಲ, ಕಾರಣ ಮಾರ್ಕೆಟ್ ಅಷ್ಟೊಂದು ದೊಡ್ಡದಾಗಿ ಅಥವಾ ಲಾಭದಾಯಕವಾಗಿ ಕಂಡುಬರುತ್ತಿಲ್ಲ. ಸ್ಥಳೀಯ ಭಾಷೆಗಳಾದ ಹಿಂದಿ ತೆಲುಗು ಕನ್ನಡ ತಮಿಳು ಮುಂತಾದ ಭಾಷೆಗಳಲ್ಲಿ ಸಾಫ್ಟ್‌ವೇರ್‌ಗಳನ್ನು ರೂಪುಗೊಳಿಸಲು ಈ ನಂಬಿಕೆ ಸರಿಯಾದದ್ದು ಎಂದು ನನಗೆ ಅನ್ನಿಸುತ್ತಿಲ್ಲ. ಸ್ಥಳೀಯ ಕೋಡಿಂಗ್ ಇಂಗ್ಲಿಷ್ ಭಾಷೆಯ ಮೇಲೆ ಅವಲಂಬಿತವಾಗಿಯೂ ಸಧ್ಯಕ್ಕೆ ರೂಪುಗೊಳ್ಳುತ್ತಿವೆ. ಆದರೆ ಕೀಲಿಮಣೆ (ಕೀಬೋರ್ಡ್) ಸ್ಥಳೀಯ ಭಾಷೆಯಲ್ಲೂ ವಿನ್ಯಾಸಗೊಳಿಸಲು ಸಾಧ್ಯವಿದೆ. ಉದಾಹರಣೆಗೆ ದೇವನಾಗರಿ ಲಿಪಿ. ನಾನು ಗಮನಿಸಿದ ಹಾಗೆ ಅನೇಕ ಕ್ರಿಯಾಶೀಲ ಕಂಪೆನಿಗಳು ಇಂಡಿಯಾದಲ್ಲಿ ತಮ್ಮ ಮುಖ್ಯ ಗಮನ ಹರಿಸಿರುವುದು ಬರೀ ಸಾಫ್ಟ್‌ವೇರ್ ರಫ್ತುಮಾರುಕಟ್ಟೆಗೆ, ಸ್ಥಳೀಯ ಮಾರುಕಟ್ಟೆಯ ಶಕ್ತಿ ಸಂಪನ್ಮೂಲಗಳನ್ನ ಕಡೆಗಣಿಸಿ ಅವರ ಮುಂದಾಲೋಚನೆಯ ಯೋಜನೆಗಳು ಸಾಫ್ಟ್‌ವೇರ್ ಪ್ಯಾಕೇಜುಗಳ ನಿರ್ಮಿತಿಯ ದಿಕ್ಕಿನಲ್ಲೇ ಇದೆ.

ಈ ರೀತಿಯ ಆರ್ಥಿಕ ಆಧಾರಿತ ನಿರ್ಧಾರಗಳು ಅಮೆರಿಕಾ ಮತ್ತು ಇಂಡಿಯಾದ ದೊಡ್ಡ ದೊಡ್ಡ ಕಂಪೆನಿಗಳಿಂದ ಸಾಧ್ಯವಾಗದೇ ಹೋಗಬಹುದು ಆದರೆ ಸಣ್ಣ ಸಣ್ಣ ಉದ್ದಿಮೆದಾರರು ನಮ್ಮದೇ ನೆರೆಮನೆಯ ಜನಗಳು ಈ ಕೆಲಸವನ್ನ ಮಾಡಲು ತೊಡಗಿದ್ದಾರೆ. ಕೆಲವು ಚುರುಕಾದ ಹತ್ತು ಹನ್ನೆರಡು ಮಂದಿ ಸೇರಿ ಅತ್ಯಂತ ಸೃಜನಾತ್ಮಕವಾದ ಈಮೇಲ್ ಪ್ರೋಗ್ರಾಮುಗಳನ್ನ ರೂಪಿಸಿದ್ದಾರೆ, ಸ್ಥಳೀಯ ಭಾಷಾ ಸಾಫ್ಟ್‌ವೇರುಗಳನ್ನ ರಚಿಸಿದ್ದಾರೆ. ಆದರೆ ಇವರ ಮುಖ್ಯ ಸಮಸ್ಯೆ ಎಂದರೆ ಅವರ ಪ್ರಯತ್ನಗಳು ತುಂಬಾ ಸಣ್ಣ ಪ್ರಮಾಣವವುಗಳು. ಅವರಿಗೆ ಹಣಕಾಸು ಸಹಾಯ ಬೆಂಬಲಗಳಿಲ್ಲ ಆದರೆ ಶೋಧಕ ಪ್ರವೃತ್ತಿ ಅವರಲ್ಲಿದೆ. ನಮ್ಮ ಅಕ್ಕಪಕ್ಕದ ನೆರೆಹೊರೆಯವರಿಂದಲೇ ಈ ಕಂಪ್ಯೂಟರ್ ಸ್ಥಳೀಕರಣ ಸಾಧ್ಯವಾಗುತ್ತದೆ ಎನ್ನುವ ನಂಬಿಕೆ ನನ್ನದು. ಉದಾಹರಣೆಗೆ ಅಂಥಾ ಒಂದು ಕಂಪೆನಿಯಿಂದ ಈಗಾಗಲೇ ನಾನು ಗುಜರಾತಿ, ಮರಾಠಿ ಮತ್ತು ಹಿಂದಿಯ ಈಮೇಲ್‌ಗಳನ್ನ ಪಡೆಯುತ್ತಿರುವೆ. (ದುರಾದೃಷ್ಟವಶಾತ್

ನನಗೆ ಅವುಗಳನ್ನ ಓದಲು ಬರುವುದಿಲ್ಲ) ಕೀಬೋರ್ಡ್ ವಿನ್ಯಾಸ ಮತ್ತು ಒಳಗಿನ ಸಂಕೇತಗಳು ಸಾಧ್ಯವಾಗಿ ಈ ಭಾರತೀಯ ಭಾಷೆಗಳಲ್ಲಿ ನನಗೂ ಅಲ್ಪಸ್ವಲ್ಪ ಪರಿಣತಿ ಇದ್ದಿದ್ದರೆ ನಾನು ನಿಜಕ್ಕೂ ಅವರಿಗೆ ಅದೇ ಭಾಷೆಗಳಲ್ಲಿ ಉತ್ತರಿಸುತ್ತಿದ್ದೆ.

ಕೊನೆಯದಾಗಿ ಆರ್ಥಿಕತೆ ಮಾರ್ಕೆಟ್ ಶಕ್ತಿಗಳು ಮತ್ತು ಸಾರ್ವಜನಿಕ ಸಂಸ್ಥೆಗಳ ಪಾತ್ರವನ್ನು ಕುರಿತಾಗಿ ಹೇಳಬೇಕಿದೆ. ನನ್ನ ಹಳೆಯ ಗೆಳೆಯ ಹರೀಶ್‌ಕುಮಾರ್ 'ಭಾರತ್ ಭಾಷಾ' ಎಂಬ ಸ್ಥಳೀಯ ಸಾಫ್ಟ್‌ವೇರ್ ರೂಪಿಸಿದಾತ; ಈ ಸ್ಥಳೀಯ ಭಾಷೆಗಳ ಸಾಫ್ಟ್‌ವೇರ್ ಮಾರುಕಟ್ಟೆಯ ಅಗಾಧವಾದ ಸಂಪನ್ಮೂಲ ಅವರು ಗುರ್ತಿಸುತ್ತಾರೆ. ಉದಾಹರಣೆಗೆ ಬಾಂಬೆಯ ಸಣ್ಣ ಮತ್ತು ಮಧ್ಯಮ ಗಾತ್ರದ ವ್ಯಾಪಾರಿಗಳು ತಮ್ಮ ಕೆಲಸ ಕಾರ್ಯಗಳನ್ನ ತಮ್ಮ ಗುಜರಾತಿ ಅಥವಾ ಮರಾಠಿ ಭಾಷೆಗಳಲ್ಲಿ ನಿರ್ವಹಿಸುತ್ತಾರೆ. ಅವರಿಗೆ ಆರ್ಥಿಕವಾಗಿ ಕಂಪ್ಯೂಟರ್ ಕೊಳ್ಳುವುದು ಲಾಭದಾಯಕ. ಆದರೆ ಇಂಗ್ಲಿಷನ್ನಲ್ಲ, ಇಂಗ್ಲಿಷ್ ಭಾಷಾಧಾರಿತ ಸಣ್ಣ ಬಿಸಿನೆಸ್ ಪ್ಯಾಕೇಜಿನ ಬಳಕೆಗಲ್ಲ. ಒಳ್ಳೆಯ ಮಾರುಕಟ್ಟೆ ಬೇಡಿಕೆ ರೂಪುಗೊಳ್ಳುವುದು ಕಡಿಮೆ ಅವಧಿಯಲ್ಲಲ್ಲ. ಗುಜರಾತಿಯಲ್ಲಿ ತತ್ರಾಂಶ (ಸಾಫ್ಟ್‌ವೇರ್) ಇಲ್ಲವಾದಲ್ಲಿ ಅದಕ್ಕೆ ಬೇಡಿಕೆಯೂ ಇರುವುದಿಲ್ಲ. ಕುಮಾರ್ ಉದಾಹರಿಸುವ ಇಬ್ಬರು ಸೇಲ್ಸ್‌ಮನ್‌ಗಳು ಭಾರತದ ಹಳ್ಳಿ ಪ್ರದೇಶಕ್ಕೆ ಷೂ ಮಾರಾಟ ಮಾಡಲು ಮಾರುಕಟ್ಟೆಯ ವೀಕ್ಷಣೆಗೆ ಕಳುಹಿಸಲ್ಪಡುತ್ತಾರೆ, ಒಬ್ಬ ಸೇಲ್ಸ್‌ಮನ್ ತುಂಬಾ ವಿಷಾದದಿಂದ ತನ್ನ ಆಫೀಸಿಗೆ ಬರೆದನಂತೆ, ಈ ಹಳ್ಳಿಗಳಲ್ಲಿ ಒಬ್ಬನೂ ಷೂ ತೊಡುವವನಿಲ್ಲ ಆದಕಾರಣ ಇಲ್ಲಿ ನಮ್ಮ ಉತ್ಪನ್ನಕ್ಕೆ ಯಾವ ಪ್ರಯೋಜನವೂ ಇಲ್ಲ ಎಂದು. ಅದೇ ಎರಡನೆಯವನು ಖುಷಿಯಾಗಿ ತನ್ನ ಆಫೀಸಿಗೆ ತಿಳಿಸಿದ; ಅತ್ಯದ್ಭುತ! ಸಾವಿರಾರು ಜೊತೆ ಷೂಗಳನ್ನ ಮಾರಬಹುದಿಲ್ಲಿ. ಈ ಹಿಂದೆ ಇಲ್ಲಿ ಯಾರೂ ಅವುಗಳನ್ನ ಮಾರಿಲ್ಲ, ನಮ್ಮ ಷೂಗಳಿಗೆ ಅತಿ ಒಳ್ಳೆಯ ಮಾರ್ಕೆಟ್ ಇದು ಅಂದನಂತೆ.

ಕುಮಾರ್ ಹೇಳಿದ್ದು ಖಂಡಿತಾ ನಿಜ. ಸ್ಥಳೀಯ ಭಾಷೆಗಳಲ್ಲಿ ಸಾಫ್ಟ್‌ವೇರ್ ಇದ್ದಲ್ಲಿ ಅದನ್ನ ಕೊಳ್ಳುವುದಕ್ಕೂ ಜನರಿರುತ್ತಾರೆ. ಆದರೆ ನನ್ನ ಒಂದು ನಿರೀಕ್ಷೆ ಎಂದರೆ ಇವುಗಳನ್ನ ಸಾಧ್ಯವಾಗಿಸುವುದು. ಅದಕ್ಕೊಂದು ನಿರ್ದಿಷ್ಟ ಗುಣಮಟ್ಟ ರೂಪಿಸುವುದು, ಸಾರ್ವಜನಿಕ ಅಧಿಕಾರಿಗಳು ಸಂಸ್ಥೆಗಳಿಗೆ ಸಾಧ್ಯ. ಬೆಂಗಳೂರಿಗರಾಗಿದ್ದು ನಿಮಗೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಆ ರಾಜ್ಯದ ಎಲ್ಲ ಭೂ ದಾಖಲೆಗಳನ್ನ ಕಂಪ್ಯೂಟರೀಕರಿಸುವ ಯೋಜನೆ ಗೊತ್ತಿರುವಂಥದ್ದೇ. ಒಬ್ಬ ಆಂಧ್ರದ ರೈತನಿಗೆ ಆ ಕೆಲಸದ ಪ್ರಯೋಜನ ದೊರಕಬೇಕಿದ್ದಲ್ಲಿ ಇಂಗ್ಲಿಷ್‌ನಲ್ಲಿ ಇರುವುದಕ್ಕಿಂತಲೂ ಅದು ತೆಲುಗಿನಲ್ಲಿ ಇರಬೇಕು. ಮತ್ತೊಂದು ಉದಾಹರಣೆ ಗಮನಿಸುವ; ಮಹಾರಾಷ್ಟ್ರ ಸರ್ಕಾರ ತನ್ನ ರಾಜ್ಯದ ಎಲ್ಲ ಜಿಲ್ಲಾ ಕಛೇರಿಗಳ ಈಮೇಲ್ ವ್ಯವಸ್ಥೆಯನ್ನ ಏಕತ್ರಗೊಳಿಸಲು ಯೋಜಿಸಿ ಪ್ರಯತ್ನಿಸುತ್ತಿದೆ. ಈ ಕಾರ್ಯಯೋಜನೆಯ ಅಧಿಕಾರಿಯೊಬ್ಬರ ಹತ್ತಿರ ಮಾತಾಡುವ ಅವಕಾಶ ನನಗೆ ಒದಗಿಬಂದಿತ್ತು. ನಾನು ಈ ಯೋಜನೆ ಯಾವ ಭಾಷೆಯಲ್ಲಿರುತ್ತದೆ ಎಂದೆ. ಅವರು ಮರಾಠಿಯಲ್ಲೇ ಅಂದರು. ಮರಾಠಿ ಈಮೇಲ್ ಸಾಫ್ಟ್‌ವೇರ್ ಯಾವುದಾದರೂ ಇದೆಯೆ ಅದರ ಮೂಲಕ ಹತ್ತಾರು-ನೂರಾರು ಜಿಲ್ಲಾ ಕಛೇರಿಗಳ ಸಂಪರ್ಕ ಸಾಧ್ಯವಾಗುತ್ತದೆ ಎಂದೆ. CDAC ಅದನ್ನ ಪೂರೈಸುತ್ತದೆ ಎಂದರು, ಆದರೆ CDACಹೇಳಿದ್ದು ಅದರ ಸಾಫ್ಟ್‌ವೇರ್ ಇನ್ನೂ ಪೂರ್ಣ ಕಾರ್ಯಶೀಲವಾಗಿಲ್ಲ ಅಂತ.

ನಾನು ಆಗದೆ ಉಳಿದಿರುವ ಕೆಲಸಗಳ ಬಗ್ಗೆ ಹೇಳಲು ಹೊರಟಿಲ್ಲ. ಭಾರತದ ಪುರಾತನ ಮತ್ತು ಸಮೃದ್ಧವಾದ ಭಾಷೆಗಳಲ್ಲಿ ಸಾಫ್ಟ್‌ವೇರ್‌ಗಳನ್ನು ರೂಪಿಸುವ ಕೆಲಸ ಸಾಧ್ಯ ಆದರೆ ಈ ಕೆಲಸಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾತ್ರ ಒಂದು ನಿರ್ದಿಷ್ಟ ಮಾನದಂಡವನ್ನ ಗುಣಮಟ್ಟವನ್ನ ರೂಪಿಸಬಲ್ಲ ಅಧಿಕಾರ-ಕ್ಷಮತೆ ಮತ್ತು ಆರ್ಥಿಕ ಶಕ್ತಿ ಹೊಂದಿವೆ. ಫ್ರೆಂಚ್, ಜರ್ಮನಿ ಅಥವಾ ಸ್ಪ್ಯಾನಿಷ್ ಭಾಷೆಯ ಸ್ಥಳೀಕರಣಕ್ಕೆ ಹೋಲಿಸಿದರೆ ದಕ್ಷಿಣ ಏಷ್ಯಾ ಭಾಷೆಗಳ ಸಾಫ್ಟ್‌ವೇರ್ ಮತ್ತು ಅವುಗಳ ಏಕರೂಪಿ ಗುಣಮಟ್ಟಗಳನ್ನ ರೂಪಿಸುವುದು ಅಂಥಾ ದೊಡ್ಡ ತಾಂತ್ರಿಕ ಸವಾಲು ಅಥವಾ ಬಿಕ್ಕಟ್ಟಾಗಿ ನನಗೆ ಕಾಣುತ್ತಿಲ್ಲ. ಅದರಲ್ಲೂ ಫಿನ್ನಿಷ್‌ನಂಥಾ ಭಾಷೆಯೊಂದು ಸಾಫ್ಟ್‌ವೇರ್ ರೂಪಿಸುವವರ ಕೆಟ್ಟ ಕನಸಾಗಿ ಉಳಿದ ಹಾಗೇನೂ ಅಲ್ಲ. ಭಾರತೀಯ ಭಾಷೆಗಳು ಧ್ವನಿಬದ್ಧ (phonetic) ಅದರಲ್ಲೂ ಉತ್ತರದ ಭಾಷೆಗಳು ಒಂದೇ ಮೂಲದವು. ಪಾಣಿನಿಯ ನಂತರ ಭಾಷಿಕ ವ್ಯಾಕರಣ ಮತ್ತು ವ್ಯವಸ್ಥೆಗಳು ತುಂಬಾ ಮುಂದುವರೆದಂಥವು. ಸ್ಥಳೀಕರಣ ಅಥವಾ ಸ್ಥಳೀಯ ಭಾಷೆಗಳ ಸಾಫ್ಟ್‌ವೇರ್ ರೂಪಿಸುವಿಕೆ ಸಮಯ ಮತ್ತು ಹಣದ ಅಗತ್ಯವಿರುವ ಕೆಲಸವಾದರೂ ತೀರಾ ದೊಡ್ಡದಾದ ತಾಂತ್ರಿಕ ಸವಾಲಲ್ಲ. ಅದರಲ್ಲೂ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಮುಂತಾದ ರಾಜ್ಯಗಳಿಂದ ಆರಂಭಗೊಂಡು ಈ ಮಾಹಿತಿಯುಗದ ಪ್ರಯೋಜನ ಇಂಡಿಯಾದ ಎಲ್ಲ ಜನಗಳಿಗೂ ತಲುಪಲು ಸಾಧ್ಯ.

MITಯಲ್ಲಿನ ನನ್ನ ಒಬ್ಬ ಸಹೋದ್ಯೋಗಿ, ಮೈಖೇಲ್ ಡೆರ್‌ಟೋರಿಯಸ್, ಕಂಪ್ಯೂಟರ್ ವಿಜ್ಞಾನದ ಪ್ರಯೋಗಶಾಲೆಯ ನಿರ್ದೇಶಕ. ಆತ ಬರೆದ ಪುಸ್ತಕದ ಹೆಸರು 'What will be' ಅಂತ, ಮೈಖೆಲ್ ಮೂಲತಃ ತಂತ್ರಜ್ಞ, ಆತನ ಪ್ರಕಾರ ಈ ಮಾಹಿತಿಯುಗವು ಜನಗಳನ್ನ ಸಶಕ್ತಗೊಳಿಸುತ್ತದೆ. ಇದನ್ನ ಅವನು ಮತ್ತು ಅವನ ತಂಡದ ಸದಸ್ಯರು ಕಳೆದ ಮೂವತ್ತು ವರ್ಷಗಳ ಶೋಧನೆ ಶ್ರಮಗಳನ್ನ ಎದುರಿಗಿಟ್ಟುಕೊಂಡು ಹೇಳಬಲ್ಲರು. ಮೈಖೇಲ್ ನಂಬುವಂತೆ ಮಾಹಿತಿಯುಗದಿಂದ ಏನೇ ಉಪಯುಕ್ತತೆ ಇದ್ದರೂ (ಅನೇಕ ಉಪಯೋಗಗಳಿವೆ) ಮನುಷ್ಯಕುಲದ ಪರಂಪರಾನುಗತವಾಗಿ ಬಂದ ಸಮಸ್ಯೆಗಳು ಮಾತ್ರ ಹಾಗೆಯೇ ಉಳಿದಿರುತ್ತದೆ. ಉಳ್ಳವರ ಮತ್ತು ಇಲ್ಲದವರ ಮಧ್ಯದ ಅಂತರ, ರಾಜಕೀಯ ದಮನ ಮತ್ತು ಅನ್ಯಾಯಗಳು. ಹಸಿವು ಮತ್ತು ರೋಗ ರುಜಿನಗಳು ಮತ್ತು ಸಾಂಸ್ಕೃತಿಕ ಅಸಹನೆಗಳು ಇವು ಯಾವುವೂ ಮಾಹಿತಿಯುಗದ ಜೊತೆಗೆ ಅಗತ್ಯವಾದ ಸಂಪರ್ಕ ಸಂಬಂಧಗಳನ್ನ ಹೊಂದಿಲ್ಲದೇ ಹೋದರೂ ಇವುಗಳು ಅತಿ ಪ್ರಮುಖ ಸಮಸ್ಯೆಗಳಾಗಿ ಈ ಮಾಹಿತಿಯುಗದಲ್ಲಿ ನಿಲ್ಲಬಲ್ಲವು ಎನ್ನುತ್ತಾರೆ.

ಪ್ರತಿಯೊಂದು ಹೊಸಾ ಟೆಕ್ನಾಲಜಿಯೂ ಹಲವಾರು ಯುಟೋಪಿಯನ್ ನಿರೀಕ್ಷೆಗಳನ್ನ ಜಾಗೃತಗೊಳಿಸುತ್ತದೆ. ಹೊಸದಾಗಿ ಟೆಲಿಗ್ರಾಫ್ ಮತ್ತು ಟೆಲಿಫೋನುಗಳು ಬಂದಾಗ ಎಲ್ಲಾ ಅಂತರ ರಾಷ್ಟ್ರೀಯ ತಪ್ಪು ತಿಳುವಳಿಕೆಗಳನ್ನ ಮುನಿಸುಗಳನ್ನ ಬಗೆಹರಿಸಬಹುದು ಎಂದುಕೊಳ್ಳಲಾಗಿತ್ತು. ಬಹಳಷ್ಟು ಜನ ಸಾಧಿಸಿದ್ದು ಇಲೆಕ್ಟ್ರಿಸಿಟಿಯ ಮೂಲಕ ನಗರಗಳು ವಿಕೇಂದ್ರೀಕರಣಗೊಂಡು ಫ್ಯಾಕ್ಟರಿಗಳ ನಿರ್ಮೂಲನೆ ಮಾಡಿ ಸಣ್ಣ ಪ್ರಮಾಣದ ಹಳ್ಳಿ ಪ್ರದೇಶದ ಪಟ್ಟಣಗಳು ರೂಪುಗೊಳ್ಳುತ್ತವೆ ಅಂತ. ನ್ಯೂಕ್ಲಿಯರ್ ಯುಗದಲ್ಲಿ ಎಲೆಕ್ಟ್ರಿಸಿಟಿ ಮೀಟರ್‌ಗೆ ಅಳವಡಿಸಲಾರದಷ್ಟು ಕಡಿಮೆ ಬೆಲೆಯಲ್ಲಿ ಸಿಗುತ್ತದೆ ಎಂದರು. ನನ್ನ ಇನ್ನೊಬ್ಬ ಸಹೋದ್ಯೋಗಿ ಹೇಳುವ ಹಾಗೆ ಈ ಮಾಹಿತಿ ಯುಗದಲ್ಲಿ ನಾವು ಡಿಜಿಟಲ್ ಆಗುವುದು ('Being Degital) ಉತ್ತಮ ಅಂತ.

ಡೆರ್‌ಟೋರಿಯಸ್‌ನ ಎಚ್ಚರಿಕೆ ಸಂಸ್ಕೃತಿಯ ವಿಷಯದಲ್ಲಿ ಸರಿಯಾಗಿ ಗ್ರಹಿಸಲ್ಪಟ್ಟಿದೆ. ಟೆಕ್ನಾಲಜಿ

ಎನ್ನುವುದು ಯಾವ ಸಾಮಾಜಿಕ ಅಥವಾ ಸಾಂಸ್ಕೃತಿಕ ಪರಿಣಾಮಗಳನ್ನೂ ಉಂಟುಮಾಡುವುದಿಲ್ಲ. ಅವುಗಳನ್ನು ನಾವು ಹೇಗೆ ಬಳಸುತ್ತೇವೆ. ಅವುಗಳನ್ನ ಹೇಗೆ ಪರಿಕಲ್ಪಿಸಿಕೊಂಡು ಆಕಾರಕ್ಕೆ ರೂಪಿಸಿಕೊಂಡು ನಮ್ಮಗಳ ಮಾನವೀಯ ಸಾಮಾಜಿಕ ಮತ್ತು ರಾಜಕೀಯ ಸಾಂಸ್ಕೃತಿಕ ಇಚ್ಛಾಶಕ್ತಿ ಮತ್ತು ನಿರ್ಧಾರಗಳಿಗೆ ಬಿಟ್ಟ ವಿಷಯವಾಗಿದೆ. ನಮ್ಮ ಈಗಿನ ಆರ್ಥಿಕ ಉದಾರೀಕರಣ ಮತ್ತು ಮಾರುಕಟ್ಟೆಯ ಸಿಹಿಸಿಹಿ ಮಾತುಗಳನ್ನೇ ನಾವುಗಳು ನಂಬಿ ಕೂರಲು ಸಾಧ್ಯವಿಲ್ಲ. ಕಾರ್ಪೊರೇಟ್ ಜಗತ್ತಿನ ಮುಂದಾಳುಗಳು ಅದರಲ್ಲೂ ಸಂಸ್ಕೃತಿಯ ಜೀವಂತಿಕೆ ಮತ್ತು ಸುಸ್ಥಿತಿಯ ಬಗ್ಗೆ ಒಂದು ದೃಷ್ಟಿ ಮತ್ತು ಬದ್ಧತೆ ಇರುವವರು ಇವುಗಳಲ್ಲಿ ಪ್ರವೇಶಿಸಬೇಕಾಗುತ್ತದೆ. ಅದರಲ್ಲೂ ರಾಜಕೀಯ ನಾಯಕರು ಇವರುಗಳನ್ನ ಒಟ್ಟುಗೂಡಿಸಿಕೊಂಡು ಈ ಮಾಹಿತಿಯುಗಕ್ಕೆ ದೂರವಾದ ಗುರಿಗಳಾದ ಬಡತನ ನಿರ್ಮೂಲನೆಯ ಬಗ್ಗೆ, ಶಿಕ್ಷಣದ ಸಾರ್ವತ್ರೀಕರಣದ ಬಗ್ಗೆ, ರಾಜಕೀಯ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಹಾಗೂ ಸಾಂಸ್ಕೃತಿಕ ವೈವಿಧ್ಯತೆಗಳನ್ನ ಉಳಿಸುವ ಮತ್ತು ಬೆಳೆಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಿದೆ. ■

"The Global Village" ಎಂಬ ವಿಚಾರ ಸಂಕಿರಣ 1998ರ ನವೆಂಬರ್ 2ರಂದು ಬೆಂಗಳೂರಿನಲ್ಲಿ ನಡೆದಿತ್ತು. ಅದರಲ್ಲಿ ಮಂಡಿಸಿದ ಪ್ರಬಂಧದ ಕನ್ನಡ ಅನುವಾದ.




ಕನ್ನಡ ಲಿಪಿತತ್ತ್ವಾಂಶಗಳ ಏಕರೂಪತೆ ಮತ್ತು ಶಿಷ್ಟತೆ

ಟಿ. ವೀ. ಶ್ರೀನಾಥಶಾಸ್ತ್ರಿ

ಮಾಹಿತಿ ತಂತ್ರಜ್ಞಾನದ ಬೆಳವಣಿಗೆ ಹಾಗೂ ಅದರ ಅಳವಡಿಕೆ ಶೀಘ್ರಗತಿಯಲ್ಲಿ ಸಾಗುತ್ತಿದ್ದಂತೆ ಇದರಿಂದ ಉಂಟಾಗುವ ಪರಿಣಾಮಗಳನ್ನು ಕುರಿತು ಆರಂಭದಲ್ಲಿ ಮೂಡಿದ ಅನುಮಾನ ಆತಂಕಗಳು ಕ್ರಮೇಣ ಕಡಿಮೆಯಾಗುತ್ತಿವೆ. ಎಲ್ಲ ರೀತಿಯ ವಿಜ್ಞಾನ ತಂತ್ರಜ್ಞಾನಗಳ ಅವಳಡಿಕೆಗಳ ಸಂದರ್ಭಗಳಲ್ಲೂ ಇದೇ ರೀತಿಯ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ. ಆದರೆ ಎಲ್ಲರಿಗೂ ಸುಲಭವಾಗಿ ನಿಲುಕುವ, ಸಾರ್ವತ್ರಿಕವಾಗಿ ಬಳಕೆಯಾಗಬಲ್ಲ, ಬುದ್ಧಿಗೆ ಸವಾಲುಗಳನ್ನು ಒಡ್ಡಬಲ್ಲ, ತಾರ್ಕಿಕ ಆಲೋಚನೆಗಳು ಮತ್ತು ಚಿಂತನೆಗಳಿಗೆ ಬಹು ಚೆನ್ನಾಗಿ ಸ್ಪಂದಿಸಬಲ್ಲ, ಭಾಷೆಯ ಕಟ್ಟಿಲ್ಲದ, ಮುಖ್ಯವಾಗಿ ನಮ್ಮದೇ ಆಗಬಲ್ಲ ಮಾಹಿತಿ ತಂತ್ರಜ್ಞಾನವು ಈ ಶತಮಾನದ ಜನಜೀವನದಲ್ಲಿ ಹಾಸುಹೊಕ್ಕಾಗುವುದರಲ್ಲಿ ಸಂಶಯವಿಲ್ಲ. ಜಗತ್ತಿನ ಈಚಿನ ವಿದ್ಯಮಾನಗಳನ್ನು ಗಮನಿಸಿದರೆ ಮಾಹಿತಿ ತಂತ್ರಜ್ಞಾನವನ್ನು ನಮಗಾಗಿಯೇ ಮತ್ತು ನಮ್ಮದಾಗಿಯೆ ಇರುವಂತೆ ಪಳಗಿಸಿಕೊಳ್ಳಬೇಕಾದ ಅಗತ್ಯ ಕಂಡುಬರುತ್ತದೆ. ಮಾಹಿತಿ ತಂತ್ರಜ್ಞಾನದ ಕ್ರಿಯೆ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಯುವಜನರು ಆರ್ಥಿಕ ಲಾಭದ ಆಕರ್ಷಣೆಗಳಿಗೆ ಒಳಗಾಗಿದ್ದರೂ ಅದಕ್ಕಿಂತ ಮಿಗಿಲಾಗಿ ಮಾಹಿತಿ ತಂತ್ರಜ್ಞಾನದ ಹಾದಿಯಲ್ಲಿನ ಬೌದ್ಧಿಕ ಕಸರತ್ತುಗಳಲ್ಲಿ ಅತಿ ಹೆಚ್ಚಿನ ಆನಂದ, ತೃಪ್ತಿಗಳನ್ನು ಅನುಭವಿಸುತ್ತಿದ್ದಾರೆಂದು ಹೇಳಬಹುದಾಗಿದೆ. ಏನೇ ಆದರೂ ಜನರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿರುವ, ಎಲ್ಲ ರೀತಿಯ ವ್ಯವಹಾರ ಗಳಿಗೂ ಉಪಯುಕ್ತವಾದ ಮಾಹಿತಿ ತಂತ್ರಜ್ಞಾನವನ್ನು ನಾವು ಕಡೆಗಣಿಸು ವಂತಿಲ್ಲ. ಅದನ್ನು ಬರಮಾಡಿಕೊಳ್ಳುವುದರಲ್ಲೇ ನಮ್ಮ ಜಾಣತನ ಅಡಗಿದೆ. ಹೀಗೆ ಸರ್ವವ್ಯಾಪಿಯಾಗುತ್ತಿರುವ ಮಾಹಿತಿ ತಂತ್ರಜ್ಞಾನದಲ್ಲಿ ನಮ್ಮ ಭಾಷೆಯ ಸಮರ್ಥ ಬಳಕೆ ಅನಿವಾರ್ಯವೂ ಅತ್ಯಗತ್ಯವೂ ಆಗಿದೆ.

ಗಣಕವು ಕೇವಲ ಒಂದು ಯಂತ್ರ. ಅದರ ಭಾಷೆ ಕೇವಲ ಎರಡು ಸಂಕೇತಗಳಿಂದ ಮಾತ್ರ ಕೂಡಿದೆ. ಗಣಕದ ಪರದೆಯ ಮೇಲೆ ಮೂಡುವ ಅಕ್ಷರಗಳು, ಚಿಹ್ನೆಗಳು ಮುಂತಾದ ಎಲ್ಲ ದೃಕ್ ವಸ್ತುಗಳೂ ಕೇವಲ ಚಿತ್ರಗಳು ಮಾತ್ರ. ಪ್ರತಿಯೊಂದು ಚಿತ್ರಕ್ಕೂ ಸಂಪ ಎಯಾಗಿ ಒಂದು ಸಂಕೇತ ಸರಣಿಯನ್ನು ನಿಗದಿಗೊಳಿಸಲಾಗಿರುತ್ತದೆ. ಇವುಗಳು ಗಣಕದ ಸ್ಮರಣಕೋಶಗಳಲ್ಲಿ ಶೇಖರವಾಗುತ್ತವೆ. ಆದ್ದರಿಂದಲೇ ಯಾವುದೇ ಭಾಷೆಯ ಲಿಪಿಗಳಾಗಲೀ ಅವುಗಳಿಗೆ ಸಂವಾದಿಯಾಗಿ ಸಂಕೇತ ಸರಣಿಗಳನ್ನು



ನಿರ್ದಿಷ್ಟಗೊಳಿಸಿದರೆ ಸಾಕು. ಆಗ ಗಣಕ ಸ್ಮರಣಕೋಶಗಳಲ್ಲಿ ಶೇಖರಗೊಂಡಿರುವ ಸಂಕೇತಗಳಿಗೆ ಸಂವಾದಿಯಾದ ಅಕ್ಷರಗಳು ಗಣಕದ ಪ್ರದರ್ಶಕ ತೆರೆಯ ಮೇಲೆ ಮೂಡುತ್ತವೆ ಅಥವಾ ಕಾಗದದ ಮೇಲೆ ಮುದ್ರಿತವಾಗುತ್ತವೆ. ಒಟ್ಟಿನಲ್ಲಿ ಗಣಕಗಳಲ್ಲಿ ಇಂಗ್ಲಿಷ್‌ನಷ್ಟೇ ಸರಾಗವಾಗಿ ಹಾಗೂ ಸುಲಲಿತವಾಗಿ ಇತರ ಯಾವುದೇ ಭಾಷೆಯನ್ನಾದರೂ ಬಳಸಲು ಸಾಧ್ಯ.

ಆದರೆ, ಗಣಕದ ಚಾಲನೆಗೆ ಕಾರಣವಾಗುವ ಹಾಗೂ ಗಣಕದ ಮೂಲಕ ನಡೆಯುವ ಎಲ್ಲ ಕ್ರಿಯೆಗಳ ಮೇಲೆ ಹಿಡಿತ ಹೊಂದಿರುವ ಗಣಕ ಕಾರ್ಯಾಚರಣ ವ್ಯವಸ್ಥೆಗಳು (ಡಾಸ್, ವಿಂಡೋಸ್, ಲಿನಕ್ಸ್ ಇತ್ಯಾದಿ) ಭಾರತೀಯ ಭಾಷಾ ಲಿಪಿಗಳನ್ನು ನೀಡದಿರುವುದೇ ಗಣಕಗಳಲ್ಲಿ ನಮ್ಮ ಭಾಷೆಗಳು ಪರಿಣಾಮಕಾರಿಯಾಗಿ ಬಳಕೆ ಆಗದಿರುವುದಕ್ಕೆ ಮೂಲ ಕಾರಣ. ಈ ಕೊರತೆಯನ್ನು ನೀಗಿಸುವ ದಿಕ್ಕಿನಲ್ಲಿ ಭಾರತದ ಹಲವಾರು ಖಾಸಗಿ ಕಂಪನಿಗಳು ವಹಿಸಿದ ಆಸಕ್ತಿಯ ಪರಿಣಾಮವಾಗಿ ಕಳೆದ ಸುಮಾರು ಹದಿನೈದು ವರ್ಷಗಳ ಹಿಂದಿನಿಂದಲೇ ಗಣಕಗಳಲ್ಲಿ ಭಾರತೀಯ ಭಾಷಾಲಿಪಿಗಳು ಮೂಡಲಾರಂಭಿಸಿದವು. ಇಂತಹ ಸುಮಾರು 8 ರಿಂದ 10 ಸಂಸ್ಥೆಗಳು ಈ ಕಾರ್ಯದಲ್ಲಿ ತೊಡಗಿಕೊಂಡು ಯಶಸ್ವಿಯಾದವು.

ಪ್ರಕಾಶನ ಕ್ಷೇತ್ರಕ್ಕೆ ಇದೊಂದು ವರದಾನವಾಯಿತು; ಮುದ್ರಣಾಲಯಗಳಲ್ಲಿ ಗಣಕಗಳು ವಿಜೃಂಭಿಸಲಾರಂಭಿಸಿದವು. ಪತ್ರಿಕೆಗಳು ಹಾಗೂ ಪುಸ್ತಕಗಳ ಪ್ರಕಟನೆಯಲ್ಲಿ ಉಂಟಾದ ಈ ಸ್ವಾಗತಾರ್ಹ ಬೆಳವಣಿಗೆಗಳಿಂದ ಉತ್ತೇಜಿತರಾದ ಈ ಲಿಪಿತಂತ್ರಾಂಶ ತಯಾರಕರು 'ಡಿಟಿಪಿ' ಮುದ್ರಣಕ್ಕಾಗಿ ಅತ್ಯಾಕರ್ಷಕ ಅಕ್ಷರ ಶೈಲಿಗಳನ್ನು ರೂಪಿಸಿಕೊಡಲಾರಂಭಿಸಿದರು. ಭಾರತೀಯ ಭಾಷೆಗಳಿಗೆ ಈ ಸಂಸ್ಥೆಗಳ ಕೊಡುಗೆ ಅನನ್ಯವಾದುದು. ಈ ಮಟ್ಟಿಗೆ ಇತರ ಭಾಷೆಗಳಂತೆ ಕನ್ನಡವೂ ಗಣಕಗಳಲ್ಲಿ ಯಶಸ್ವಿಯಾಗಿ ಬಳಕೆಯಾಗಲಾರಂಭಿಸಿತು.

ಆದರೆ ಇಲ್ಲಿಂದಲೇ ಸಮಸ್ಯೆಯ ಆರಂಭ. ಒಂದು ಲಿಪಿ ತಂತ್ರಾಂಶವನ್ನು ಬಳಸಿ ಸಿದ್ಧಪಡಿಸಿದ ಮಾಹಿತಿಗಳನ್ನು ಇನ್ನೊಂದು ಲಿಪಿ ತಂತ್ರಾಂಶದ ಮೂಲಕ ಬಳಸಲು ಸಾಧ್ಯವಾಗಿಲ್ಲದಿರುವುದೇ ಈ ಸಮಸ್ಯೆಯ ಮೂಲ. ಇದನ್ನು ಕೆಳಕಂಡಂತೆ ಅರ್ಥೈಸಿಕೊಳ್ಳಬಹುದು.

ವಿದ್ಯುತ್ ದೀಪಗಳನ್ನು ಅಳವಡಿಸಲು ನಾವು ಬಳಸುವ ಹೋಲ್ಡರುಗಳನ್ನೂ, ವಿವಿಧ ವಿದ್ಯುತ್ ಸಂಪರ್ಕಗಳಿಗೆಂದು ಎರಡು, ಮೂರು ಅಥವಾ ಐದು ರಂಧ್ರಗಳಿರುವ ಹೋಲ್ಡರುಗಳನ್ನೂ ಗಮನಿಸಿ. ಇವುಗಳ ಒಳ ಅಳತೆ ಮತ್ತು ದೀಪಗಳು ಅಥವಾ ಪ್ಲಗ್‌ಗಳನ್ನು ಹಿಡಿದಿಟ್ಟುಕೊಳ್ಳುವ ತಾಂತ್ರಿಕತೆ ಒಂದೇ ಆಗಿರುತ್ತದೆ. ಇದೇ ಅಳತೆ ಮತ್ತು ಯಾಂತ್ರಿಕತೆಯನ್ನು ಇವುಗಳನ್ನು ತಯಾರಿಸುವ ಎಲ್ಲ ಕಂಪನಿಗಳೂ ಅನುಸರಿಸುತ್ತವೆ. ನೀವು ಯಾವುದೇ ಕಂಪನಿಯಿಂದಾದರೂ ವಿದ್ಯುದ್ದೀಪಗಳನ್ನಾಗಲೀ, ಪ್ಲಗ್‌ಗಳನ್ನಾಗಲೀ ಹೋಲ್ಡರುಗಳನ್ನಾಗಲೀ ಪ್ರತ್ಯೇಕವಾಗಿಯೇ ತರಬಹುದು. ಅವುಗಳ ಪರಸ್ಪರ ಅಳವಡಿಕೆ ಸುಗಮ ಹಾಗೂ ಸುಲಲಿತ.

ಗಣಕಗಳಲ್ಲಿ ಕನ್ನಡವನ್ನು ಬಳಸುವಾಗಲೂ ಈ ರೀತಿಯ ಸುಗಮ ಪರಿಸ್ಥಿತಿ ನಿರ್ಮಾಣವಾಗಬೇಕು. ಈಗಿನ ಸಂದರ್ಭದಲ್ಲಿ ಒಂದು ಲಿಪಿ ತಂತ್ರಾಂಶವನ್ನು ಬಳಸಿ ಹತ್ತಾರು ಪುಟಗಳಷ್ಟು ಮಾಹಿತಿಗಳನ್ನು ಕೀಲಿಸಿ ಅನಿವಾರ್ಯವಾಗಿ ಬೇರೆ ಲಿಪಿ ತಂತ್ರಾಂಶವಿರುವ ಗಣಕದಲ್ಲಿ ಕಾರ್ಯವನ್ನು ಮುಂದುವರೆಸಲು ಯತ್ನಿಸಿದರೆ ನಿರಾಶೆ ಕಾಯ್ದಿಟ್ಟಬುತ್ತಿ; ಎಲ್ಲ ಮಾಹಿತಿಗಳನ್ನೂ ಮತ್ತೊಮ್ಮೆ ಕೀಲಿಸಬೇಕಾದ ದುಃಸ್ಥಿತಿ; ಹಲವಾರು ಲಿಪಿ ತಂತ್ರಾಂಶಗಳು (ಆಕೃತಿ, ಸುರಭಿ, ಶ್ರೀಲಿಪಿ, ಕೈರಳಿ, ಪ್ರಕಾಶಕ್, ಬರಹ, ಐಲೀಪ್,

ವಿನ್‌ಕೀ ಇತ್ಯಾದಿ) ಬಳಕೆಗೆ ಬಂದಾಗಿನಿಂದ ಬಳಕೆದಾರರು ಎದುರಿಸುತ್ತಿರುವ, ಅನಿವಾರ್ಯ ಎಂದು ನಂಬಿರುವ ವಿಚಿತ್ರ ಪರಿಸ್ಥಿತಿ; ಇದರಿಂದ ಅಪಾರ ಸಮಯ, ಶ್ರಮ, ಧನ ಮುಂತಾದವುಗಳ ಅನವಶ್ಯಕ ವ್ಯಯ; ಗಣಕಗಳಲ್ಲಿ ಕನ್ನಡ ಪರಿಣಾಮಕಾರಿ ಬಳಕೆಗೆ ಮಾರಕ.

ವಾಸ್ತವವಾಗಿ ಈ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಬಹುದು. ಕನ್ನಡ ಲಿಪಿಯನ್ನು ನೀಡಬಲ್ಲ ಈ ವಿವಿಧ ತಂತ್ರಾಂಶಗಳು ಕನ್ನಡ ಅಕ್ಷರಗಳಿಗೆ ಆಂತರಿಕವಾಗಿ ವಿವಿಧ ಸಂಕೇತಗಳನ್ನು ಬಳಸುತ್ತಿರುವುದೇ ಈ ಗೊಂದಲ, ಗೋಜಲುಗಳಿಗೆ ಬಹುಮುಖ್ಯ ಕಾರಣ. ಎಲ್ಲ ತಂತ್ರಾಂಶಗಳಲ್ಲೂ ಕನ್ನಡ ಅಕ್ಷರಗಳಿಗೆ ಸಮಾನ ಸಂಕೇತಗಳನ್ನು ಬಳಸುವುದೇ ತಂತ್ರಾಂಶಗಳ ತಯಾರಿಕೆಯಲ್ಲಿನ ಪ್ರಾಥಮಿಕ ಅಗತ್ಯವಾಗಬೇಕು. ಕನ್ನಡ ತಂತ್ರಾಂಶ ತಯಾರಕರು. ಈ ಶಿಸ್ತನ್ನು ಕಡ್ಡಾಯವಾಗಿ ಅನುಸರಿಸಬೇಕು. ಆದರೆ ತಂತ್ರಾಂಶಗಳು ಬಳಸಬೇಕಾದ ಸಮಾನ ಅಕ್ಷರ ಭಾಗಗಳನ್ನೂ ಅವುಗಳಿಗೆ ಸಂಕೇತಗಳನ್ನೂ ನಿರ್ದಿಷ್ಟ ಗೊಳಿಸುವವರು ಯಾರು?

ಈ ಸಮಸ್ಯೆಗಳನ್ನು ಗುರುತಿಸಿ ಪರಿಹಾರೋಪಾಯಗಳನ್ನು ಕಂಡುಕೊಂಡ ಹೆಗ್ಗಳಿಕೆ ಕನ್ನಡ ಗಣಕ ಪರಿಷತ್ತಿಗೆ ಸಲ್ಲುತ್ತದೆ. ಲಿಪಿ ತಂತ್ರಾಂಶಗಳ ತಯಾರಕರು ತಾವಾಗಿಯೇ ಈ ಏಕರೂಪತೆ ಅಥವಾ ಸಮಾನತೆಯ ಹಾದಿಯಲ್ಲಿ ಸಾಗುತ್ತಾರೆಂದು ನಿರೀಕ್ಷಿಸಲು ಅಸಾಧ್ಯ. ಈ ಕಗ್ಗಂಟನ್ನು ಬಿಡಿಸುವುದು ಹೇಗೆ? ಈ ಸಂದರ್ಭದಲ್ಲಿ ಸರ್ಕಾರದ ಪಾತ್ರ ಬಹುಮುಖ್ಯವಾಗುತ್ತದೆ. ಕರ್ನಾಟಕ ಸರ್ಕಾರದ ಅಧಿಕೃತ ಆಡಳಿತ ಭಾಷೆ ಕನ್ನಡ. ಗಣಕೀಕರಣವಾದಾಗಲೂ ಇದೇ ಪರಿಸ್ಥಿತಿ. ಆದ್ದರಿಂದ ಈ ಎಲ್ಲ ತಂತ್ರಾಶಗಳಿಗೂ ಅತಿ ದೊಡ್ಡ ಗ್ರಾಹಕ ಎಂದರೆ ಸರ್ಕಾರ. ಹೀಗಾಗಿ ಸರ್ಕಾರವೇ ಈ ಶಿಷ್ಟತೆ, ಸಮಾನತೆಗಳನ್ನು ನಿಶ್ಚಯಿಸಿ ತಂತ್ರಾಂಶ ತಯಾರಕರಿಗೆ ಸೂಕ್ತ ಸೂಚನೆಗಳನ್ನು ನೀಡಬೇಕು.

ಈ ಬಹು ಮೂಲ್ಯ ವಿಚಾರಗಳನ್ನು ಸರ್ಕಾರದ ವಿವಿಧ ಹಂತಗಳಲ್ಲಿನ ಅಧಿಕಾರಿಗಳಿಗೆ ಮನದಟ್ಟು ಮಾಡಿಕೊಡುವ ಕಾರ್ಯವನ್ನು ಕನ್ನಡ ಗಣಕ ಪರಿಷತ್ತು ಕೈಗೆತ್ತಿಕೊಂಡಿತು; ಮೂರು ವರ್ಷಗಳ ಸತತ ಪರಿಶ್ರಮದ ನಂತರ ಯಶಸ್ಸನ್ನೂ ಕಂಡಿತು. ಕನ್ನಡ ಲಿಪಿ ತಂತ್ರಾಂಶಗಳಿಗೆ ಇರಬೇಕಾದ ಈ ಆಂತರಿಕ ಶಿಷ್ಟತೆಯ ಅಗತ್ಯವನ್ನು ಮನಗಂಡ ಕರ್ನಾಟಕ ಸರ್ಕಾರವು ಕನ್ನಡ ಗಣಕ ಪರಿಷತ್ತಿನ ಸಲಹೆಯಂತೆ ಕನ್ನಡ ತಂತ್ರಾಂಶಗಳಿಗೆ ಶಿಷ್ಟತೆ ಮತ್ತು ಏಕರೂಪತೆಗಳನ್ನು ನಿಶ್ಚಯಿಸಲು ಕನ್ನಡ ಗಣಕ ಪರಿಷತ್ತಿನ ಸದಸ್ಯರನ್ನು ಒಳಗೊಂಡ ಒಂದು ತಾಂತ್ರಿಕ ಸಮಿತಿಯನ್ನು (ಕಳೆದ ವರ್ಷ ಮೇ ತಿಂಗಳಲ್ಲಿ) ನೇಮಿಸಿತು. ಸೆಪ್ಟೆಂಬರ್‌ನಲ್ಲಿ ಸಮಿತಿಯ ನೀಡಿದ ವರದಿ ಹಾಗೂ ಶಿಫಾರಸುಗಳನ್ನು ಒಪ್ಪಿಗೊಂಡ ಸರ್ಕಾರವು ಅವುಗಳನ್ನು ಇತ್ತೀಚೆಗೆ ಕಡ್ಡಾಯಗೊಳಿಸಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳು ಸಕ್ರಿಯವಾಗಿ ತೊ[illegible] ಕಾರ್ಯದ ಯಶಸ್ಸಿಗೆ ಸಹಕರಿಸಿದವು. ಈ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆಯನ್ನು ಮನಗಂಡ ಕನ್ನಡ ಲಿಪಿತಂತ್ರಾಂಶ ತಯಾರಕರು ನಿಧಾನವಾಗಿಯಾದರೂ ಶಿಷ್ಟತೆಗಳನ್ನು ಒಳಗೊಂಡ ಲಿಪಿ ತಂತ್ರಾಂಶಗಳ ಸುಧಾರಿತ ಆವೃತ್ತಿಗಳನ್ನು ಸಿದ್ಧಪಡಿಸಲು ಆರಂಭಿಸಿದ್ದಾರೆ. ಇದೆ[illegible]ಮು ಪ್ರಮುಖ ಬೆಳವಣಿಗೆ. ಈ ಪ್ರಕ್ರಿಯೆಯು ಪೂರ್ಣಗೊಂಡರೆ ವಿವಿಧ ತಂತ್ರಾಂಶಗಳ ನಡುವೆ ಮಾಹಿತಿ ಸಂವಹನದ ಸಮಸ್ಯೆ ಇಲ್ಲವಾಗುತ್ತದೆ; ಬಳಕೆದಾರರು ಯಾವುದೇ ಲಿಪಿತಂತ್ರಾಂಶವನ್ನು ಬಳಸಬಹುದು; ಅಗತ್ಯವೆನಿಸಿದಾಗ ಬದಲಿಸಬಹುದು; ಯಾರಿಂದ ಯಾರಿಗಾದರೂ ಮಾಹಿತಿಗಳನ್ನು ಫ್ಲಾಪಿಗಳ,

ಅಂತರ್ಜಾಲದ ಅಥವಾ ಎ-ಅಂಚೆ ಮೂಲಕ ರವಾನಿಸಬಹುದು. ಲೇಖಕರು ಕೀಲಿಸಿ ಕಳುಹಿಸಿದ ಲೇಖನಗಳನ್ನು ಪತ್ರಿಕೆಯವರು ಮತ್ತೆ ಕೀಲಿಸಬೇಕಾದ ಶ್ರಮ ಇರುವುದಿಲ್ಲ. ಎಲ್ಲವೂ ಸಲೀಸು.

ತಂತ್ರಾಂಶಗಳ ಶಿಷ್ಟತೆ, ಸಮಾನತೆಗಳಿಗೆ ಇನ್ನೊಂದು ಮುಖವೂ ಇದೆ. ಅದೇ ಕೀಲಿಮಣೆ ವಿನ್ಯಾಸ. ಗಣಕಗಳಲ್ಲಿ ಎಲ್ಲ ಕಾರ್ಯಗಳೂ ತಂತ್ರಾಂಶಗಳ ಮೂಲಕವೇ ನಡೆಯುತ್ತವೆ. ಅಂತೆಯೇ ಕೀಲಿಮಣೆಯ ಯಾವ ಕೀಲಿಯು ಯಾವ ಅಕ್ಷರವನ್ನು ನೀಡಬೇಕು ಎಂಬುದನ್ನು ತಂತ್ರಾಂಶದಲ್ಲಿ ಗೊತ್ತು ಪಡಿಸಿರುತ್ತಾರೆ. ತಂತ್ರಾಂಶವನ್ನು ಬೇಕೆಂದಂತೆ ಬದಲಿಸಿ ಕೀಲಿ-ಅಕ್ಷರಗಳ ಜೋಡಿ ಸಂಬಂಧವನ್ನು ಸುಲಭವಾಗಿ ಬದಲಿಸಬಹುದು. ತಂತ್ರಾಂಶ ತಯಾರಕರು ಈ ಸ್ವಾತಂತ್ರ್ಯ ಬಳಸಿಕೊಂಡರೆ ಸಾಮಾನ್ಯ ಬಳಕೆದಾರರಿಗೆ ಅನವಶ್ಯಕ ಶ್ರಮ ಹಾಗೂ ಗೊಂದಲ. ಆದ್ದರಿಂದಲೇ ಇಂಗ್ಲೀಷ್ ಅಕ್ಷರಗಳಿಗೂ, ಕೀಲಿಮಣೆಯ ಕೀಲಿಗಳಿಗೂ ನಿಶ್ಚಯಿಸಲ್ಪಟ್ಟಿರುವ ಜೋಡಿ ಸಂಬಂಧವನ್ನು ನಿಶ್ಚಿತಗೊಳಿಸಲಾಗಿದೆ; ಇದನ್ನು ಎಲ್ಲರೂ ಶಿಸ್ತಿನಿಂದ ಪಾಲಿಸುತ್ತಾರೆ; ಬದಲಿಸುವ ದುಃಸ್ಸಾಹಸಕ್ಕೆ ಯಾವುದೇ ತಂತ್ರಾಂಶ ತಯಾರಕರೂ ಪ್ರಯತ್ನಿಸುವುದಿಲ್ಲ. ಇದು ವಿಶ್ವಾದ್ಯಂತ ಪ್ರಚಲಿತ, ಶಾಶ್ವತ. ಭಾರತೀಯ ಭಾಷೆಗಳ ಸಂದರ್ಭದಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗಬೇಕು. ದುರದೃಷ್ಟವಶಾತ್, ಈ ವಿಚಾದಲ್ಲೂ ಗೊಂದಲದ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಲಿಪಿ ತಂತ್ರಾಂಶಗಳು ಯಾವ ಕೀಲಿಗೆ ಯಾವ ಕನ್ನಡ ಅಕ್ಷರ ಎಂಬ ವಿಚಾರವೇ ಅಲ್ಲದೆ ಗುಣಿತಾಕ್ಷರಗಳು ಮತ್ತು ಸಂಯುಕ್ತಾಕ್ಷರಗಳನ್ನು ಪಡೆಯುವಲ್ಲೂ ನಿಶ್ಚಿತ ವಿಧಾನಗಳನ್ನು ಅನುಸರಿಸುತ್ತಿಲ್ಲ. ಒಂದು ವಿನ್ಯಾಸವನ್ನು ಬಳಸುವ ಗ್ರಾಹಕರು ಮತ್ತೊಂದು ಲಿಪಿ ತಂತ್ರಾಂಶವನ್ನು ಬಳಸುವಾಗ ಬದಲಾದ ವಿನ್ಯಾಸದಿಂದ ತೊಂದರೆಗೆ ಒಳಗಾಗುತ್ತಿದ್ದಾರೆ. ಈ ವಿನ್ಯಾಸಗಳನ್ನು ರೂಪಿಸುವಾಗ ಭಾರತೀಯ ಭಾಷೆಗಳ ವೈಜ್ಞಾನಿಕತೆ, ಧ್ವನ್ಯಾತ್ಮಕತೆಗಳ ಬಳಕೆ ಕಂಡುಬರುವುದಿಲ್ಲ; ಗಣಕಗಳೊಡನೆ ಇರುವ ಕೀಲಿಮಣೆಗಳ ಕೀಲಿಗಳ ಲಾಭದಾಯಕ ಬಳಕೆಯ ದೃಷ್ಟಿ ಇಲ್ಲ. ಈ ವಿಚಾರಗಳನ್ನು ಮನಗಂಡ ಕನ್ನಡ ಗಣಕ ಪರಿಷತ್ತು ಆದ್ಯಂತವಾಗಿ ನಡೆಸಿದ ತೀವ್ರ ಪರಿಶೀಲನೆಗಳಿಂದ ಕೆಳಕಂಡಂತೆ ತೀರ್ಮಾನಿಸಲಾಯಿತು.

1. ಕೀಲಿಮಣೆಯ ಕೀಲಿಗಳ ಮೇಲೆ ಪ್ರಸ್ತುತ ಬಳಕೆಯಲ್ಲಿರುವ ಕನ್ನಡದ ಅಕ್ಷರಮಾಲೆಯ ಅಕ್ಷರಗಳನ್ನು ಮಾತ್ರ ಮೂಡಿಸಿದರೆ ಸಾಕು.
2. ಗುಣಿತಾಕ್ಷರಗಳನ್ನು ಮೂಡಿಸಲು ವ್ಯಂಜನ-ಸ್ವರಗಳನ್ನು ಕುರಿತ ಕನ್ನಡ ಭಾಷೆಯ ಮೂಲಭೂತ ಗುಣವನ್ನು ಅನುಸರಿಸಬೇಕು.
3. ಸಂಯುಕ್ತಾಕ್ಷರಗಳನ್ನು ಮೂಡಿಸಲು ಕನ್ನಡ ಭಾಷೆಯ ಧ್ವನ್ಯಾತ್ಮಕ ವಿಧಾನವನ್ನು ಅನುಸರಿಸಬೇಕು.
4. ಇಂಗ್ಲಿಷ್ ಅಕ್ಷರಗಳಿಗೆಂದು ನಿಶ್ಚಿತವಾಗಿರುವ 26 ಕೀಲಿಗಳನ್ನು ಮಾತ್ರ ಕನ್ನಡಕ್ಕೆ ಬಳಸಿಕೊಳ್ಳಬೇಕು.
5. ಕನ್ನಡ ಅಕ್ಷರಗಳಿಗಾಗಿ, ಸಾಧ್ಯವಾದಷ್ಟೂ ಅವುಗಳ ಉಚ್ಚಾರಣೆಗಳನ್ನು ಹೊಂದಿರುವ ಇಂಗ್ಲಿಷ್ ಅಕ್ಷರಗಳ ಕೀಲಿಗಳನ್ನು ಗೊತ್ತುಪಡಿಸಬೇಕು.

ಇವುಗಳಲ್ಲಿ 2 ಮತ್ತು 3ನೆಯ ಅಂಶಗಳಲ್ಲಿನ ತೀರ್ಮಾನಗಳಿಗೆ ಕಾರಣಗಳು ಹೀಗಿವೆ.

* ಕನ್ನಡ ಬರವಣಿಗೆಯಲ್ಲಿ ಸ್ವರಗಳು ಪದಗಳ ಆರಂಭದಲ್ಲಿ ಮಾತ್ರ ತಮ್ಮ ಮೂಲ ರೂಪದಲ್ಲಿ ಬರುವುದೇ ಇಲ್ಲ; ಸ್ವರಗಳು ತಮ್ಮ ಹಿಂದಿನ ವ್ಯಂಜನಗಳೊಡನೆ ಸೇರಿ ಸ್ವರ ಚಿಹ್ನೆಗಳಾಗುತ್ತವೆ.

ಈ ನಿಯಮವನ್ನು ತಂತ್ರಾಂಶದಲ್ಲಿ ಸುಲಭವಾಗಿ ಅಳವಡಿಸಬಹುದು. ಆದ್ದರಿಂದ ಕೀಲಿಮಣೆಯ ಮೇಲೆ ಸ್ವರಚಿಹ್ನೆಗಳ ಅಗತ್ಯ ಇರುವುದಿಲ್ಲ.

* ಕನ್ನಡ ಭಾಷೆಯ ಶುದ್ಧ ಧ್ವನ್ಯಾತ್ಮಕತೆಯ ಕಾರಣ, ಉಚ್ಚಾರಣೆ ಮತ್ತು ಬರವಣಿಗೆಗಳ ನಡುವೆ ಅದ್ಭುತ ಹೊಂದಾಣಿಕೆ ಇದೆ. ಯಾವುದೇ ಸಂಯುಕ್ತಾಕ್ಷರವನ್ನಾದರೂ ಗಮನಿಸಿ. ಅದು ಒಳಗೊಂಡಿರುವ ವ್ಯಂಜನಗಳು ಮತ್ತು ಕೊನೆಯಲ್ಲಿನ ಸ್ವರ ಇವುಗಳ ಅನುಕ್ರಮಣಿಕೆಯು ನಿಶ್ಚಿತ, ಉಚ್ಚಾರಣೆಗೆ ಅನುಸಾರ, ಗೊಂದಲರಹಿತ ಹಾಗೂ ದ್ವಂದ್ವರಹಿತ. ಈ ಗುಣವನ್ನೂ ಸಹ ಕೀಲಿಮಣೆ ವಿನ್ಯಾಸದ ತಂತ್ರಾಂಶದಲ್ಲಿ ಸುಲಭವಾಗಿ ಅಳವಡಿಸಬಹುದು.

ಈ ಎರಡು ಅಂಶಗಳ ಕಾರಣದಿಂದಲೇ ಕೀಲಿಮಣೆಯ ಮೇಲೆ ಕನ್ನಡದಲ್ಲಿ ಬಳಕೆಯಲ್ಲಿರುವ ಕನ್ನಡ ಅಕ್ಷರಮಾಲೆಯ ಅಕ್ಷರಗಳನ್ನು ಮಾತ್ರ ಮೂಡಿಸಿದರೆ ಸಾಕು ಎಂಬ ತೀರ್ಮಾನಿಸಲಾಯಿತು.

4 ಮತ್ತು 5ನೆಯ ಅಂಶಗಳ ಪರಿಣಾಮವೆಂದರೆ

* ವಿಶ್ವದ ಯಾವುದೇ ಭಾಗದಲ್ಲಿ ಯಾರಾದರೂ ಯಾವಾಗಲಾದರೂ ಯಾವುದೇ ಗಣಕದಲ್ಲಾದರೂ ಕನ್ನಡವನ್ನು ಬಳಸಲು ಸುಲಭ.
* ಇಂಗ್ಲಿಷ್ ಅಕ್ಷರಗಳನ್ನು ಪೇಂಟ್ ಮಾಡಿರುವ 25 ಕೀಲಿಗಳಲ್ಲದೆ, ಉಳಿದ ಇತರ ಕೀಲಿಗಳ ಸೌಲಭ್ಯ ಕನ್ನಡಕ್ಕೂ ಲಭ್ಯ.
* ಕನ್ನಡದ ಬಳಕೆಯಲ್ಲಿ 13 ಸ್ವರಗಳು, 34 ವ್ಯಂಜನಗಳು, ಅನುಸ್ವಾರ (ಂ), ವಿಸರ್ಗ (ತಃ), ಅರ್ಕಾವೊತ್ತು (ರ್ಗ) ಹಾಗೂ ಅರ್ಧಾಕ್ಷರ ಚಿಹ್ನೆ (ರ್) ಸೇರಿ ಒಟ್ಟು 51 ಅಕ್ಷರ/ಚಿಹ್ನೆಗಳು ಇರುವುದರಿಂದ ಕನ್ನಡಕ್ಕೆ 26 ಕೀಲಿಗಳು (ನಾರ್ಮಲ್ ಮತ್ತು ಷಿಫ್ಟ್ ಒಡನೆ 52 ಸಾಧ್ಯತೆಗಳು) ಮಾತ್ರವೇ ಸಾಕು.

ಈ ತೀರ್ಮಾನಗಳ ಅನ್ವಯ ಸಿದ್ಧಗೊಳಿಸಿದ ಕೀಲಿಮಣೆ ವಿನ್ಯಾಸದ ಪ್ರಾಯೋಗಿಕ ಬಳಕೆಯು ಅತ್ಯಂತ ಯಶಸ್ವಿಯಾಯಿತು: ಅಚ್ಚರಿಗೊಳಿಸುವ ಫಲಿತಾಂಶಗಳನ್ನು ನೀಡಿತು. ಬಹುಮುಖ್ಯವಾಗಿ, ಮಕ್ಕಳಿಗೆ ಸಂಯುಕ್ತಾಕ್ಷರಗಳನ್ನು ಕೀಲಿಸುವ ವಿಧಾನವನ್ನು ತೋರಿಸಿಕೊಟ್ಟಾಗ (ಉದಾ: ಸ್ತ್ರೀ ಅಕ್ಷರಕ್ಕಾಗಿ ಸ್, ತ್, ರ್, ಈ, ಷ್ಟ್ರೈಗಾಗಿ ಷ್, ಟ್, ರ್, ಈ, ತ್ರ್ಯೋಗಾಗಿ ತ್, ರ್, ಯ್, ಓ ಇತ್ಯಾದಿ) ಈ ಧ್ವನ್ಯಾತ್ಮಕತೆಯ ಮರ್ಮವನ್ನು ಕೂಡಲೇ ಅರಿತ ಮಕ್ಕಳು ಇದನ್ನು ಮನದಟ್ಟುಮಾಡಿಕೊಂಡು ಉಳಿದ ಸಂಕೀರ್ಣ ಸಂಯುಕ್ತಾಕ್ಷರಗಳಿಗೂ ಅನ್ವಯಿಸಿಕೊಂಡು ಗಣಕದಲ್ಲಿ ಸರಿಯಾಗಿ ಕೀಲಿಸಿದರು. ಇದರ ಮಹತ್ತರ ಪರಿಣಾಮವೆಂದರೆ ಮಕ್ಕಳು ಕನ್ನಡ ಭಾಷೆಯ ಬಳಕೆಯಲ್ಲಿ ಪರಿಣತರಾಗುತ್ತಾರೆ. ಅವರಲ್ಲಿ ಭಾಷಾ ಶುದ್ಧತೆ ತಾನಾಗಿಯೇ ಬರುತ್ತದೆ. ಇದು ಗಣಕಗಳಲ್ಲಿ ಕನ್ನಡವನ್ನು ಬಳಸುವ ಎಲ್ಲರಿಗೂ ಅನ್ವಯಿಸುತ್ತದೆ. ಕನ್ನಡ ಭಾಷೆಯ ಕಲಿಕೆಗೆ ಇದೊಂದು ವರದಾನ.


ಈ ಎಲ್ಲ ವಿಚಾರಗಳನ್ನೂ ಕರ್ನಾಟಕ ಸರ್ಕಾರಕ್ಕೆ ತಿಳಿಸಲಾಯಿತು. ಇದಕ್ಕೆ ಸ್ಪಂದಿಸಿದ ಸರ್ಕಾರವು ಈ ಕೀಲಿಮಣೆ ವಿನ್ಯಾಸವನ್ನೇ ಅಧಿಕೃತವೆಂದು ಅಂಗೀಕರಿಸಿದೆ. ಎಲ್ಲ ತಂತ್ರಾಂಶಯಾರಕರೂ ತಮ್ಮ ತಮ್ಮ ಲಿಪಿ ತಂತ್ರಾಂಶಗಳಲ್ಲಿ ಇದೇ ವಿನ್ಯಾಸವನ್ನು ಅಳವಡಿಸಿಕೊಡಬೇಕೆಂದು ನಿರ್ದೇಶಿಸಿದ್ದಾರೆ.

ಗಣಕದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಬೆಳವಣಿಗೆಗಳು ಮಹತ್ವದ್ದಾಗಿವೆ. ತನ್ನ

ನಿರ್ದೇಶನಗಳು ಪ್ರಾಮಾಣಿಕವಾಗಿ ಜಾರಿಯಾಗಬೇಕೆಂಬ ದೃಷ್ಟಿಯಿಂದ ಒಂದು ಮಾನಕ ತಂತ್ರಾಂಶವನ್ನು ಅಭಿವೃದ್ಧಿಗೊಳಿಸುವ ಕಾರ್ಯವನ್ನು ಕರ್ನಾಟಕ ಸರ್ಕಾರವು ಕನ್ನಡ ಗಣಕ ಪರಿಷತ್ತಿಗೆ ವಹಿಸಿತು. ಹೀಗೆ ಸಿದ್ಧವಾದ ಉಚಿತ ಕನ್ನಡ ಲಿಪಿ ತಂತ್ರಾಂಶವನ್ನು 2001 ಅಕ್ಟೋಬರ್ 23ನೇ ದಿನಾಂಕದಂದು ಬಿಡುಗಡೆ ಮಾಡಲಾಯಿತು. ಇದನ್ನು ಬಳಸಿಕೊಂಡು ಇತರ ಕನ್ನಡ ಲಿಪಿ ತಂತ್ರಾಂಶಗಳು ಶಿಷ್ಟತೆ ಮತ್ತು ಏಕರೂಪತೆಗಳನ್ನು ಅನುಸರಿಸಿವೆಯೇ ಎಂದು ಸುಲಭವಾಗಿ ಪರಿಶೀಲಿಸಬಹುದು.

ಕನ್ನಡ ಲಿಪಿ ತಂತ್ರಾಂಶಗಳಿಗೆ ಶಿಷ್ಟತೆ ಹಾಗೂ ಏಕರೂಪತೆ ತೀರ್ಮಾನ ಮತ್ತು ಮಾನಕ ತಂತ್ರಾಂಶದ ಅಭಿವೃದ್ಧಿ-ಇವುಗಳು ಇಷ್ಟೊಂದು ವ್ಯವಸ್ಥಿತವಾಗಿ ಜಾರಿಗೆ ಬಂದಿರುವುದು ಇತರ ಭಾರತೀಯ ಭಾಷೆಗಳಿಗೆ ಮಾದರಿಯಾಗಿದೆ. ನಾವೆಲ್ಲರೂ ಹೆಮ್ಮೆ ಪಡುವಂತಹ ಸಾಧನೆಯಾಗಿದೆ. ಇದನ್ನು ಮನಗಂಡ ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯ ನಿರ್ದೇಶಕರು ಕನ್ನಡ ಗಣಕ ಪರಿಷತ್ತು ಮತ್ತು ಕರ್ನಾಟಕ ಸರ್ಕಾರವನ್ನು ಹೃತ್ಪೂರ್ವಕವಾಗಿ ಹೊಗಳಿ ಅಭಿನಂದಿಸಿದ್ದಾರೆ; ಇದೀಗ ತಾನೆ ಇತರ ಭಾಷಾ ಬಾಂಧವರೂ ಈ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಒಟ್ಟಿನಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಹಾಗೂ ಕರ್ನಾಟಕಕ್ಕೆ ಮತ್ತೊಂದು ಗರಿ ಮೂಡಿದೆ. ಮಾಹಿತಿ ತಂತ್ರಜ್ಞಾನದ ಎಲ್ಲ ಕ್ಷೇತ್ರಗಳಲ್ಲೂ ಕನ್ನಡದ ಸುಲಭ, ಸುಲಲಿತ ಬಳಕೆಯ ಮಾರ್ಗ ಸಜ್ಜುಗೊಂಡಿದೆ.

■




ದೇಶ ಸುತ್ತಿ ಬಂದವರು

■ *ವಸುಧೇಂದ್ರ*

ಬಳ್ಳಾರಿ ಜಿಲ್ಲೆಯ ಒಂದು ಚಿಕ್ಕ ಊರಿನಲ್ಲಿ, ಕೆಳ ಮಧ್ಯಮ ವರ್ಗದ ಕುಟುಂಬದಲ್ಲಿ ನಾನು ಹುಟ್ಟಿ ಬೆಳೆದಿದ್ದು. ಬಿಸಿಲು, ಬಡತನ, ಖಾರದೂಟ, ಅನಕ್ಷರತೆ, ನಿರುದ್ಯೋಗ ಆ ಊರಿನ ಮುಖ್ಯ ಆಕರ್ಷಣೆಗಳು! ನಾನು ಏಳೆಂಟು ವರ್ಷದವನಿದ್ದಾಗ ನಮ್ಮೂರಿನಲ್ಲಿ ನಡೆದ ಒಂದು ಮೆರವಣಿಗೆ ನನಗೆ ಈಗಲೂ ನೆನಪಿದೆ. ಆಗ ನಮ್ಮೂರಿನ ಶ್ರೀಮಂತರ ಹುಡುಗನೊಬ್ಬ ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಇಂಗ್ಲೆಂಡಿಗೆ ಹೋಗಿ ಬಂದಿದ್ದ. ಊರವರೆಲ್ಲಾ ತಮ್ಮ ಊರಿಗೆ ಆ ಹುಡುಗ ಕೀರ್ತಿಯನ್ನೇ ತಂದಿದ್ದಾನೆಂಬ ಉತ್ಸಾಹದಲ್ಲಿ ವಿಜೃಂಭಣೆಯ ಮೆರವಣಿಗೆ ಮಾಡಿದ್ದರು. ಆ ಹುಡುಗನ ಅಪ್ಪ ಊರಿನೆಲ್ಲರಿಗೂ ಸಿಹಿಯೂಟವನ್ನು ಹಾಕಿಸಿದ್ದ. ಗಲಾಟೆಯ ಮಧ್ಯದಲ್ಲಿ ಹೇಗೋ ತಲೆ ತೂರಿಸಿಕೊಂಡು ಆ ಹುಡುಗನ ಮುಖವನ್ನು ನೋಡಲು ನಾನು ಶತಪ್ರಯತ್ನಪಟ್ಟು ಸೋತು ಹೋಗಿದ್ದೆ. ಕುರುಬರ ತಾಯಣ್ಣ ಹಾರ ಹಾಕುವಾಗ, ಆ ಶ್ರೀಮಂತರ ಹುಡುಗ ಅವನ ಕೆನ್ನೆ ಸವರಿದನೆಂಬ ಐಕೈಕ ಕಾರಣದಿಂದ ಕ್ಲಾಸಿನಲ್ಲಿ ಹೀರೋ ಆಗಿ ಬಿಟ್ಟಿದ್ದ.

ನಾನು ಮುಂದೆ ಓದಿ, ಸಾಫ್ಟ್‌ವೇರ್ ಉದ್ಯೋಗ ಸಂಪಾದಿಸಿ, ಇಂಗ್ಲೆಂಡ್, ಡೆನ್ಮಾರ್ಕ್ ಮುಂತಾದ ದೇಶಗಳಲ್ಲಿ ಕೆಲಸ ಮಾಡಿ ನಮ್ಮೂರಿಗೆ ಹೋದಾಗ, ಯಾವುದೇ ವ್ಯತ್ಯಾಸವಿಲ್ಲದಂತೆ ಆಳುದ್ದದ ಕೊಳಾಯಿ ಕುಣಿಯಲ್ಲಿ ನಿಂತು ಪ್ಲಾಸ್ಟಿಕ್ ಕೊಡದಲ್ಲಿ ನೀರು ತುಂಬಿಸಿ, ನನ್ನಕ್ಕಂದಿರಿಗೆ ಎತ್ತಿಕೊಟ್ಟಾಗ ನನ್ನ ಕೆಲಸದ ಅಜ್ಜಿಗೆ ಎಂಥದೋ ಕಸಿವಿಸಿಯಾಗಿತ್ತು. "ಅಲ್ಲೋ ನನ್ನಪ್ಪ, ಖರೇವಂದ್ರೂ ಫಾರಿನ್‌ಗೆ ಹೋಗಿ ಬಂದೀಯೇನೋ?" ಅಂತ ಎರಡೆರಡು ಬಾರಿ ನನ್ನನ್ನು ಪ್ರಶ್ನಿಸಿದ್ದಳು. "ಯಾಕಬೆ, ನಂಬಿಕಿ ಬರವಲ್ದೇನು?" ಅಂತ ನಕ್ಕು ಉತ್ತರಿಸಿದ್ದೆ.

ಸಾಫ್ಟ್‌ವೇರ್ ಪ್ರಪಂಚದಿಂದ ಆದ ಅತ್ಯಂತ ಲಾಭವೆಂದರೆ ನಮ್ಮ ಯುವಜನತೆಗೆ ದೇಶಗಳನ್ನು ನೋಡುವ ಅವಕಾಶ ಸಿಕ್ಕಿದ್ದು. ಅದೂ ಬರೀ ಶ್ರೀಮಂತ ವರ್ಗದವರಿಗಲ್ಲ. ಮಧ್ಯಮ, ಕೆಳ ಮಧ್ಯಮ, ಬಡತನದ ಕುಟುಂಬದ ಸದಸ್ಯರೂ ಬೇರೆ ಬೇರೆ ದೇಶ ಸುತ್ತಿ ಬಂದಿದ್ದಾರೆ. ಅವರ ದೆಸೆಯಿಂದ ಅವರ ತಂದೆ-ತಾಯಿ, ಅಕ್ಕ-ತಮ್ಮಂದಿರೂ ಹೊರ ಪ್ರಪಂಚ ನೋಡಿ ಬಂದಿದ್ದಾರೆ. ಇತ್ತೀಚೆಗಂತೂ ದೇಶ ಸುತ್ತುವುದನ್ನು ಕೆಲಸದ ಒಂದು ಅವಿಭಾಜ್ಯ ಅಂಗವಾಗಿ ಎಲ್ಲರೂ ಸ್ವೀಕರಿಸುತ್ತಾರೆಯೆ ವಿನಃ, ಯಾವುದೇ ವಿಶೇಷವೆಂದಲ್ಲ. "ದೇಶವನ್ನಾದರೂ ನೋಡು, ಕೋಶ ವನ್ನಾದರು ಓದು" ಎಂಬ ಸರ್ವಜ್ಞಾನ ಮಾತಿನಲ್ಲಿ ಯಾವುದೇ



ಅನುಮಾನವಿಲ್ಲ. ಒಂದು ಹೊಸ ದೇಶವನ್ನು ನೋಡಿದಾಗ ವ್ಯಕ್ತಿಯಲ್ಲಿ ಆಗುವ ಬದಲಾವಣೆ ಸಾಮಾನ್ಯವಾದದ್ದಲ್ಲ. ಗಾಂಧೀಜಿ ದೇಶ ಸುತ್ತಿ ಬರದಿದ್ದರೆ ನಿಜಕ್ಕೂ ನಾಯಕರಾಗುತ್ತಿದ್ದರೆ ಎಂಬುದು ನನ್ನ ಅನುಮಾನ.

ನಮ್ಮ ಬಿಸಿರಕ್ತದ ಯುವಜನತೆ ಹೊಸ ದೇಶ ಸುತ್ತುವದನ್ನು ಪ್ರಾರಂಭಿಸಿದ ಮೊದಲು ನಿಜಕ್ಕೂ ದಂಗು ಬಡಿದು ಹೋಗಿದ್ದರು. ಕೂಪಮಂಡೂಕವಾಗಿದ್ದವರಿಗೆ ಸಮುದ್ರದರ್ಶನವಾದಾಗ ನಿಜಕ್ಕೂ ಕಣ್ಣು ತೆರೆದು ನೋಡಲಾರಂಭಿಸಿದರು. ಮೊದಮೊದಲು ಅಲ್ಲಿ ರಸ್ತೆ ಎಷ್ಟೊಂದು ಚೆನ್ನಾಗಿವೆ, ಕೆಲಸ ಎಷ್ಟು ಬೇಗನೆ ಆಗುತ್ತೆ, ಕಾರು ಎಷ್ಟೊಂದಿವೆ ಎನ್ನುವ ಬಾಲಿಶ ಆಲೋಚನೆಗಳಿಗೆ ಸಿಲುಕಿದರೂ, ನಂತರ ತರ್ಕಬದ್ಧವಾಗಿ ನಮ್ಮ ದೋಷಗಳೇನು, ಅದಕ್ಕೂ ಹೆಚ್ಚಾಗಿ ನಮ್ಮ ಶಕ್ತಿಗಳೇನು ಎಂಬುದನ್ನು ಅರಿತುಕೊಳ್ಳಲಾರಂಭಿಸಿದರು.

ದೇಶ ಸುತ್ತುವ ಕಾಯಕದಿಂದ ಯುವಜನತೆಯಲ್ಲಿ ಆದ ಬದಲಾವಣೆ ಹಲವಾರು ದೃಷ್ಟಿಯಿಂದ ಸ್ವಾಗತಾರ್ಹವಾದದ್ದು. ಮುಖ್ಯವಾಗಿ ಸ್ವತಂತ್ರವಾಗಿ ಆಲೋಚಿಸುವ ಕ್ರಮ, ಧೈರ್ಯದಿಂದ ನಿರ್ಧಾರ ತೆಗೆದುಕೊಳ್ಳುವ ಶಕ್ತಿ, ಪ್ರಾಮಾಣಿಕತೆಯನ್ನು ಮೆಚ್ಚುವ ಗುಣ ಅವರಲ್ಲಿ ಎದ್ದುಕಾಣುತ್ತಿದೆ. ಆಫೀಸಿನ ವಾತಾವರಣದಲ್ಲಿ ಅದೆಷ್ಟು ಬದಲಾವಣೆಯೆಂದರೆ, ಯಾರೂ ಕೆಲಸವನ್ನು ಮಾಡಲು ಹಿಂಜರಿಯುವುದಿಲ್ಲ. ಅವಶ್ಯಕತೆಯಿದ್ದಾಗ ರಾತ್ರಿ ಹತ್ತು-ಹನ್ನೆರಡವರೆಗೆ ಕುಳಿತು ಕೆಲಸ ಮಾಡುವ ಗುಣ ಭಾರತೀಯರಲ್ಲಿ ಹೊಸತು. (ಸಾಫ್ಟ್‌ವೇರ್ ಕಂಪನಿಗಳಲ್ಲಿ ಹೆಚ್ಚು ಕೆಲಸ ಮಾಡಿದ್ದಕ್ಕೆ ಓ.ಟಿ. ಸಿಗುವದಿಲ್ಲ) ಜೊತೆಗೆ ಪ್ರತಿಯೊಂದು ಕೆಲಸದಲ್ಲಿಯೂ ಹೆಚ್ಚಿನ ಗುಣಮಟ್ಟವನ್ನು ಸಾಧಿಸುವದಕ್ಕೆ ಪ್ರಯತ್ನ ಮಾಡುವದು ಕಂಡುಬರುತ್ತಿದೆ. ವಿದ್ಯೆಯನ್ನು ಗುರುತಿಸಿ ಅದನ್ನು ಗೌರವಿಸುವ ರೀತಿ ಹೆಚ್ಚಾಗಿದೆ. ನಮಗಿಂತಲೂ ಕಡಿಮೆ ಗ್ರೇಡ್‌ನಲ್ಲಿರುವ ವ್ಯಕ್ತಿಯೊಬ್ಬನಿಂದ ಟ್ರೇನಿಂಗ್ ತೆಗೆದುಕೊಳ್ಳುವದು ಅದೆಷ್ಟು ಸಾಮಾನ್ಯವೆಂದರೆ, ಕಂಪನಿಯ ಡೈರಕ್ಟರ್‌ಗಳು ಅದೀಗ ತಾನೆ ಹೊಸದಾಗಿ ಸೇರಿದ ಜೂನಿಯರ್ ನಿರ್ವಹಿಸುವ ಟ್ರೇನಿಂಗ್‌ನಲ್ಲಿಯೂ ಬಂದು ಕುಳಿತುಕೊಳ್ಳುತ್ತಾರೆ.

ಅಂತರ ರಾಷ್ಟ್ರೀಯ ವ್ಯಾಪಾರ ಮಟ್ಟದಲ್ಲಿ ಭಾರತೀಯರು ಹೆಸರು ಪ್ರಥಮ ಬಾರಿ ಕೇಳಿ ಬಂದಿದ್ದು ಸಾಫ್ಟ್‌ವೇರ್‌ನಲ್ಲಿಯೇ! ಅದು ಎಷ್ಟೊಂದು ಆತ್ಮವಿಶ್ವಾಸವನ್ನು ಭಾರತೀಯರಲ್ಲಿ ತುಂಬಿತೆಂದರೆ ಹದಿಹರೆಯದ ವಯಸ್ಸಿಯಲ್ಲಿಯೇ ಕಂಪನಿಯನ್ನು ಹುಟ್ಟು ಹಾಕುವ ಆಲೋಚನೆ ಮಾಡಲಾರಂಭಿಸಿದರು. ದರ್ಶಿನಿ ಹೋಟೇಲುಗಳಂತೆ ಬೀದಿ ಬೀದಿಗೊಂದು ಸಾಫ್ಟ್‌ವೇರ್ ಕಂಪನಿ ಶುರುವಾಗಿದ್ದು ಈಗ ಇತಿಹಾಸ. ಭಾರತೀಯ ತನ್ನಲ್ಲಿರುವ ಶಕ್ತಿಯನ್ನು ಗುರುತಿಸಿಕೊಂಡು, ತಾನೇ ಅಚ್ಚರಿಗೊಂಡಿದ್ದಾನೆ. ಹೆಚ್ಚಿನ ಬಂಡವಾಳದ ಅವಶ್ಯಕತೆಯೂ ಇಲ್ಲದ್ದರಿಂದ, ಮಧ್ಯಮವರ್ಗದ ಜನತೆಯೂ ಸ್ವತಂತ್ರ ಕಂಪನಿ ಶುರು ಮಾಡಿಬಿಟ್ಟರು. ಆದ್ದರಿಂದಲೋ ಏನೋ, ಬರೀ ಬಂಡವಾಳಶಾಹಿ ದುರಾಸೆ ಕಂಡುಬರದೆ, ಬಂದ ಆದಾಯವನ್ನು ಉದ್ಯೋಗಿಗಳೊಡನೆ ಹಂಚಿಕೊಳ್ಳುವ ಗುಣ ಕಂಡುಬಂದಿದ್ದು.

ಭಾರತ ದೇಶ ನಿಜವಾದ ಜಾತ್ಯಾತೀತತೆಯನ್ನು ಕಂಡಿದ್ದು ಸಾಫ್ಟ್‌ವೇರ್ ರಂಗದಲ್ಲಿ. ಯಾವುದೇ ಸಾಫ್ಟ್‌ವೇರ್ ಕಂಪನಿಯೂ ಉದ್ಯೋಗಕ್ಕೆ ಸಲ್ಲಿಸಿದ ಅರ್ಜಿಯಲ್ಲಾಗಲಿ, ನಂತರದ ಸಂದರ್ಶನದಲ್ಲಾಗಲಿ 'ನಿನ್ನ ಜಾತಿ ಯಾವುದು?' ಎಂಬ ಪ್ರಶ್ನೆ ಕೇಳಿದ ನಿದರ್ಶನಗಳಿಲ್ಲ. ಪ್ರಮೋಷನ್‌ಗಳೂ ಜಾತಿಯಿಂದ ಮುಕ್ತ! ಬಹುಶಃ ಈ ಕಾರಣಕ್ಕಾಗಿಯೇ ಏನೋ, ಸಾಫ್ಟ್‌ವೇರ್ ಕಂಪನಿಗಳಲ್ಲಿ ಯಾರೂ ಯಾರ ಜಾತಿಯ

ಬಗ್ಗೆ ತಲೆ ಕೆಡಿಸಿಕೊಳ್ಳುವದಿಲ್ಲ. ಅಲ್ಲಿ ಅಂತರ್‌ಜಾತೀಯ ವಿವಾಹಗಳು ಎಷ್ಟೊಂದು ಸಾಮಾನ್ಯವೆಂದರೆ ಅದೊಂದು ವಿಶೇಷವೆಂದೂ ಇತ್ತೀಚೆಗೆ ಯಾರೂ ಪರಿಗಣಿಸುವದಿಲ್ಲ.

ಮಹಿಳೆಯರಿಗೂ ಪುರುಷರಿಗೆ ಸಮಾನವಾಗಿ ಸ್ಥಾನಮಾನ ಸಿಕ್ಕಿದ್ದು ಸಾಫ್ಟ್‌ವೇರ್ ಪ್ರಪಂಚದಲ್ಲಿಯೇ! ಪುರುಷರಿಗೆ ಸರಿ ಸಮಾನವಾಗಿ ನಾನೂ ದುಡಿಯಬಲ್ಲೆ ಎಂಬ ಆತ್ಮವಿಶ್ವಾಸ ಮಹಿಳೆಯರಿಗೆ ಬಂದಿದೆ. ಕಂಪನಿಯ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಮಹಿಳೆಯರನ್ನು ನೋಡಿದಾಗ ಖುಷಿಯಾಗುತ್ತದೆ. ಶತ ಶತಮಾನಗಳಿಂದ ಪುರುಷರ ದೌರ್ಜನ್ಯಕ್ಕೆ ಒಳಗಾಗಿದ್ದ ಮಹಿಳೆ ಈಗಲಾದರೂ ಎದ್ದುನಿಲ್ಲುವಂತಾಯಿತಲ್ಲ ಎಂದು ಸಮಾಧಾನವಾಗುತ್ತದೆ.

ದೇಶ ಸುತ್ತುವದರಿಂದ ಬಂದ ಮತ್ತೊಂದು ಬಳುವಳಿಯೆಂದರೆ "ದೇಶಪ್ರೇಮ"! ಹೊರ ದೇಶದಲ್ಲಿ ನೆಲಸಿದ್ದರೂ ನಮ್ಮ ದೇಶದ ಸಮಸ್ಯೆಗಳಿಗೆ ಸ್ಪಂದಿಸುವ ಗುಣ ಎಲ್ಲೆಲ್ಲಿಯೂ ಕಂಡುಬರುತ್ತಿದೆ. ಭೂಕಂಪ, ಕಾರ್ಗಿಲ್ ಯುದ್ಧಗಳ ಸಮಯದಲ್ಲಿ ಹೊರ ದೇಶದಲ್ಲಿ ಬೇರೂರಿದ ಭಾರತೀಯರಿಂದ ಮತ್ತು ಇಲ್ಲಿರುವ ಸಾಫ್ಟ್‌ವೇರ್ ವೃತ್ತಿಪರರಿಂದ ಹರಿದು ಬಂದ ಧನಸಹಾಯಕ್ಕಿಂತ ಬೇರೆಯ ನಿದರ್ಶನ ಬೇಕಿಲ್ಲ. ಬಹುಶಃ ಇತರ ದೇಶಗಳಲ್ಲಿ ಜನರು ತಮ್ಮ ದೇಶದ ಬಗ್ಗೆ ತೋರಿಸುವ ಪ್ರೇಮವನ್ನು ಕಂಡಾಗ ನಮ್ಮ ಭಾರತೀಯನಲ್ಲೂ ಅಳುಕು ಉಂಟಾಗಿರಬೇಕು. ಅದೇ ಇಂದು ದೇಶದ ಬಗ್ಗೆ ಚಿಂತಿಸುವದಕ್ಕೆ ಪ್ರೇರಣೆಯಾಗಿರಬೇಕು.

ಬರೀ ಇಷ್ಟೇ ಹೇಳಿಬಿಟ್ಟರೆ ಗುಲಾಬಿ ಹೂವನ್ನು ವರ್ಣಿಸಿ, ಮುಳ್ಳನ್ನು ಮರೆತಂತಾದೀತು. ಸಾಫ್ಟ್‌ವೇರ್ ಪ್ರಪಂಚ ನಿರ್ಮಿಸುವ, ನಿರ್ಮಿಸುತ್ತಿರುವ ಮುಳ್ಳುಗಳ ಮೊನೆಗಳನ್ನು ಗಮನಿಸೋಣ.

"ಏನಯ್ಯಾ ಇದು, ಎಲ್ಲೆಲ್ಲೂ ಬರೀ ಸಾಫ್ಟ್‌ವೇರ್ ಇಂಜಿನಿಯರುಗಳು" ಅಂತ ಬೊಬ್ಬೆ ಹೊಡೆದರೂ, ಭಾರತೀಯ ಜನಸಂಖ್ಯೆಗೆ ಹೋಲಿಸಿದ್ದರೆ ಇದು ಏನೇನೂ ಅಲ್ಲ. ಆದರೆ ಅದರ ಬಗ್ಗೆ ಗುಲ್ಲೋ ಗುಲ್ಲಾಗಿದ್ದಕ್ಕೆ ಮುಖ್ಯ ಕಾರಣವೆಂದರೆ ಅಲ್ಲಿ ಹರಿಯುತ್ತಿರುವ ಹಣ. ಅಪ್ಪಂದಿರು ತಮ್ಮ ನಿವೃತ್ತಿಯ ಸಮಯದಲ್ಲೂ ಕಂಡಿರದ ಸಂಬಳವನ್ನು ಮಕ್ಕಳು ತಮ್ಮ ಮೊದಲ ಸಂಬಳದಲ್ಲಿಯೇ ಕಂಡುಬಿಟ್ಟಿದ್ದಾರೆ. ವರುಷ ಮೂವತ್ತೈದಾದರೂ ಸರಿಯಾದ ಕೆಲಸವಿಲ್ಲದೆ - ಅದೇ ಕಾರಣಕ್ಕಾಗಿ ಮದುವೆಯಾಗಲು ಹೆಣ್ಣೂ ಸಿಗದೆ ಒದ್ದಾಡುವ ಯುವಜನಾಂಗ ಒಂದು ಕಡೆ ಕಂಡುಬಂದರೆ, ಈ ಸಾಫ್ಟ್‌ವೇರ್ ಪೋರರು ಮದುವೆಗೆ ಮುಂಚೆಯೇ ಲಕ್ಷಗಟ್ಟಲೆ ಹಣ ಸುರಿದು ಮನೆ, ಕಾರು ಎಲ್ಲಾ ಮಾಡಿಕೊಂಡು ಬಿಟ್ಟಿದ್ದಾರೆ.

ಅಸಮಾನತೆ ಯಾವುದೇ ಸಮಾಜಕ್ಕೂ ಒಳ್ಳೆಯದಲ್ಲ. ಅಸಮಾನತೆಯ ದಳ್ಳುರಿ ಯಾವುದೇ ಅಣುಬಾಂಬಿಗೂ ಕಡಿಮೆಯಲ್ಲ. ಬೇರೆ ವೃತ್ತಿಯಲ್ಲಿರುವವರು ಹಗಲಿರುಳು ದುಡಿದರೂ ಸಾಧಿಸಲಾಗದ್ದನ್ನು ಸಾಫ್ಟ್‌ವೇರ್ ಮಂದಿ ಚಿಟಿಕೆ ಹೊಡೆಯುವಷ್ಟರಲ್ಲಿ ಮುಗಿಸಿ ಬಿಡುತ್ತಿರುವದನ್ನು ಕಂಡ ಮೇಲೆ ಒಳಗೊಳಗೇ ದ್ವೇಷದ ಕಿಡಿ ಹತ್ತಿ ಉರಿಯುತ್ತಿದೆ. ಅದು ಅಸಹಜವೇನಲ್ಲ. ಆದರೆ ಆ ಉರಿ ಹತ್ತಿ ಉರಿದು ಸಮಾಜವನ್ನು ಧ್ವಂಸ ಮಾಡಿಬಿಡುತ್ತದೆಯೋ ಎಂಬ ಹೆದರಿಕೆಯಾಗುತ್ತದೆ.

ಸಾಫ್ಟ್‌ವೇರ್ ಪ್ರಪಂಚದಲ್ಲಿರುವವರು ತಮ್ಮದೇ ಲೋಕದಲ್ಲಿ ಮುಳುಗಿ ತೇಲುವ ಮಂದಿ. ಬೆಳಿಗ್ಗೆ ಎಂಟಕ್ಕೆ ಹೋದರೆ ರಾತ್ರಿ ಹತ್ತು ಹನ್ನೆರಡಕ್ಕೆ ವಾಪಾಸಾಗುತ್ತಿದ್ದಾರೆ. ತಮ್ಮ ಕುಟುಂಬದ ಜೊತೆಯೇ ಸಾಕಷ್ಟು ಸಮಯ ಕಳೆಯಲಾಗದಂತಹ ಪರಿಸ್ಥಿತಿ ನಿರ್ಮಿಸಿಕೊಂಡಿದ್ದಾರೆ. ಇನ್ನು ಅವರು ಸಮಾಜದ

ಇತರ ಚಟುವಟಿಕೆಗಳಲ್ಲಿ ಭಾಗವಹಿಸುವದಂತೂ ದೂರದ ಮಾತು. ಕನ್ನಡ ಸಾಹಿತ್ಯವನ್ನೇ ಉದಾಹರಣೆ ತೆಗೆದುಕೊಳ್ಳಿ. ಹೊಸದಾಗಿ ಬರೆಯುವ (ಚೆನ್ನಾಗಿ ಬರೆಯುವ) ಲೇಖಕರ ಸಂಖ್ಯೆ ಅದೆಷ್ಟು ಕಡಿಮೆಯಾಗಿ ಹೋಗಿದೆಯೆಂದರೆ, ಸೃಜನಶೀಲತೆ ಬೇರೊಂದು ರಂಗಕ್ಕೆ ವಲಸೆ ಹೋಗಿದೆಯೇನೋ ಎಂಬ ಅನುಮಾನವಾಗುತ್ತದೆ. ಬರೀ ಇಷ್ಟೇ ಅಲ್ಲ. ಈ ಸಾಫ್ಟ್‌ವೇರ್ ಮಂದಿ ದಿನನಿತ್ಯದ ವ್ಯವಹಾರದಲ್ಲಿ ಹಣವನ್ನು ನೀರಿನಂತೆ ಸುರಿಯುತ್ತಿದ್ದಾರೆ. ಇದರಿಂದಾಗಿ ಮನೆ ಬಾಡಿಗೆ, ಹೋಟೆಲಿನ ಬೆಲೆ, ನೆಲದ ಬೆಲೆಯೆಲ್ಲಾ ಗಗನಕ್ಕೇರಿ ಕುಳಿತು ಬಿಟ್ಟಿವೆ. ಸಾಮಾನ್ಯ ಗುಮಾಸ್ತೆಯ ಉದ್ಯೋಗದಲ್ಲಿರುವವರು ಬೆಂಗಳೂರಿನಲ್ಲಿ ನೆಲೆಯೂರುವುದೇ ಕಠಿಣವಾಗಿ ಹೋಗುತ್ತಿದೆ.

ದೇಶ ಸುತ್ತಿ ಬಂದಿದ್ದರಿಂದ ಒಳ್ಳೆಯ ಆಲೋಚನೆಗಳು ಬಂದಿವೆಯೆಂಬುದು ಎಷ್ಟು ನಿಜವೋ, ಅಷ್ಟೇ ಪ್ರಮಾಣದಲ್ಲಿ ದುರಭ್ಯಾಸಗಳೂ ನುಸುಳುತ್ತಿರುವುದು ಸತ್ಯ. ಆಲ್ಕೋಹಾಲ್ ಸೇವನೆ, ಧೂಮಪಾನ, ವಿವಾಹೇತರ ಸಂಬಂಧ, ವಿನಾಃ ಕಾರಣ ಜಗಳಾಡಿ ಬೇರೆಯಾಗುವ ದಂಪತಿಗಳು, ವೃತ್ತಿಯ ಮೇಲಿನ ವ್ಯಾಮೋಹದಿಂದ ಅವಿವಾಹಿತರಾಗುಳಿದು ಬಿಡುವುದು ಇಂದು ಸಾಮಾನ್ಯವಾಗುತ್ತಿದೆ.

ಇರಲಿ. ಇವೆಲ್ಲಕ್ಕೂ ಮುಖ್ಯವಾಗಿ ನಾವಿಂದು ಸಾಫ್ಟ್‌ವೇರ್ ಪ್ರಪಂಚ ದಿನದಿನಕ್ಕೆ ಕುಸಿದು ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ಸಮಾಜ ಅವರೆಡೆ ಅಸೂಯೆಯ ಕಣ್ಣಿಂದ ನೋಡುವದಿರಲಿ, ಅನುಕಂಪ ಸೂಚಿಸುವ ಕಾಲ ದೂರವಿಲ್ಲವೇನೋ ಎಂಬ ಅನುಮಾನ ಶುರುವಾಗುತ್ತಿದೆ. ದಿನ ಬೆಳಗಾದರೆ ಯಾವುದೋ ಕಂಪನಿ ಮುಚ್ಚಿ ಹೋದ ಸುದ್ದಿ, ಇಲ್ಲವೆ ಮತ್ತಿನ್ನಾವುದೋ ಕಂಪನಿಯಲ್ಲಿ ನೂರಾರು ಜನರನ್ನು ಹೊರಹಾಕಿದ ಸುದ್ದಿ ಕೇಳಿ ಕೇಳಿ ನಮ್ಮೆಲ್ಲರ ಎದೆಯಲ್ಲಿ ಸಣ್ಣಗೆ ನಡುಕ ಹುಟ್ಟುತ್ತಿದೆ.

■

ಕಾರಾಗೃಹದ ಕವನಗಳು

ಅನುವಾದ : ಪ್ರತಿಭಾ ನಂದಕುಮಾರ್

ಆಸ್ಟ್ರೇಲಿಯಾದ ಪರ್ರಮಟ್ಟ ಜೈಲಿನಲ್ಲಿಯ ಖೈದಿಗಳಿಗೆ, ಆಸ್ಟ್ರೇಲಿಯನ್ ಕೌನ್ಸಿಲ್ ಫಾರ್ ಆರ್ಟ್ಸ್ ಎನ್ನುವ ಸಂಸ್ಥೆ ಒಂದು ನಾಟಕ ಶಿಬಿರ ನಡೆಸಿತು. ಆದರಲ್ಲಿ ಭಾಗವಹಿಸಿದ ಕೆಲವರು ಖೈದಿಗಳು ಉತ್ತಮ ಬರಹ ಪ್ರತಿಭೆ ತೋರಿದ್ದರಿಂದ ಅವರಿಗೆ ರಾತ್ನೆ ಹಾಲ್ ಎನ್ನುವ ಕವಿ ಒಂದು ಕವನ ಶಿಬಿರ ನಡೆಸಿದ. ಪರಿಣಾಮವಾಗಿ ರಚನೆಗೊಂಡ ಕವನಗಳನ್ನು 'Poems from Prisons' ಎನ್ನುವ ಸಂಕಲನವಾಗಿ ಪ್ರಕಟಿಸಲಾಯಿತು. ಕೆಲವು ಆಯ್ದ ಕವನಗಳ ಭಾಷಾಂತರ ಇದು.

ಹಳೆಯ ವಸ್ತುಗಳು

❖ *ಎರಿಕ್ ಮೆಕೆಂಜೀ*

ಟಾರ್ಪಾಲಿನಂತೆ ಬೂದು ಬಣ್ಣದ ಹುಲ್ಲು
ಚಳಿಗಾಲವನ್ನು ಡಿಗ್ರಿಗಳಲ್ಲಿ ಅಳೆಯುತ್ತಾರೆ
ಉದುರುತ್ತಿರುವ ಸಣ್ಣ ಘಟನೆಗಳಂತೆ
ಎಲೆಗಳು, ಮರಗಳ ಎಕ್ಸರೇ ತೋರುತ್ತವೆ

ಗಾಢವಾದ ಬಣ್ಣ ಬಳಿದ ಬೆಂಚಿನ ಮೇಲೆ
ನಿರ್ಭಾವದಲ್ಲಿ ಪಾರ್ಕಿನಲ್ಲಿ ಕೂತಿದ್ದೇನೆ
ಕನ್ನಡಕ ಕಿವಿಗಿಟ್ಟು. ನೆನಪಿಗೆ ಸ್ಪಂದಿಸುವ
ಆಲ್ಬಂ ತೆರೆದು ಕೈಯಲ್ಲಿ ಹಿಡಿಯುತ್ತೇನೆ.

ಬಣ್ಣವಿಲ್ಲದ ಫೋಟೋಗಳು
ನಗಲು ಹೇಳಿದ ತುಟಿಗಳು
ಗುಹೆಯೊಳಗಿಂದೆನ್ನುವಂತೆ ಹೊರಬಂದು
ನನ್ನ ಮನದೊಳಗೆ ನರ್ತಿಸುತ್ತವೆ.

ದೆವ್ವಗಳ ನಡುವೆ ದೇವರು
ಪವಾಡ ಚಿಕಿತ್ಸೆಗಳು
ಎಲ್ಲವೂ ಸಾಧ್ಯ. ನನ್ನ ಮನದಲ್ಲೇ
ಪ್ರೀತಿ ಎನ್ನುವುದು ಬ್ರೈಲ್‌ನಂತೆ
ಸ್ಪರ್ಶಧಾರಿತ.
ಕುರುಡಾಗಿ ಮಿಡಿಯುವ
ನಿಯಾನ್ ಹೃದಯಗಳೂ



ಎಸ್. ಖುಶ

ಲಾಕಪ್

❖ ಮ್ಯಾಕ್ಸ್ ವಿಲಿಯಮ್ಸ್

ಆ ಗೋಡೆಯನ್ನು ದಿಟ್ಟಿಸುತ್ತೇನೆ
ಯಾರೋ ಕೆಟ್ಟದಾಗಿ ಗೀಚಿದ್ದಾರೆ
"ಸ್ಟೀವ್, ಒಂದು ಕಳ್ಳತನ, ಎರಡು ವರ್ಷ"


ಅದು ಕಳೆದ ಸಲ
ಈಗ ಮತ್ತೆ ಬಂದು ನಿಂತಿದ್ದೇನೆ.
ಅದೇ ಜಾಲರಿ ಹಾಕಿದ ದೀಪಗಳು
ಪೋಲೀಸ್ ಲಾಕ್‌ಪ್‌ನಲ್ಲಿ
ಮ್ಲಾನ ನಗೆ, ನಿಟ್ಟುಸಿರು
ಒಳ್ಳೆ ಉಡುಪಿನಲ್ಲಿ ಕಸಿವಿಸಿ ಗೊಳ್ಳುತ್ತಾ

ಫಿನಾಯಿಲ್ ಹಾಕಿ ತೊಳೆದ ನೆಲ
ಅಲ್ಲಲ್ಲಿ ನೀರು ಮಡುಗಟ್ಟಿದೆ.
ಅದರ ಮೇಲೇ ನಡೆದ ಸಾಗಿದ
ಹೆಜ್ಜೆ ಗುರುತುಗಳು......

ಒದ್ದೆ ಬಿಳಿ ಕಲ್ಲಿನ ಮೇಲೆ ಕೈ ಉಜ್ಜುತ್ತೇನೆ
ಗಲೀಜು ಕಕ್ಕಸಿನ ನೆನಪಾಗುತ್ತದೆ
ಮರೆಯಲು ಯತ್ನಿಸುತ್ತಾ
ಲಾಕಪ್ಪಿನ ನಂಟಿನ ಬಗ್ಗೆ ಚಿಂತಿಸುತ್ತಾ,

ಮತ್ತೆ ಅಲ್ಲಿಗೇ
ಅದೇ ಹಳೆಯ ಕತೆ
ಜಾಮೀನಿಲ್ಲ, ಗೆಳೆಯರಿಲ್ಲ
ತೀರ್ಮಾನವಾಗುವುದೂ ಇಲ್ಲ ....

ನನ್ನ ಅದೃಷ್ಟದ ಸಣ್ಣ ಪರೀಕ್ಷೆ
ನಾಳೆ ಕೋರ್ಟಿನಲ್ಲಿ
ಅವಳಿಗೆ ಗೊತ್ತಾಯಿತೋ ಇಲ್ಲವೋ
ಎನ್ನುವುದು ಅಲ್ಲಿ ಗೊತ್ತಾಗುತ್ತದೆ. ■



ರವಿಕಾಶಿ ಗ್ರಾಫಿಕ್ ಕೃತಿ

ಪೀಟರ್ಸ್ ಬರ್ಗ್

❖ ಜಾಕ್ ಮುರೇ


ಪೀಟರ್ಸ್ ಬರ್ಗ್‌ನನ ಹಿಮದ ಕಂದಕಗಳು ಗೊತ್ತು
ಮಂಜಿನ ಮೇಲೆ ಕಳೆದ ತೀವ್ರ ಪ್ರೀತಿಯ ಕ್ಷಣಗಳು ಗೊತ್ತು.

ರೈತನ ವಿಶ್ರಾಂತಿಯ ಕನಸು ಗೊತ್ತು, ಒಂಟಿತನ
ಬೆಳೆಯುವ ಮರದ ಚೂಪು ತುದಿ ಚಿಗುರು ಗೊತ್ತು.

ಚಳಿಗಾಲದ ನಂತರ ಮರಳುವ ಹಕ್ಕಿಗಳ ಸಂತಸ ಗೊತ್ತು
ಹಿಮಕರಗಿ ಮತ್ತೆ ನೀರು ಹರಿದು ಗಿರಣಿ ಚಕ್ರ ತಿರುಗುವುದು ಗೊತ್ತು.

ಹೂವರಳಿ ಕೆಲ ಹೊತ್ತು ಮಾತ್ರ ಇರುತ್ತದೆ
ಅದಕ್ಕೆ ಅವು ಅಷ್ಟು ಸುಂದರ ಎಂದು ಗೊತ್ತು.

ನೇವಾದ ಹೆಸರು ಹೇಳಿ ಅವನು
ಮರೆತಿದ್ದ ಎಲ್ಲವನ್ನು ಮತ್ತೆ ನೆನಪಿಸಿದ.



ಎಸ್. ಖುತ

ಬೇರೆ ಯಾರಿದ್ದಾರೆ, ನನ್ನನ್ನು ಬಿಟ್ಟರೆ?


❖ ಜಾಕ್ ಮುರೇ

ಕಾಳ ರಾತ್ರಿ
ಸ್ತಬ್ಧತೆಯೊಂದಿಗೆ ತಳುಕು ಹಾಕಿಕೊಂಡಿದೆ
ಕಪ್ಪು ಗೋಡೆಗಳು
ಆಕಾಶವನ್ನು ಚುಚ್ಚುತ್ತಿವೆ.

ಬೇರೆ ಯಾವುದಕ್ಕೂ ಅವಕಾಶವಿಲ್ಲ.

ಎಲ್ಲರೂ ಒಳಗೊಂಡು
ವೃತ್ತಾಕಾರದಲ್ಲಿ ಕೂರಿ
ಆತ್ಮ ರಕ್ಷಣೆಗೆಗಾಗಿ ಅಕ್ಕ ಪಕ್ಕದವರನ್ನೇ
ಪದ ಜಾಲದಂತೆ ಜೋಡಿಸಿಕೊಳ್ಳಿ

ವಿನಯದ ನಾಟಕ ಬೇರೆ
ಲಯ ಕೆಡಬಾರದು
ಸಮತೋಲನ ತಪ್ಪಬಾರದು
ನಾನಿಲ್ಲಿದ್ದೇನೆ
(ಎಲ್ಲೆಲ್ಲೂ ಇದ್ದೇನೆ)



ಎಸ್. ಖುತ

ವರ್ಷ ವರ್ಷಕ್ಕೆ ಕುಸಿಯುತ್ತಿದ್ದೇನೆ.
ಮರೆತ ಸಂಗತಿಗಳನ್ನು
ನನಗೆ ಮತ್ತೆ ಯಾರು ಕಲಿಸುತ್ತಾರೆ?

ಒಕ್ಕಣ್ಣಿನ ರಾಕ್ಷಸ
ಮೂಲೆಯಲ್ಲಿ ವಕ್ಕರಿಸಿದ್ದಾನೆ
ಖೈದಿಗಳನ್ನು ಅವನು ಕಾಯಬೇಕು
ಯಾರೂ ಕದಿಯದ ಹಾಗೆ

ಕಳ್ಳನ ಮದುವೆ

❖ *ಮ್ಯಾಕ್ಸ್ ವಿಲಿಯಮ್ಸ್*

ನುರಿತ ಮದುವಣಗಿತ್ತಿ ನೀನು
ಹಿಂದಿನಿಂದ ಬಂದು ನನ್ನನ್ನಪ್ಪಿಕೊಂಡೆ
ಗೆಳತಿಯ ಒಳ್ಳೆ ಉಡುಪಿನ ಮೇಲೆ
ನಿನ್ನ ಒಂದು ಕಣ್ಣಿತ್ತು.

ಬೂದು ಚೌಕಳಿ ಷರಟು
ಗುಲಾಬಿ ಟೈತೊಟ್ಟು ನಾನು
ಐದೇ ನಿಮಿಷದ ಹಿಂದೆ ಜಾಮೀನಿಗಾಗಿ ಇನ್ಸ್‌ಪೆಕ್ಟರ್
ಮೇಜಿನ ಮುಂದೆ ಬಾಗಿ ನಿಂತಿದ್ದೆ

ಆರ್ಗನ್ನಿನ ಯಾತನೆಯ ಸದ್ದು
ಎಷ್ಟು ಸಾಂಕೇತಿಕ ಎನಿಸಿತ್ತು
ಜಾಮೀನು ಕೊಡಲಿಲ್ಲ


ಅರ್ಜಿ ತಿರಸ್ಕೃತ
ಅಷ್ಟು ಸಾಲದೆನ್ನುವಂತೆ
ನಾನು 'ಹೂಂ' ಅಂದುಬಿಟ್ಟೆ

ಯಾರೋ ಮದುವೆಯ ಉಡುಗೊರೆಗಳನ್ನೆಲ್ಲ
ಕದ್ದು ಬಿಟ್ಟಿದ್ದರು
ಒಂದು ವಾರದಿಂದ ಗೆಳೆಯರು
ಅಂಗಡಿಗಳಿಂದ ಕದ್ದು ತಂದಿದ್ದ
ಉಡುಗೊರೆಗಳವು.
ಆ ಬಗ್ಗೆ ನಾನು ದೂರಿದರೆ

ನೀನು ನಕ್ಕು ಬಿಟ್ಟೆ
“ಎಲ್ಲರಿಗೂ ಕಳೆದುಕೊಳ್ಳುವ ಹಕ್ಕಿದೆ’
ಎಂದು ಬಿಟ್ಟೆ.

ಪಬ್ಲಿಕ್ ಪ್ರಾಸಿಕ್ಯೂಟರ್
ಅಂದಿನ ಬಾರ್‌ಮನ್
ಬಂಟಿಯ ಸಾಮಾನಿನ ಮೇಲೆಲ್ಲ
ಬಿಯರ್ ಚೆಲ್ಲಿ ಬಿಟ್ಟ
ಅಂಚೆ ಕಳ್ಳ ಮಡ್ಡಿ ಮತ್ತು
ರೈಲು ಕಳ್ಳ ಟಾಮ್
ಶ್ರೀಮಂತಿಕೆ ಮತ್ತು ಸಂತೋಷ ಕುರಿತು
ಚೆನ್ನಾಗಿ ಭಾಷಣ ಮಾಡಿದರು

ನೆನಪಿದೆಯೇ
ನಾವು ಹೇಗೆ ಕೇಕ್ ಕತ್ತರಿಸಿದೆವು?
ಚಾಕುವಿನ ಹಿಡಿಯನ್ನು ಯಾರು
ಬಲವಾಗಿ ಹಿಡಿಯುತ್ತಾರೆ
ಎನ್ನುವ ಬಗ್ಗೆ ಜಗಳವಾಡಿದೆವು.
ಯಾರು ಕೈ ಮೇಲು ಎನ್ನುವುದು
ಆಗಲೇ ನಮಗೆ ಇತ್ಯರ್ಥವಾಗಬೇಕಿತ್ತು.
ಸಕ್ಕರೆ ಗೊಂಬೆಯ ಹೆಣ್ಣಿನ
ಕೊರಳು ಕತ್ತರಿಸಿದೆ ನಾನು
ಎರಡು ವರ್ಷ ದುರದೃಷ್ಟ
ಎಂದು ಶಕುನ ನುಡಿದೆ ನೀನು.


ಎಸ್. ಖುತ

ಮಾರನೆಯ ಮುಂಜಾನೆ ನಿದ್ದೆ ಗಣ್ಣಲ್ಲೇ
ಎದ್ದು ಮದುಮಗಳ ಬೆಳಗಿನ ತಿಂಡಿ ಮಾಡಿದೆ
ನೀನಾಗ ಗಂಡಸಿನಂತೆ ಗೊರಕೆ ಹೊಡೆಯುತ್ತಿದ್ದೆ.

ಅಡಿಗೆ ಮನೆಯಿಂದ ಬರುವಾಗ
ಅಕಸ್ಮಾತ್ ನಿನ್ನ ಕೃತಕ ಹಲ್ಲಿನ ಸೆಟ್ ಮೇಲೆ
ಕಾಲಿಟ್ಟು ಎಲ್ಲವನ್ನೂ ಚೆಲ್ಲಿ ಬಿಟ್ಟೆ.

(ನೀನೇನೆಂದು ಕೊಂಡಿದ್ದೆಯೋ
ನಾನು ಮದುವೆಯಾದ ಕವನ
ಇದೇ ಅನ್ನಿಸುತ್ತಿದೆ) ■


ಎರಡನೇ ವರ್ಷದ ಕೊನೆ

❖ *ಜಾಕ್ ಮುರೇ*

ವಾಸ್ತವವೆನ್ನುವುದು
ಈ ಶಿಲ್ಪದಷ್ಟೇ ಸ್ಥಿರ ಅಚಲ
ಕುದುರೆಗೆ ಬೆಸುಗೆ ಮಾಡಿದ ಶೂರ
ಕಲ್ಲೊಳಗೆ ಮೂಡಿದ್ದಾನೆ.
ಮನೆಯಿಂದ ಎಷ್ಟೋ ಮೈಲಿ
ದೂರದಲ್ಲಿರುವ ಕಟು ಸತ್ಯಕ್ಕೆ
ಸಾಕ್ಷಿಯಂತೆ.


ಯಾವ ಶಕುನಕ್ಕೆ ಕಿವಿಗೊಡಲಿಲ್ಲ
ಚಂದ್ರ ನಗುತ್ತಾನೆ
ಸಾವಿರ ಮೈಲಿ ದೂರದಲ್ಲಿ
ಯಾವ ಹಂಸಗಳು ತೇಲದ
ಈ ಕಲ್ಲು ಕೋಣೆಯೊಳಗೆ
ಸುಮ್ಮನೆ ಶತಪಥ ಸುತ್ತುವ
ನನಗೆ ಅವನು
ನಿರಂತರ ಸಾಕ್ಷಿ.

ಹೊರಗೆ ಪಾರ್ಕಿನಲ್ಲಿ
ಸಣ್ಣಗೆ ಮಳೆ ಬೀಳುತ್ತಿದೆ.
ಹಕ್ಕಿ ಪಿಕ್ಕೆಯ ಬಿಳಿ ಕಲೆ
ಶಿಲ್ಪದ ಮುಖದ ಮೇಲೆ
ಕಣ್ಣೀರಿನಂತೆ ನೀರಿಳಿಯುತ್ತಿದೆ
ಇದು ಇನ್ನೊಂದು ಕಟುಸತ್ಯ.



‘ಗಾಂಧಿ’ಯನ್ನು ನೆನಪಿಸಿಕೊಳ್ಳುವ ಎರಡು ಕಾದಂಬರಿಗಳು

■ *ಚಲಪತಿ ಆರ್.*



ಕನ್ನಡ ಕಾದಂಬರಿ ಲೋಕ ಅತ್ಯಂತ ವೈವಿಧ್ಯಮಯವಾದದ್ದು 20ನೆಯ ಶತಮಾನದ ಉದ್ದಕ್ಕೂ ಹತ್ತು ಹಲವು ಬಗೆಯ ಪ್ರಯೋಗಗಳಿಗೆ ಒಳಪಟ್ಟದ್ದು. ಇಂಗ್ಲಿಷ್ ಸಾಹಿತ್ಯ ಸಂಸ್ಕೃತಿಯಿಂದ ಪ್ರೇರಣೆಗೊಂಡರೂ ಕನ್ನಡದ್ದೇ ಆದ ಸಾಂಸ್ಕೃತಿಕ ಲೋಕವನ್ನು ಸೃಷ್ಟಿಸಿಕೊಳ್ಳಲು ಅಭಿವ್ಯಕ್ತಗೊಳ್ಳಲು ಕಾದಂಬರಿಗಳ ಕೊಡುಗೆ ದೊಡ್ಡದು. ಅನೇಕ ಬರಹಗಾರರು ಈ ಶತಮಾನದ ಮೊದಲಿಂದಲೇ ಸ್ವತಂತ್ರ ಕಾದಂಬರಿಗಳ ಪ್ರಯೋಗದಲ್ಲಿ ತೊಡಗಿದರು. ಇಂಗ್ಲೀಷ್ ಶಿಕ್ಷಣ, ಸ್ವಾತಂತ್ರ್ಯ ಹೋರಾಟ, ಹೊಸ ಬಗೆಯ ಸಾಹಿತ್ಯ ನಿರ್ಮಾಣದ ಹಂಬಲ ನಮ್ಮ ಸಾಂಸ್ಕೃತಿಕ ಶಕ್ತಿಯನ್ನು ತೋರಿಸಲು ಆಗ ಕಾರಣವಾದ ಅಂಶಗಳಾಗಿದ್ದವು. ಅನಂತರದಲ್ಲಿ ಸಾಹಿತ್ಯ ಚಳುವಳಿಗಳ ಭಾಗವಾಗಿ ತತ್ವ ಸಿದ್ಧಾಂತಗಳ ಮೂಲಕ ಪ್ರಯೋಗಗೊಳ್ಳಲ್ಪಟ್ಟವು. ಕಾದಂಬರಿಯ ರಚನೆಗೆ ಕಾರಣಗಳೇನೇ ಇರಲಿ ಓದಿನ ಮೂಲಕ ಒಂದು ಬಗೆಯ ಸಾಂಸ್ಕೃತಿಕ ಚರ್ಚೆಯನ್ನು ಬೆಳೆಸುವಲ್ಲಿ ಕಾದಂಬರಿಗಳದ್ದು ಮಹತ್ವರ ಕೊಡುಗೆ. ಸುಮಾರು 40ರ ದಶಕದಿಂದಾಚೆಗೆ ಕಾದಂಬರಿಗಳ ಸುಗ್ಗಿಯೇ ನೆಡೆದಿರುವುದನ್ನು ಕಾಣುತ್ತೇವೆ.

ಹೆಚ್. ನಾಗವೇಣಿಯವರ **ಗಾಂಧಿಬಂದ** (ಪ್ರ. 1999) ಮತ್ತು ವ್ಯಾಸರಾಯ ಬಲ್ಲಾಳರ **ಹೆಜ್ಜೆ**.....(ಪ್ರ. 2000) ಕಳೆದ ಶತಮಾನದ ಕೊನೆಯ ಘಟ್ಟದ ಕಾದಂಬರಿಗಳು. ಕಾಕತಾಳೀಯವೆಂದರೆ ಈ ಎರಡೂ ಕಾದಂಬರಿಗಳ ವಸ್ತು ಒಂದೇ ಆಗಿರುವುದು. ಗಾಂಧಿ ದಕ್ಷಿಣ ಕನ್ನಡಕ್ಕೆ ಭೇಟಿ ಕೊಟ್ಟದ್ದನ್ನೆ ಕಾರಣವಾಗಿಟ್ಟುಕೊಂಡು ಅದರ ಸುತ್ತ ಈ ಎರಡು ಕಾದಂಬರಿಗಳ ಬರವಣಿಗೆ ನೆಡೆದಿದೆ. ಒಬ್ಬರು ಹೊಸ ತಲೆಮಾರಿನ ಬರಹಗಾರರು, ಮತ್ತೊಬ್ಬರು ಹಳೆಯ ತಲೆಮಾರಿನ ಬರಹಗಾರರು ಸ್ವಾತಂತ್ರ್ಯ ಪೂರ್ವದ ಅಥವಾ ಸ್ವಾತಂತ್ರ್ಯ ಹೋರಾಟ ಕಾಲದ ವಸ್ತುವನ್ನು ಶತಮಾನದಂಚಿನಲ್ಲಿ (ಹೊಸ ಶತಮಾನದ ಆರಂಭದಲ್ಲಿ) ಕಾದಂಬರಿಗೆ ಆಯ್ಕೆ ಮಾಡಿಕೊಂಡಿರುವುದೇ ಕುತೂಹಲವನ್ನು ಹುಟ್ಟಿಸುತ್ತದೆ. ಯಾಕೆಂದರೆ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಒತ್ತಡದಂತಹ ನವವಸಾಹತುಶಾಹಿ ಸಂಸ್ಕೃತಿಯ ಗುಲಾಮತನದಿಂದ ಹೊರಬರಲು ಗಾಂಧಿ ಹಾಕಿಕೊಟ್ಟ ಮಾರ್ಗ ಸೂತ್ರಗಳೇ ಸರಿಯಾದವು ಎಂಬ ನಂಬಿಕೆ ಈ ಕಾದಂಬರಿಗಳ ವಸ್ತುವಿನ ಆಯ್ಕೆಯ ಹಿಂದೆ ಕೆಲಸ

ಮಾಡಿರಬಹುದೇ ಎಂಬ ಅನುಮಾನ ಸಹಜವಾಗಿಯೇ ಬರುತ್ತದೆ. ಇದರೊಂದಿಗೆ ಇನ್ನೊಂದು ಅನುಮಾನವೂ ಇದೆ. ಅದೇನೆಂದರೆ ಸತ್ಯಾಗ್ರಹ, ಚಳುವಳಿ, ಮೊದಲಾದ ಭಾರತದ ಸಾಮಾಜಿಕ ಹೋರಾಟದ ಮಾರ್ಗಗಳು ಗಾಂಧಿಯ ಸೃಷ್ಟಿ. ಇಂತಹ ಮಾರ್ಗಗಳು ಇಂದಿನ ಸಾಮಾಜಿಕ ಸಂಕುಚಿತ ವಾತಾವರಣಗಳಲ್ಲಿ ಪವರ್‌ಪಾಲಿಟಿಕ್ಸ್‌ನ ಎದುರು ನಿರ್ವೀರ್ಯಗೊಂಡಿವೆ. ಅಂದರೆ ವ್ಯವಸ್ಥೆಯ ವಿಷಯದಲ್ಲಿ ನಿರಾಶೆಯಾಗಿರುವುದರೊಂದಿಗೆ, ಅದರ ವಿರುದ್ಧದ ಹೋರಾಟದಲ್ಲೂ ನಿರಾಶೆಯೇ ತುಂಬಿದೆ ಎನ್ನುವುದು. ಇದರಿಂದಾಗಿ ಸ್ವಾತಂತ್ರ್ಯಪೂರ್ವದ ಹೋರಾಟ ಭಾರತೀಯರ ಜೀವನಕ್ರಮವನ್ನು ಮೀರಿದ ಹೋರಾಟವಾಗಿತ್ತು. ಸ್ವಾತಂತ್ರ್ಯ ನಂತರದ ಇವತ್ತಿನ ಹೋರಾಟ ಪ್ರತಿಯೊಂದು ಜೀವನ ಕ್ರಮವು ಪಟ್ಟಭದ್ರ ಹಿತಾಸಕ್ತಿಯ ನೆಲೆಗಳನ್ನೇ ಹುಡುಕತೊಡಗಿರುವುದರಿಂದ, ಆ ಮೂಲಕ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಜಾತಿ-ಧರ್ಮದ ಮೂಲಕ ಸ್ಥಾಪಿಸಲು ಹೊರಟಿರುವುದರಿಂದ ನವವಸಾಹತುಶಾಹಿ ಜಾಗತೀಕರಣದ ಬಾಹುಗಳಿಂದ ನಮ್ಮನ್ನು ಆಕ್ರಮಿಸಿಕೊಳ್ಳುವುದು ಸುಲಭವೂ ಆಗಿದೆ. ಈ ಪ್ರಕ್ರಿಯೆಗೆ ಮುಂಗಾರು ಮಳೆಗೆ ಹಾತೊರೆದ ಭೂಮಿಯಂತೆಯೇ ಗಾಂಧಿಯ ನಂತರ ನಾವು ಪ್ರವರ್ತಿಸುತ್ತಾ ಬಂದಿದ್ದೇವೆ. ಆದ್ದರಿಂದಲೇ ಜೀವನಕ್ರಮಗಳ ಪರಿವರ್ತನೆ ಎನ್ನುವುದು ಆಚರಣೆಯ ನೆಲೆಯಲ್ಲಿ ಜಗತ್ತಿನ ಸಂಸ್ಕೃತಿಯನ್ನು (ಪಾಶ್ಚಾತ್ಯ ಸಂಸ್ಕೃತಿ) ಪ್ರಯೋಗಿಸುತ್ತಾ ಬಂದಿದ್ದರೆ, ನಂಬಿಕೆಯ ನೆಲೆಯಲ್ಲಿ ಸಾಂಪ್ರದಾಯಿಕ ಸಂಸ್ಕೃತಿಗೆ (ವೈದಿಕ ಸಂಸ್ಕೃತಿ) ಪ್ರತಿಕ್ರಿಯಿಸುತ್ತಾ ಅದನ್ನು ಗಟ್ಟಿಗೊಳಿಸುವಂಥ ಪ್ರವೃತ್ತಿಯನ್ನೇ ಮುಂದುವರೆಸಿಕೊಂಡು ಬರಲಾಗಿದೆ. ಈ ಎರಡೂ ಪ್ರಧಾನ ನೆಲೆಗಳು ಒಂದರ ವಿಕರ್ಷಣೆ ಮತ್ತೊಂದರ ಆಕರ್ಷಣೆಯಂತೆ ಕೆಲಸ ಮಾಡಿದೆ. ಹೊಸ ಶತಮಾನದ ಆರಂಭ ಕಾಲದ ಸ್ವದೇಶಿ ಮತ್ತು ಜಾಗತೀಕರಣದ ಬೆಳವಣಿಗೆಗಳು, ಅವುಗಳ ಹಿಂದೆ ಕೆಲಸ ಮಾಡುತ್ತಿರುವಂತಹ ಮತೀಯ ಭಯೋತ್ಪಾದನೆ ಮತ್ತು ಇದಕ್ಕೆ ವಿರೋಧವಾಗಿ ಔಷಧವೋ ಎಂಬ ಭ್ರಮೆಯಲ್ಲಿ ಬೆಳೆಯುತ್ತಿರುವ ಯುದ್ಧ ಪ್ರೀತಿ ಯಾವುದೂ ಸಹ ಈ ಆಲೋಚನೆಗಳಿಂದ ಹೊರತಾಗುಳಿದಿಲ್ಲ. ಈ ಬಗೆಯ ಸಮಸ್ಯೆಗಳಿಗೆ ಕನ್ನಡ ಕಾದಂಬರಿಗಳು ಪ್ರತಿಕ್ರಿಯಿಸುತ್ತಲೇ ಬಂದಿವೆ.



'ನಾಕನೇ ನೀರು' ಎಚ್. ನಾಗವೇಣಿಯವರ ಮೊದಲ ಕೃತಿ. ಈ ಕಥಾಸಂಕಲನದ ಮೂಲಕ ತಮ್ಮ ಬರವಣಿಗೆ ಶಕ್ತಿಯ ಸೂಚನೆಗಳನ್ನು ಮೊದಲೇ ಕೊಟ್ಟಿರುವ ನಾಗವೇಣಿ 'ಗಾಂಧಿ ಬಂದ' ಕಾದಂಬರಿಯ ಮೂಲಕ ಮಹಿಳೆಯ ಬರವಣಿಗೆಯೆಂದು ಮಾತ್ರವಲ್ಲ ಕನ್ನಡ ಕಾದಂಬರಿ ಲೋಕಕ್ಕೆ ಹೊಸ ಭರವಸೆಯನ್ನು ಮೂಡಿಸಿರುವ ಲೇಖಕಿ.

ಸುರಗಿ ಮಠದ ಸೀನಪ್ಪಯ್ಯ ಹೆಬ್ಬಾರರು ನಡೆಸುವ ಕಂಬಳದ ಸಂಭ್ರಮ ಮತ್ತು ಅದ್ರಾಮ ದ್ರೌಪದಿಯರ ನಡುವೆ ಪ್ರೇಮ ಅಂಕುರಗೊಳ್ಳುವ ವಿವರಗಳ ಮೂಲಕ ಕಾದಂಬರಿ ಆರಂಭವಾಗುತ್ತದೆ. ದ್ರೌಪದಿಯತ್ತ ಒಲಿದಿರುವ ಅನ್ಯ ಧರ್ಮದ ಅದ್ರಾಮ, ಹೆಬ್ಬಾರರಿಗೆ ಸುರಗಿ ಮಠ ತಲೆ ತಲಾಂತರಗಳಿಂದ ಬೆಳೆಸಿ ಉಳಿಸಿಕೊಂಡು ಬಂದಿರುವ ಸನಾತನ ಸಂಪ್ರದಾಯದ ಕೋಟೆಗೆ ಬಿಲ ತೋಡುತ್ತಿರುವವನಂತೆ ಕಾಣುತ್ತಾನೆ. ತಮ್ಮ ಮಗಳ ಬಯಕೆಗಳನ್ನು ಕೆಣಕುತ್ತಿರುವ ಅದ್ರಾಮನನ್ನು ಮುಗಿಸಿಬಿಡಲು ಯೋಚಿಸುತ್ತಾರೆ ಹೆಬ್ಬಾರರು. ಅದ್ರಾಮ ದ್ರೌಪದಿಯನ್ನು

ಮನದನ್ನೆಯಾಗಿ ಮಾಡಿಕೊಳ್ಳ ಬಯಸಿರುವ ವಿಷಯವನ್ನು ಮಾರಪ್ಪ ಮತ್ತು ಕಾರ್ನಾಡರಿಗೆ ತಿಳಿಸಿದರೆ ಹೇಗೆ ಎಂದು ಯೋಚಿಸುತ್ತಾ ತಳಮಳಕ್ಕೊಳಗಾಗುತ್ತಾರೆ.

ಮಾರಪ್ಪ ಸಹ ಕಾರ್ನಾಡರ ಭಾಷಣದಿಂದ ಪ್ರಭಾವಿತನಾಗಿ ವಿಧವೆಯೊಬ್ಬಳ ಕೈಹಿಡಿದು ಬಾಳು ಕೊಡಬೇಕೆಂದು ಯೋಚಿಸುತ್ತಿರುವಾಗ 'ಶಿಖಂಡಿ' ಎಂದು ಪರಿಹಾಸ್ಯಕ್ಕೊಳಗಾಗಿರುವ ಸುಂದರಿ ದಾರು ಮಾನಪ್ಪನ ಮಾನಸಿಕ ವಲಯವನ್ನು ಪ್ರವೇಶಿಸುತ್ತಾಳೆ.

ಅದ್ರಾಮ ಕಂಗಿಲ ಕುಣಿತದವರ ಜೊತೆಯಲ್ಲಿ ವೇಷ ಧರಿಸಿ ಬಂದು ದ್ರೌಪದಿಯನ್ನು ಬೇಟಿಯಾಗಿ ಹೋದಮೇಲೆ ದ್ರೌಪದಿ ಆತನಿಗಾಗಿ ಕಾಯುತ್ತಾಳೆ. ಕಾರ್ತೆಟ್ ಆಟಿ ತಿಂಗಳು ಕಳೆದು ಬಂದ ಶ್ರಾವಣ ಮಾಸದಲ್ಲಿ ಗಾಂಧಿ ಬರುತ್ತಾರೆ. ಗುತ್ತಿನೊಡೆಯರು, ಮಂಜಪ್ಪ, ಅಂತಪ್ಪೂಜಾರಿ ಮೊದಲಾದವರಿಗೆ ಮುಕುಳಿಯಲ್ಲಿ ಮೂರು ಮುದ್ದೆ ಮಾಂಸವಿರದ ಗಾಂಧಿಯನ್ನು ಕಂಡು ಆಶ್ಚರ್ಯವಾಗುತ್ತದೆ.

ಈ ಕಾದಂಬರಿ ಹೆಬ್ಬಾರರ ಸುರಗಿಮಠದ ಬಂಧಿಖಾನೆಯಿಂದ ಬಿಡಿಸಿಕೊಂಡು ಅದ್ರಾಮನನ್ನು ವರಿಸಿ ಅವನ ಜೊತೆಗೆ ಬದುಕಿ ಅವನ ಸಾವಿನ ನಂತರ ಮತ್ತೆ ವಿಧವೆಯಾದ ದ್ರೌಪದಿ ಗಾಂಧಿಯ ಭೇಟಿಯ ಮೂಲಕ ಮುತ್ತೈಸಿಯಾಗುವ ತನಕ ಬೆಳೆದಿದೆ. ಅದ್ರಾಮ-ದ್ರೌಪದಿಯರ ಪ್ರೇಮಕಥೆ, ಮಾರಪ್ಪ-ದಾರುವಿನ ಬದುಕಿನ ಬದಲಾವಣೆಗಳು, ಸ್ವಾತಂತ್ರ್ಯ ಹೋರಾಟ, ಅಳಿಯಕಟ್ಟು ಸಂಸ್ಕೃತಿಯ ಬಂಟರ ಜೀವನ ಕ್ರಮಗಳೊಂದಿಗೆ ಬೆಳೆಯುತ್ತಾ ಹೋಗುತ್ತದೆ. ಕೊರಗರು, ಮುಗೇರರು ಮೊದಲಾಗಿ ದಕ್ಷಿಣ ಕನ್ನಡ ಜಿಲ್ಲೆಯ ಶೂದ್ರ ವರ್ಗದ ಜೀವನ ವಿಧಾನಗಳನ್ನು ಬಿಚ್ಚಿಡುತ್ತದೆ. ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಬ್ರಾಹ್ಮಣ ವರ್ಗದ ಬಿಗಿಹಿಡಿತದಿಂದ ಕೆಳವರ್ಗಗಳು ನಿಧಾನಗತಿಯಲ್ಲಿ ಬಿಡಿಸಿಕೊಳ್ಳು ತ್ತಿರುವುದನ್ನು, ಅಂಥ ಹಿಡಿತದ ವಿರುದ್ಧ ತಮ್ಮ ಪರಿಮಿತಿಯಲ್ಲೇ ಸ್ವಾತಂತ್ರ್ಯವನ್ನು ಕಂಡುಕೊಳ್ಳಲು ಪ್ರಯತ್ನಿಸುವ ಹೆಬ್ಬಾರರ ದುಡಿಮೆಯ ಆಳುಗಳ ಪ್ರಯತ್ನವನ್ನು ಹಾಗೆ ಬಿಡಿಸಿಕೊಳ್ಳಲಾಗದೆ ಪಾರಂಪರಿಕವಾಗಿ ಶೋಷಣೆಯನ್ನು ಒಪ್ಪಿಕೊಂಡು ಬಂದಿರುವ ಐತುವಿನಂಥವರ ತೊಳಲಾಟವನ್ನು ಚಿತ್ರಿಸುತ್ತದೆ. ಸನಾತನ ಧರ್ಮದ ಭದ್ರಕೋಟೆಯಾಗಿರುವಂತೆ ಊಳಿಗಮಾನ್ಯ ವ್ಯವಸ್ಥೆಯ ಭದ್ರಕೋಟೆಯೂ ಆಗಿರುವ ಹೆಬ್ಬಾರರ ಮುಷ್ಠಿಯಿಂದ ಬಿಡಿಸಿಕೊಳ್ಳುವ ಪ್ರಕ್ರಿಯೆ ಅಂತಪೂಜಾರಿ, ಕೂಸಾಮ್ಮೆಲಿಯರಂಥವರ ಮೂಲಕ ಕಾಣಿಸುತ್ತದೆ. ಈ ಎಲ್ಲಾ ಬೆಳವಣಿಗೆಗಳನ್ನು ಸರಳವಾಗಿ ಹೀಗೆ ಗುರ್ತಿಸಬಹುದು-

ಒಂದು : ಗಾಂಧಿಯ ಮೊದಲ ಆಗಮನದವರೆಗಿನ ನರಹರಿಯ ಸಾವು-ಕಂಬಳ-ಅದ್ರಾಮ ಮತ್ತು ಸುರಗಿಮಠದ ಸಂಬಂಧ ದ್ರೌಪದಿಯೊಡನೆ ಪ್ರೇಮವಾಗಿ ಮಾರ್ಪಡುವ ವಿವರಗಳು.

ಎರಡು : ಗಾಂಧಿಯ ಎರಡನೆ ಬಾರಿಯ ಆಗಮನ ಮತ್ತು ಆನಂತರದ ಸುಂದರಿ ದಾರುವಿನ ಪ್ರಸಂಗ, ಹೆಬ್ಬಾರರ ದುಡಿಮೆಯ ಆಳುಗಳಲ್ಲಿ ಆಗಿರುವ ಬದಲಾವಣೆ, ಗಾಂಧಿಯನ್ನು ನೋಡಬಂದ ವಿಪ್ರರ ಪಡೆಯ ಪ್ರತಿಕ್ರಿಯೆಗಳು, ಮಾರಪ್ಪನ ಮದುವೆ-ಖಾದಿಪ್ರಚಾರ, ಗುತ್ತಿನೊಡೆಯರ ಪ್ರಯತ್ನದಲ್ಲಿ ದ್ರೌಪದಿ-ಅದ್ರಾಮರ ಮದುವೆಯ ಬೆಳವಣಿಗೆಗಳು.

ಮೂರು : ಗಾಂಧಿಯ ಮೂರನೆ ಆಗಮನ-ಅದ್ರಾಮನ ಸಾವಿನ ನಂತರದ ಬೆಳವಣಿಗೆ.

ಇದರೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ವೈಶಿಷ್ಟ್ಯಗಳಾದ ಕಂಬಳ, ಭೂತದಕೋಲ,

ಬೆಸ್ತರ ಕೂಟದ ಜಾರಂದಾಯನೇಮ, ಕದಿರಹಬ್ಬ, ಪುದ್ದರು ಹಬ್ಬ (ಬ್ರಾಹ್ಮಣರ ಹೊಸ್ತೂಟ) ಪುಯಿಂತೆಲ ತಿಂಗಳ ಮಕರಮಾಸದ ವಿಶೇಷ, ಪೊಂಬೂರು ಜಾತ್ರೆಯಪ್ರಸಂಗ, ಆಟಿಕಳಂಜ, ಕೋಳಿಕಲ್ಲ, ಕಂಗಿಲ ಕುಣಿತ, ಸತ್ತನಂತರದ ಸಂಸ್ಕಾರ ವಿವರಗಳಾದ ಬೂದ್ಯೊಪ್ಪ ಹಾಗೂ ಬೊಜ್ಜ ಮೊದಲಾಗಿ ಅದ್ರಾಮ-ದ್ರೌಪದಿಯರ ತಳಮಳಗಳ ಜೊತೆ ಜೊತೆಯಲ್ಲಿಯೇ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸುತ್ತವೆ. ಹೀಗೆ ದಕ್ಷಿಣ ಕನ್ನಡ ಜಿಲ್ಲೆಯು ಗಾಂಧಿಯ ಆಗಮನದೊಡನೆ ಜೀವ ಪಡೆದುಕೊಳ್ಳುವಂತೆ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಪರಿಸರವೂ ತನ್ನಿಂದತಾನೇ ಜೀವ ಪಡೆದು ಕಾದಂಬರಿಯುದ್ದಕ್ಕೂ ಬೆಳೆದು ನಿಂತಿದೆ. ಈ ಮೂಲಕ ಅಲ್ಲಿನ ಸಮಾಜ ವ್ಯವಸ್ಥೆಯ ಕಟ್ಟುಪಾಡುಗಳು, ನಂಬಿಕೆಗಳು, ಆಚರಣೆಗಳು, ಅರ್ಥವ್ಯವಸ್ಥೆ ಎಲ್ಲವನ್ನು ಒಳ ವಿವರಗಳಿಂದ ಕಟ್ಟಿಕೊಡುತ್ತದೆ. ಇಲ್ಲಿನ ಪ್ರತಿಯೊಂದು ವಿವರಗಳಿಗೂ ಒಂದು ಸಾಂಸ್ಕೃತಿಕ ಚೌಕಟ್ಟು, ತನ್ನಿಂದ ತಾನೇ ನಿರ್ಮಾಣಗೊಂಡಿದೆ.

ಇಷ್ಟೆಲ್ಲ ವಿವರಗಳನ್ನಿಟ್ಟುಕೊಂಡು ತಾಳ್ಮೆಯಿಂದ ಕಥೆಯನ್ನು ಹೇಳುವ ರೀತಿ ಅನನ್ಯವಾಗಿದೆ. ಕಾರಂತ, ಕುವೆಂಪು, ಮಹಾದೇವರಂಥ ಲೇಖಕರನ್ನು ನೆನಪಿಸುವ ಅಚ್ಚರಿ ಇಲ್ಲಿದೆ. ವೇಗವಾಗಿ ಬೆಳೆಯುತ್ತಿರುವ ತಾಂತ್ರಿಕ ಸಮಾಜಗಳ ವ್ಯವಹಾರಗಳ ಎದುರಿನಲ್ಲಿ ಒಂದು ಗಳಿಗೆ ನಿಲ್ಲಿಸಿ ನೋಡುವಂತೆ, ಆಲೋಚಿಸುವಂತೆ ಮಾಡುವ ಇಲ್ಲಿನ ನಿರೂಪಣಾಕ್ರಮ ಅಸದೃಶವಾಗಿದೆ. ನಿರರ್ಗಳವಾಗಿ ಜೀವತಳೆಯುವ ಭಾಷೆ, ನುಡಿಗಟ್ಟುಗಳು, ಗಾದೆಗಳು ನಮ್ಮ ಆಲೋಚನೆಗಳನ್ನೇ ಬದಲಿಸಿಬಿಡುವ ಶಕ್ತಿಯನ್ನು ಹೊಂದಿವೆ. ಕಳೆದ ಶತಮಾನದುದ್ದಕ್ಕೂ ನಡೆದ ಅನೇಕ ಚಿಂತನಾಕ್ರಮಗಳ ಒತ್ತಡಗಳಿಂದ ನರಳುತ್ತಿರುವ ಕನ್ನಡ ಸಾಹಿತ್ಯ-ಸಾಂಸ್ಕೃತಿಗೆ ಬಿಡುಗಡೆಯ ನಿಟ್ಟುಸಿರಿನಂತೆ ಈ ಕಾದಂಬರಿ ಕಾಣುತ್ತದೆ. ಎಲ್ಲ ಇಸಂಗಳನ್ನು ಮೀರುವ ಶಕ್ತಿಯಿದ್ದಾಗ ಸೃಜನಶೀಲತೆ ಹೇಗೆ ಅರಳಬಲ್ಲದೆಂಬುದಕ್ಕೆ 'ಗಾಂಧಿ ಬಂದ' ಕಾದಂಬರಿ ಈ ಕಾಲದ ಉತ್ತಮ ಉದಾಹರಣೆ. ಅಂಥಾ ಮುಗ್ಧತೆ ಇಲ್ಲಿನ ನಿರೂಪಣಾ ಕ್ರಮ ಮತ್ತು ವಿವರಗಳೆರಡರಲ್ಲೂ ಎದ್ದುಕಾಣುವ ಅಂಶವಾಗಿದೆ. ಇದರಿಂದಾಗಿ ಇಸಂ ಆಗಿ ಬೆಳೆದುಬಿಟ್ಟಿರುವ ಗಾಂಧಿ ಸಹ ಈ ಕಾದಂಬರಿಯ ಮುಗ್ಧ ಜಗತ್ತಿನೊಳಗೆ ವ್ಯಾಪಿಸಿಕೊಂಡಿರುವುದನ್ನು ಕಾಣಲು ಸಾಧ್ಯವಾಗಿದೆ. ವೈಚಾರಿಕತೆಯನ್ನು ಮೀರಿದ ಇಂಥ ಪ್ರಬಲವಾದ ಮುಗ್ಧತೆಗೆ ಮಾತ್ರ ಜೀವನದ ಯಾವುದೇ ಒತ್ತಡಗಳನ್ನು ಎದುರಿಸಿ ನಿಲ್ಲುವ ಶಕ್ತಿಯಿದೆ ಎಂಬುದನ್ನು ಈ ಕಾದಂಬರಿ ತೋರಿಸುತ್ತದೆ. ಇಲ್ಲಿನ ಸ್ವಾತಂತ್ರ್ಯ ಹೋರಾಟ ಮತ್ತು ಶತಮಾನಗಳಿಂದ ಬೇರು ಬಿಟ್ಟಿರುವ ಜಾತಿ-ಧರ್ಮ ಮೂಲವಾದ ಹೋರಾಟಗಳು ಸಹ ಇದನ್ನೇ ಪ್ರತಿನಿಧಿಸುತ್ತವೆ. ಈ ಬರವಣಿಗೆಯ ಮೊದಲಲ್ಲೇ ಹೇಳಿರುವಂತೆ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಮಾಹಿತಿ ತಂತ್ರಜ್ಞಾನ ವಿಚಾರಗಳು ವಿಶೇಷತೆಯನ್ನು ಪಡೆದುಕೊಳ್ಳುತ್ತಿರುವ ಈ ಸಂದರ್ಭದ ಒತ್ತಡಗಳನ್ನು ಪ್ರಾದೇಶಿಕ ಸಾಂಸ್ಕೃತಿಕ ವಿವರಗಳ ಮೂಲಕ ಆಲೋಚಿಸಲು ಇಂಥ ಬರಹಗಳು ದಾರಿ ತೋರಬಹುದೇ, ಯೋಚಿಸಬೇಕಾಗಿದೆ. ಈ ನಿಟ್ಟಿನಲ್ಲಿ ಈ ಕೃತಿಯಲ್ಲಿ ಸ್ವಾತಂತ್ರ್ಯ ಪಡೆದುಕೊಂಡ ಸಂದರ್ಭ ಮುಖ್ಯವಾಗದೆ ಇರುವುದು ಕಾದಂಬರಿಯ ಕಥಾ ಹಂದರದಿಂದ ಪ್ರತ್ಯೇಕವಾಗಿ ಬಿಡುತ್ತದೆ ಎಂಬ ಕಾರಣಕ್ಕಲ್ಲ ಎಂಬುದನ್ನು ಊಹಿಸಬಹುದಾಗಿದೆ. ಅದೇ ಈ ಕೃತಿಯ ಮಹತ್ವದ ವಿಚಾರವೂ ಆಗಿದೆ ಅನಿಸುತ್ತದೆ. ಹೀಗೆ ಸ್ವಾತಂತ್ರ್ಯಪೂರ್ವದ ಕೊನೆಯ ದಶಕಗಳ ಕಾಲಮಾನವನ್ನು ಬಳಸಿಕೊಂಡು ಸ್ವಾತಂತ್ರ್ಯೋತ್ತರ ಭಾರತದ ಭಾರತೀಯ ಸಮಾಜದ ಬೆಳವಣಿಗೆಯ ದಿಕ್ಕುಗಳನ್ನು ಕಾದಂಬರಿ ಪ್ರಶ್ನಿಸುತ್ತಿರುವಂತೆ ತೋರುತ್ತದೆ.

ಹೆಜ್ಜೆ.....ವ್ಯಾಸರಾಯ ಬಲ್ಲಾಳರ ಏಳನೆಯ ಕಾದಂಬರಿ. ಈಗಾಗಲೆ ಕನ್ನಡ ಕಾದಂಬರಿ ಲೋಕದಲ್ಲಿ ಬಲ್ಲಾಳರು ಹೆಸರು ಮಾಡಿದವರು. ಪ್ರಶಸ್ತಿಗಳನ್ನು ಪಡೆದವರು. ದಕ್ಷಿಣ ಕನ್ನಡಕ್ಕೆ ಗಾಂಧಿ ಬಂದ ವಿಚಾರವನ್ನೇ ಕಾರಣವಾಗಿಟ್ಟುಕೊಂಡು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ದಕ್ಷಿಣ ಕನ್ನಡದಲ್ಲಿ ರೂಪುಗೊಂಡ ಬಗೆಯನ್ನು ವಿವರಿಸುವ ಕಾದಂಬರಿ ಹೆಜ್ಜೆ.

ಮೂವತ್ತರ ದಶಕದ ಕೊಡದೂರು ಅತ್ತ ಹಳ್ಳಿಯೂ ಅಲ್ಲದ, ಇತ್ತ ಪಟ್ಟಣವೂ ಅಲ್ಲದೆನ್ನುವಂತಹ ಬದಲಾವಣೆಗಳಿಗೆ ಒಳಗಾಗುತ್ತಿದ್ದ ಜನವಸತಿಯ ಕೇಂದ್ರ. ಸಂಸ್ಕೃತ ಮಾಣಿಗಳೆಲ್ಲ ಬದುಕುವ ದಾರಿ ಹೇಗೆಂದು ಮದರಾಸಿಗೊ, ಬೆಂಗಳೂರಿಗೊ ಓಡಾಡುತ್ತಿರುವುದರ ಜೊತೆಗೆ ನಾಲ್ಕು ಶಬ್ದ ಇಂಗ್ಲಿಷ್ ಟಿಸ್ ಪಿಸ್ ಅಂತ ಮಾತನಾಡುವುದು ಅಸಾಧಾರಣ ಸಂಸ್ಕೃತ ಜ್ಞಾನಕ್ಕೂ ಹೆಚ್ಚು ಎನ್ನುವ ತಿಳುವಳಿಕೆ ಬೆಳೆಯುತ್ತಿರುವ ಸಂದರ್ಭದ ಹಿನ್ನೆಲೆಯಲ್ಲಿ ಕಾದಂಬರಿಯ ಬರವಣಿಗೆ ನಡೆದಿದೆ.

ಗಾಂಧಿ ಹುಡುಗಿ ಸಾವಿತ್ರಿ ಶ್ರೀಕಂಠಶಾಸ್ತ್ರಿಗಳ ಮನೆಗೆ ಸೊಸೆಯಾಗಿ ಬರುವ ವಿವರಗಳೊಂದಿಗೆ ಈ ಕಾದಂಬರಿ ಆರಂಭವಾಗುತ್ತದೆ. ಸ್ವಾತಂತ್ರ್ಯ ಹೋರಾಟದ ಕಥೆಯೊಂದಿಗೆ ಬ್ರಾಹ್ಮಣ ಸಂಸ್ಕೃತಿ ತನ್ನ ಸನಾತನ ನೆಲೆಯಿಂದ ಛಿದ್ರಗೊಳ್ಳುತ್ತಾ ಆಧುನಿಕತೆಯ ಸಂಪರ್ಕಕ್ಕೆ ಹೊಂದಿಕೊಳ್ಳುತ್ತಿರುವ ಚರಿತ್ರೆಯನ್ನು ಈ ಕಾದಂಬರಿ ಸರಳ ವಿವರಗಳಲ್ಲಿ ನಿರೂಪಿಸುತ್ತದೆ.

ಶ್ರೀಕಂಠಶಾಸ್ತ್ರಿಗಳು ಊರಿಗೆ ಆಚಾರ್ಯಪುರುಷ, ಧರ್ಮ ಸಂಪ್ರದಾಯನಿಷ್ಠೆ, ನಿರ್ಭೀತತೆ, ತರ್ಕ, ವ್ಯಾಕರಣ, ನ್ಯಾಯ, ‌ೀಮಾಂಸೆ, ಜ್ಯೋತಿಷ್ಯಗಳಲ್ಲಿ ಅಸಾಧಾರಣ ಪಾಂಡಿತ್ಯ, ನಾಲ್ಕು ವೇದಗಳನ್ನೂ ಕುರಿತು ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಪ್ರತಿಭೆ. ಇವರ ನಾಲ್ಕು ಜನ ಗಂಡುಮಕ್ಕಳು ಗಂಗಾಧರ, ಶಶಿಧರ, ವಿದ್ಯಾಧರ, ಶ್ರೀಧರ, ಮಗಳು ಪಾರ್ವತಿ. ಶಾಸ್ತ್ರಿಗಳು ಗಾಂಧಿ ವಿಚಾರಗಳನ್ನು ಕಂಡರೆ ಆಗದವರು. ಗಾಂಧಿಯೆಂದರೆ ಅವರಿಗೆ ಕಲಿಪುರುಷ, ಕರ್ಮ ಚಾಂಡಾಲ, ನಮ್ಮ ಧರ್ಮವನ್ನು ಹಾಳುಮಾಡಲು ಬಂದ ರಾಕ್ಷಸ, ಹಿರಿಯ ಮಗ ಅಪ್ಪನನ್ನು ಅನುಸರಿಸಿದವ, ಎರಡನೆಯವ ಅಪ್ಪನನ್ನು ಅನುಸರಿಸಿದರೂ ಕದ್ದು-ಮುಚ್ಚಿ ಆಧುನಿಕತೆಯನ್ನು ಬೀಡಿ ಸಿಗರೇಟುಗಳ ಮೂಲಕ ಅನುಭವಿಸುವವ. ಮೂರನೆಯವ ಮಾಸ್ತರು, ನಾಲ್ಕನೆಯವನು ಇನ್ನೂ ಓದುತ್ತಿರುವ ಹುಡುಗ.

ನಾಯಕ ವಿದ್ಯಾಧರ ಸ್ವಾತಂತ್ರ್ಯ ಹೋರಾಟದೊಂದಿಗೆ ಬೆಳೆಯುತ್ತಾ ಹೋದಂತೆ-ಮದ್ರಾಸಿನಲ್ಲಿ ಕಾಂಗ್ರೇಸ್ ಸರ್ಕಾರ ಬಂದಮೇಲೆ ಆಗುತ್ತಿರುವ ಬದಲಾವಣೆಗಳು, ಶಾಸ್ತ್ರಿಗಳ ಮಗಳು ಪಾರ್ವತಿಯ ಕುಟುಂಬದ ದಾರುಣ ಘಟನೆಗಳು, ಮಕ್ಕಳಿಲ್ಲದ ಪಾವರ್ತಿಯೊಡನೆ ಬೆಳೆದಿದ್ದ ಮಾಣಿ ಸ್ವಾತಂತ್ರ್ಯ ಹೋರಾಟಕ್ಕೆ ಪಾಲುಗೊಳ್ಳುವುದು, ಸ್ವದೇಶಾಭಿಮಾನಿ, ನವಯುಗ, ಕಂಠೀರವ ಮೊದಲಾದ ಆ ಕಾಲದ ಪತ್ರಿಕೆಗಳ ಪ್ರಸ್ತಾಪ, ಮಹಾಯುದ್ಧದ ವಿವರಗಳು, ಹಿಟ್ಲರನ ಪ್ರಾಬಲ್ಯ, ದೂಜಿಯ ಸಾವು, ಊರವರಿಂದ ಶಾಸ್ತ್ರಿಗಳು ವಿದ್ಯಾನ ಬಗ್ಗೆ ಕೇಳಬೇಕಾದ ದೂರುಗಳು, ಮನೆತನದ ಮರ್ಯಾದೆಯನ್ನು ಉಳಿಸಲು ಶಾಸ್ತ್ರಿಗಳ ಹಪಾಹಪಿ ಪ್ರಯತ್ನ. ಕೊಡದೂರು-ಕೆಡದೂರುಗಳನ್ನು ಮೀರಿ ಓದು-ಹೋರಾಟಗಳ ಮೂಲಕ ತನ್ನ ತಿಳುವಳಿಕೆಯನ್ನು ವಿದ್ಯಾಧರ ವಿಸ್ತರಿಸಿಕೊಳ್ಳುತ್ತಾ ಹೋಗುವುದು. ಸುಭಾಷ್ ಚಂದ್ರರು ಜರ್ಮನಿಯ ಹಿಟ್ಲರನ ಜೊತೆಯಲ್ಲಿ ಸಖ್ಯ ಬೆಳೆಸುತ್ತಿರುವ ಯತ್ನದ ವಿವರ ಮೊದಲಾದ ಅನೇಕ ವಿಚಾರಗಳು ಪ್ರಸ್ತಾಪಗೊಳ್ಳುತ್ತವೆ. ಆದರೆ ಒಂದು ಚಿತ್ರ ಕತೆಯಂತೆ ಜೋಡಿಸಲಾಗಿರುವ ಇಲ್ಲಿನ ಅನೇಕ ವಿವರಗಳನ್ನು ನಾಯಕಿ ಸಾವಿತ್ರಿ, ನಾಯಕ ವಿದ್ಯಾಧರ ಮತ್ತು ಶಾಸ್ತ್ರಿಗಳ ಮನೆತನದ ವಿವರಗಳಿಂದ ಬೇರ್ಪಡಿಸಿಟ್ಟರೂ

ಕಥೆಯಲ್ಲಿ ಅಂಥಾ ವ್ಯತ್ಯಾಸವೇನೂ ಆಗಲಾರದು. ಯಾಕೆಂದರೆ ಸಿದ್ಧ ವೈಚಾರಿಕ ಪ್ರಜ್ಞೆಯಿಂದಲೇ ಆರಂಭವಾಗುವ ಈ ಕೃತಿಯಲ್ಲಿ ಸಹಜ ನಡೆ ಎಲ್ಲೂ ಗೋಚರಿಸುವುದಿಲ್ಲ. ಲೇಖಕರು ಓದುವ ಮುನ್ನ ಹೇಳಿರುವ.... 'ನಾವು ರಾಷ್ಟ್ರಪಿತನೆಂದು ಗೌರವಿಸುತ್ತಿರುವ ಮಹಾತ್ಮಗಾಂಧಿ ತನ್ನ ಜೀವಿತಾವಧಿಯಲ್ಲಿ ವ್ಯಕ್ತಿಯಾಗಿಯೂ, ನೈತಿಕತೆಯ ಎಚ್ಚರ ತರುವ ಶಕ್ತಿಯಾಗಿಯೂ, ಭಾರತೀಯರ ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ನಡವಳಿಕೆಗಳನ್ನು ತಟ್ಟುತ್ತ ಬಂದ ಬಗೆ, ಮುಂದೆ ಭಾರತದ ದೀರ್ಘಕಾಲದ ವರ್ತಮಾನದ ಇತಿಹಾಸ ಕಂಡುಕೊಂಡ ತಿರುವುಗಳು ಮೂಡಿಸಿದ 'ಹೆಜ್ಜೆಗಳು ಇವುಗಳಿಗೆ ಕಾದಂಬರಿಯ ರೂಪ ಕೊಡಬೇಕು' ಎನ್ನುವ ವಿಚಾರಗಳು ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಾ ಮುಂದಕ್ಕೆ ಹೆಜ್ಜೆ ಇಡಲು ಸಾಧ್ಯವಾಗದೆ ನಿಂತಲ್ಲೆ ನಿಂತು ಬಿಡುತ್ತವೆ. ಒಟ್ಟಿನಲ್ಲಿ ಸ್ವಾತಂತ್ರ್ಯೋತ್ತರ ಭಾರತ ಗಾಂಧಿಯನ್ನು-ಗಾಂಧಿಯ ತತ್ವಗಳನ್ನು ಗಾಳಿಗೆ ತೂರಿ ಕೇವಲ ಗಾಂಧಿಯ ಟೊಪ್ಪಿಯಲ್ಲಿ ಉಳಿಸಿಕೊಂಡಿರುವ ಸರಳ ಸತ್ಯವನ್ನು ಹೇಳುವಷ್ಟಕ್ಕೆ ಕಾದಂಬರಿಯ ಬರಹ ತಡಕಾಡಿಕೊಂಡಿದೆ.

ಇಬ್ಬರು ಲೇಖಕರೂ ದಕ್ಷಿಣ ಕನ್ನಡದವರೆ ಎನ್ನುವುದು ದಕ್ಷಿಣ ಕನ್ನಡಕ್ಕೆ ಗಾಂಧಿಯ ಆಗಮನ ಸಂದರ್ಭದಲ್ಲಿ ತಮ್ಮ ಕೃತಿಗೆ ಮುಖ್ಯ ಮಾಡಿಕೊಳ್ಳಲು ಆ ಮೂಲಕ ತಮ್ಮ ಉದ್ದೇಶವನ್ನು ಕೃತಿಯಾಗಿಸಲು ಕಾರಣವಿರಬಹುದು. ಆದರೆ ಒಂದೇ ಕಾಲದಲ್ಲಿ ಬೇರೆ ಬೇರೆ ತಲೆಮಾರಿನ ಲೇಖಕ-ಲೇಖಕಿಯರಿಬ್ಬರಿಗೂ ಗಾಂಧಿಯೇ ಮುಖ್ಯವಾದದ್ದು ಯಾಕೆ; ಈ ಆಯ್ಕೆಯ ಹಿಂದೆ ಕೆಲಸ ಮಾಡಿರುವ ತುರ್ತು ಯಾವ ಬಗೆಯದು ಎನ್ನುವ ಪ್ರಶ್ನೆಗಳಿಗೆ ಎರಡೂ ಕೃತಿಗಳನ್ನು ಒಟ್ಟಿಗಿಟ್ಟು ಯೋಚಿಸುವುದರಿಂದ ಗ್ರಹಿಸುವುದು ಕಷ್ಟವಲ್ಲ ಎನಿಸುತ್ತದೆ.

'ಹೆಜ್ಜೆ'ಯಲ್ಲಿ ಶ್ರೀಕಂಠಶಾಸ್ತ್ರಿಗಳು, 'ಗಾಂಧಿ ಬಂದ' ಕೃತಿಯಲ್ಲಿ ಸುರಗಿಮಠ ಸೀನಪ್ಪ ಹೆಬ್ಬಾರರು ಬ್ರಾಹ್ಮಣ ಸಂಪ್ರದಾಯದ ಸನಾತನ ಕೋಟೆಯನ್ನು ಪ್ರತಿನಿಧಿಸುತ್ತಾರೆ. ಅಲ್ಲಿ ಸಾವಿತ್ರಿ-ವಿದ್ಯಾಧರರಿದ್ದರೆ ಇಲ್ಲಿ ಅದ್ರಾಮ-ದ್ರೌಪದಿಯರಿದ್ದಾರೆ, ಒಂದುಕಡೆ ವಿದ್ಯಾಧರ ಹುತಾತ್ಮನಾದರೆ ಮತ್ತೊಂದರಲ್ಲಿ ಅದ್ರಾಮನನ್ನು ಹುತಾತ್ಮನೆಂದು ಗುರ್ತಿಸಬಹುದು. ಸಾವಿತ್ರಿ- ವಿದ್ಯಾಧನರ ಮಗಳು 'ಕಸ್ತೂರಿ' (ಗಾಂಧಿಯ ಹೆಂಡತಿಯ ಹೆಸರು)ಯಾದರೆ ದ್ರೌಪದಿ-ಅದ್ರಾಮರ ಮಗ 'ಭರತ ಕುಮಾರ'ನಾಗಿದ್ದಾನೆ. ಅಲ್ಲಿ ಶಾಂಬಲಿ ವಿಧವೆಯಾಗಿದ್ದು ನಂತರ ಅನ್ಯ ಜಾತಿಯವನನ್ನು ಮದುವೆಯಾದರೆ, ಇಲ್ಲಿ ದ್ರೌಪದಿ ವಿಧವೆಯಾಗಿದ್ದು ಅನ್ಯ ಧರ್ಮೀಯನನ್ನು ಮದುವೆಯಾದ ಚರಿತ್ರೆಯೇ ಇದೆ. ಹೀಗೆ ಮೇಲ್ನೋಟಕ್ಕೆ ಈ ಎರಡೂ ಕೃತಿಗಳಲ್ಲಿನ ಸಮಾನ ಅಂಶಗಳಂತೆ ಗುರುತಿಸಬಹುದಾದರೂ ಈ ಎರಡೂ ಕೃತಿಗಳು ಕಟ್ಟಿಕೊಡುವ ವಿಚಾರಸರಣಿ ಬೇರೆಯಾಗಿರುವುದರಿಂದ ಈ ಯಾವ ವಿವರಗಳನ್ನು ಸಮಾನ ಅಂಶಗಳೆಂದು ಪರಿಗಣಿಸುವುದು ಆ ಕೃತಿಗಳ ಗ್ರಹಿಕೆಗೆ ಅಪಚಾರ ಎಂದೇ ತಿಳಿಯಬೇಕಾಗುತ್ತದೆ.

ಹೆಜ್ಜೆ.....ಕಾದಂಬರಿ ಸಾವಿತ್ರಿ ಮತ್ತು ವಿದ್ಯಾಧರನ ಮೂಲಕ ಗಾಂಧಿಯ ಕಾಲದ ಹೋರಾಟವನ್ನು ವಿಶ್ಲೇಷಿಸಿ ನೋಡುತ್ತದೆ. ಗಾಂಧಿ ಬಂದ ಕೃತಿ ಸ್ವಾತಂತ್ರ್ಯ ಹೋರಾಟ ಮತ್ತು ದ್ರೌಪದಿ ಅದ್ರಾಮರ ಪ್ರೇಮಕಥೆಯ ಮೂಲಕ ಇಡೀ ದಕ್ಷಿಣ ಕನ್ನಡದ ಸಾಂಸ್ಕೃತಿಕ ಪರಿಸರವನ್ನು ಪುನರ್ ಸೃಷ್ಟಿಸಿಕೊಂಡು ವಿಶ್ಲೇಷಿಸಲು ಪ್ರಯತ್ನಿಸುತ್ತದೆ. ಬಲ್ಲಾಳರ ಬರಹ ಶ್ರೀಕಂಠಶಾಸ್ತ್ರಿಗಳ ಕುಟುಂಬದಲ್ಲಾಗುವ ಬದಲಾವಣೆಗಳ ಸುತ್ತ ಸುತ್ತುತ್ತದೆ. ಇಲ್ಲಿ ಲೇಖಕರ ಬೌದ್ಧಿಕ-ವೈಚಾರಿಕ ನೆಲೆಗಳು ಸಾವಿತ್ರಿ-ವಿದ್ಯಾಧರನ

ಮೂಲಕ ಹೇರಲ್ಪಟ್ಟಂತೆ ಕಾಣುವುದರೊಂದಿಗೆ ಅಲ್ಲಿನ ಸಾಮಾಜಿಕ ಪರಿಸರವನ್ನು ಅವರೇ ನಿರ್ದೇಶಿಸುವಂತೆ ಮಾಡಿದೆ. ಅಲ್ಲದೆ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಬೆಳೆದಿರುವ ರಾಜಕೀಯ ವೈಚಾರಿಕತೆಯ ಭ್ರಮನಿರಸನವನ್ನು ಗಾಂಧಿಯ ಕೊಲೆಯ ಮೂಲಕ ಈ ಕಾದಂಬರಿ ಧ್ವನಿಸುವಂತೆ ಕಾಣುತ್ತದೆಯಾದರೂ ಅದನ್ನು ಕಾದಂಬರಿಯಾಗಿಸುವ ಪ್ರಯತ್ನ ಮಾತ್ರ ಸೋತಿದೆ ಎಂದೇ ಹೇಳಬಹುದು.

ನಾಗವೇಣಿಯವರ ಕೃತಿ ವ್ಯಕ್ತಿ-ಕುಟುಂಬಗಳನ್ನು ಮೀರಿ ಜೀವನ-ಪರಿಸರದಲ್ಲಾಗುವ ಬದಲಾವಣೆಗಳನ್ನು ಚಿತ್ರಿಸುತ್ತದೆ. 'ಗಾಂಧಿಬಂದ' ಕೃತಿಯಲ್ಲಿ ಯಾವುದೇ ಬೌದ್ಧಿಕ ತಿಕ್ಕಾಟಗಳಿಗೆ ಆಸ್ಪದವೇ ಇಲ್ಲದಂತೆ ಅಲ್ಲಿನ ಇಡೀ ಸಾಂಸ್ಕೃತಿಕ ಪರಿಸರ ತನ್ನ ಪಾತ್ರಗಳನ್ನು ಬೆಳೆಸುತ್ತಾ ಸಾಗುತ್ತದೆ. ಮಲ್ಟಿನ್ಯಾಷನಾಲಿಟಿ ಸಂಸ್ಕೃತಿಯು ನಮ್ಮ ಜೀವನದ ಭಾಗವಾಗಲು ಹವಣಿಸುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಈ ಕೃತಿಯ ರಚನೆಯಾಗಿರುವುದು ವಿಶೇಷವಾಗಿ ಕಾಣುತ್ತದೆ. ಯಾಕೆಂದರೆ ಜಾತಿ, ಧರ್ಮ ರಾಜಕಾರಣದ ಹೋರಾಟಗಳು, ಪ್ರಾದೇಶಿಕವಾದ ಸಾಮಾಜಿಕ ಆರ್ಥಿಕ-ಹೋರಾಟಗಳನ್ನು ನಿಷ್ಕ್ರಿಯಗೊಳಿಸುತ್ತಿರುವ ಅಥವಾ ಇಲ್ಲದಂತೆಯೇ ಮಾಡಲು ಯತ್ನಿಸುತ್ತಿರುವ ಶಕ್ತಿರಾಜಕಾರಣದ ಭಾಗವಾಗಿವೆ. ಹೀಗಾಗಿ ಸಮಕಾಲೀನ ಸಾಮಾಜಿಕ ಪರಿಸರದೊಂದಿಗಿನ ನಮ್ಮ ಸ್ವಾತಂತ್ರ್ಯ ಸಹ ಕಾನೂನು ಸಮರವಾಗಿ ಪರಿವರ್ತನೆಗೊಳ್ಳುತ್ತಿದೆ. ಇಂಥ ಒತ್ತಡಗಳಿಂದ ಬಿಡುಗಡೆಯ ಸಾಧ್ಯತೆಗಳನ್ನು ಈ ಕೃತಿಯು ಶೋಧಿಸುತ್ತಿದೆ ಎನಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾರತೀಯರ ಸಾಂಸ್ಕೃತಿಕ ಹೋರಾಟದ ದಾರಿಯಾದ ಗಾಂಧಿಯ ನೇತೃತ್ವದ ಸ್ವಾತಂತ್ರ್ಯ ಹೋರಾಟವು ಕಾದಂಬರಿಯ ಬೆನ್ನಿಗೆ ನಿಂತಿರುವುದನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

■


ಡಾ|| ಜಿ. ಕೃಷ್ಣಪ್ಪನವರ ಕಾವ್ಯವಿಮರ್ಶೆ 'ಹೂತsದ ಹುಣಸಿ'

■ *ವೀರೇಂದ್ರ ಸಿಂಪಿ*

ಡಾ|| ಜಿ. ಕೃಷ್ಣಪ್ಪನವರ 'ಹೂತsದ ಹುಣಸಿ'ಯಲ್ಲಿ ಬೇಂದ್ರೆಯವರ ಹದಿಮೂರು ಕವನಗಳ ಪ್ರಾಯೋಗಿಕ ವಿಮರ್ಶೆಯಿದೆ. ವರಕವಿ ಬೇಂದ್ರೆ ಕಾವ್ಯದ ಅಭಿಮಾನಿಗಳೂ ಆರಾಧಕರೂ ಅಧ್ಯಯನಶೀಲರೂ ಆದ ಜಿ. ಕೃಷ್ಣಪ್ಪನವರಿಗೆ ಬೇಂದ್ರೆ ಕಾವ್ಯದ ವಿಮರ್ಶೆ ಮಾಡಲು ಬೇಕಾದ ಕೆಲವು ಅರ್ಹತೆಗಳಿವೆ. ಒಂದನೆಯದಾಗಿ ಅವರು ನಿರಂತರ ಅಧ್ಯಯನಶೀಲರು, ಎರಡನೆಯದಾಗಿ ಅವರು ಬಹುಶ್ರುತರು ಸೂಕ್ಷ್ಮ ಸಂವೇದನಾಶೀಲರು, ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನೆಲ್ಲ ಕರತಲಾಮಲಕಗೊಳಿಸಿ ಕೊಂಡವರು. ಉತ್ತರ ಕರ್ನಾಟಕ ಜಾನಪದ ನುಡಿಗಟ್ಟನ್ನು ಬಹು ಶ್ರದ್ಧೆಯಿಂದ ತಿಳಿದುಕೊಂಡವರು. ಎಲ್ಲಕ್ಕಿಂತಲೂ ಹೆಚ್ಚಾಗಿ ಅವರು ಕನ್ನಡ ಕಾವ್ಯ ಪರಂಪರೆಯನ್ನು ಅಭ್ಯಸಿಸಿ, ಅದರಲ್ಲಿ ಬೇಂದ್ರೆ ಕಾವ್ಯದ ಸ್ಥಾನವನ್ನು ಗುರುತಿಸಿದವರು ಅದರಲ್ಲೂ ಬೇಂದ್ರೆ ಕಾವ್ಯದಲ್ಲಿ ಸ್ತ್ರೀಯ ಕುರಿತು ಪ್ರಬುದ್ಧ ಪ್ರೌಢ ಪ್ರಬಂಧ ರಚಿಸಿದವರು ಹೀಗಾಗಿ ಬೇಂದ್ರೆಯವರ ಕಾವ್ಯದ ಕುರಿತ ಇಲ್ಲಿಯವರೆಗಿನ ಎಲ್ಲ ವಿಮರ್ಶಕರ ವಿಮರ್ಶೆಯ ಮಧ್ಯೆ ಜಿ. ಕೃಷ್ಣಪ್ಪನವರ ಕಾವ್ಯ ವಿಮರ್ಶೆಗೆ ತುಂಬ ವಿಶಿಷ್ಟ ಸ್ಥಾನವಿದೆ.

ಪ್ರಥಮವಾಗಿ ಜಿ. ಕೃಷ್ಣಪ್ಪನವರ ವಿಮರ್ಶೆಯಲ್ಲಿ ಬೌದ್ಧಿಕ ಕಸರತ್ತಿಗಿಂತಲೂ ಸೂಕ್ಷ್ಮ ಸಂವೇದಿಯಾದ ಪರಿಪಕ್ವ ಭಾವಕೋಶದ ಸಾಹಸ ಯಾತ್ರೆಯಿದೆ. ಅಂತೆಯೇ ಅವರು ಬೇಂದ್ರೆಯವರ 13 ಕವನಗಳ ಪ್ರತಿಸಾಲಿನ ಶಬ್ದ ಜಾಲಾಡಿಸಿ ನೋಡಿದ್ದಾರಲ್ಲದೆ ಅವುಗಳ ಶಬ್ದಶಃ ಅರ್ಥದೊಂದಿಗೆ ಸೂಚ್ಯಾರ್ಥ, ಧ್ವನ್ಯಾರ್ಥಗಳನ್ನೂ ಒದಗಿಸಿದ್ದಾರೆ. ಅದರಂತೆ ಇಡಿಯಾಗಿ ಆಯಾ ಕವನದ ಒಟ್ಟಾರ್ಥವನ್ನು ತೀರಾಸಾಮಾನ್ಯ ವಾಚಕರಿಗೂ ತಿಳಿಯುವಂತೆ, ಕ್ಲಿಷ್ಟ ವಿಮರ್ಶೆಯ ಪರಿಭಾಷೆಯಿಂದ ಮುಕ್ತವಾದ ಭಾಷೆಯಲ್ಲಿ ವಿವರಿಸಿದ್ದಾರೆ. ಓದುಗನ ಕೈಹಿಡಿದು ಒಂದೊಂದು ಪದದ ಅರ್ಥ ಹೇಳುತ್ತ ಚರಣದ ಒಟ್ಟಾರ್ಥವನ್ನು ಕ್ರೋಢೀಕರಿಸುತ್ತ, ಅಲ್ಲಲ್ಲಿ ನಿಂತು ಆಯಾ ಕವನದ ಭಾವ ಸ್ವಾರಸ್ಯವನ್ನು ವಿವರಿಸುತ್ತ, ವಿಶ್ಲೇಷಿಸುತ್ತ, ಕವನದ ಕೇಂದ್ರ ಆಶಯವನ್ನು ವಿಶದೀಕರಿಸುತ್ತ ಹೋಗುವ ಕೃಷ್ಣಪ್ಪನವರ ವಿಮರ್ಶಾಪದ್ಧತಿ ಎಂಥ ಸಾಮಾನ್ಯ ಓದುಗನ ಅಷ್ಟೇ ಏಕೆ ಪಂಡಿತನ ಮೆಚ್ಚುಗೆಯನ್ನು ಗಳಿಸುವಲ್ಲಿ ಸಾರ್ಥಕತೆಯನ್ನು ಪಡೆದಿದೆ.

'ಹೂತsದ ಹುಣಸಿ' ಕವನ ಕೃಷ್ಣಪ್ಪನವರ ದೃಷ್ಟಿಯಲ್ಲಿ ಪೂರ್ಣ ದೃಷ್ಟಿದರ್ಶನದ ಕಾವ್ಯವಾಗಿದೆ. ಮತ್ತೆ ಈ ಕವನದಲ್ಲಿ ಬರುವ ಚರಾಚರ



ಹೂತsದ ಹುಣಸಿ
(ದ.ರಾ. ಬೇಂದ್ರೆ ಕಾವ್ಯ ವಿಮರ್ಶೆ)
ಡಾ|| ಜಿ. ಕೃಷ್ಣಪ್ಪ
ಪ್ರಕಾಶಕರು : ಶ್ರೀರಂಗ ಪ್ರಕಾಶನ, ಮೈಸೂರು,
ಬೆಲೆ : ರೂ. 50/-
ಪುಟಗಳು : xvi + 120

ವಸ್ತುಗಳ ಮೌನ ಸಂವಾದವನ್ನು ಸೂಕ್ಷ್ಮ ದೃಷ್ಟಿಯಿಂದ ವಿವರಿಸಿದ್ದಾರೆ. 'ಬ್ಯಾಸಿಗಿ ಹೊಡೆದದ ಬಿಸಿಲಿನ ಡೇರೆಯ', ರೂಪಕದಲ್ಲಿಯ ನವೀನತೆಯನ್ನು ಬಿಚ್ಚಿ ತೋರಿಸಿದಂತೆ, ಜೀವನದಲ್ಲಿ ರಾಡಿಯನ್ನೂ ಪ್ರೇಮದ ಮೋಡಿಯನ್ನೂ ಏಕಕಾಲಕ್ಕೆ ಬೇಂದ್ರೆಯವರು ತೋರಿಸಿದ್ದು ಸಮಗ್ರ ದೃಷ್ಟಿಯ ದ್ಯೋತಕವೆಂದು ಬಣ್ಣಿಸಿದ್ದಾರೆ. ಹೀಗೆ ಜಿ. ಕೃಷ್ಣಪ್ಪನವರು ಕಾವ್ಯದ ಅರ್ಥ ವಿವರಣೆಯ ವಿಮರ್ಶಕರಾಗುವುದರ ಜೊತೆಗೆ ಕಾವ್ಯದ ಒಳನೋಟಗಳನ್ನು ಬಿಚ್ಚಿತೋರಿಸುವ ವಿಮರ್ಶಕರೂ ಆಗಿದ್ದಾರೆ.

'ಜೋಗಿ' ಈಗಾಗಲೇ ಹಲವು ವಿಮರ್ಶಕರಿಂದ ವಿಮರ್ಶೆಗೆ ಒಳಪಟ್ಟ ಕವನ. ಅದು ಪರಮಾತ್ಮನನ್ನು ಅರಿಯಲು ಕವಿ ಮಾಡಿದ ಪ್ರಯತ್ನವೆಂದು ಹೇಳುವಲ್ಲಿ ಜಿ. ಕೃಷ್ಣಪ್ಪನವರ ವಿಮರ್ಶೆಯ ಅನನ್ಯತೆಯಿದೆ. 'ಕೋಗಿಲೆ ಜೋಗಿಗೆ ಕರೆದಂತೆ' ಎನ್ನುವ ಭಾಗ ಜಿ. ಕೃಷ್ಣಪ್ಪನವರಿಗೆ ಕನ್ನಡ ಕಾವ್ಯಪರಂಪರೆಯ ಒಂದು ಅತ್ಯುತ್ತಮ ಮಾದರಿಯಾಗಿ ಕಂಡಿದೆ 'ಬಂತು ಸುಗ್ಗಿ ಬಂದಾದ ಸುಗ್ಗಿ ಬರತಾದ ಸುಗ್ಗಿ'ಯ ವಿವಿಧ ಕ್ರಿಯಾಪದಗಳ ಬಳಕೆಯಲ್ಲಿ ಕೃಷ್ಣಪ್ಪ ಕನ್ನಡ ವಿಮರ್ಶಕರ ಭಾಷಾ ಶಾಸ್ತ್ರದ ವಿಮರ್ಶಾ ವಿಧಾನವನ್ನೇ ಮುಂದುವರೆಸಿದ್ದಾರೆ. 'ಮನದ ಕೋಗಿಲೆ ಓಂ ಕುಹೂ' ಎಂದಾಗ ಮೈಯಾದ ಮಾಮರ ಜುಮ್ಮೆಂದಿದೆ ಎನ್ನುವ ಮಾತು ಓದುಗನನ್ನು ಜುಮ್ಮೆನ್ನಿಸದೆ ಬಿಡುವದಿಲ್ಲ 'ಕಾಳಮ್ಮನಿಗಿರುವ ಹೊಲದ ಉಲ್ಲೇಖ ಮಾಡುವಾಗ ಅದು ಇಲ್ಲಿಯವರೆಗೆ ಅನ್ಯವಿಮರ್ಶಕರಿಂದ ಅಲಕ್ಷಿಸಲ್ಪಟ್ಟ ಉಪಸಂಸ್ಕೃತಿಯ ವಿವರವಾಗಿದೆ. ಕವಿ ಕವಿತೆ ಕಟ್ಟುವ ಹಾದಿ ಸಂಯೋಜನೆಯ ಹಾದಿಯಾದರೆ, ವಿಮರ್ಶಕನ ಹಾದಿ ವಿಶ್ಲೇಷಣೆಯ ಹಾದಿಯೆನ್ನುವದು ಜಿ. ಕೃಷ್ಣಪ್ಪನವರ ವಿಮರ್ಶೆ ಓದಿದಾಗ ಮತ್ತೊಮ್ಮೆ ಸ್ಪಷ್ಟವಾಯಿತು.

ಜಿ. ಕೃಷ್ಣಪ್ಪನವರ ವಿಮರ್ಶೆ ಅರ್ಥ, ವಿವರಣೆಯ ವಿಮರ್ಶೆ. ಅಂತೆಯೇ 'ಸಣ್ಣಾ ಸೋಮವಾರ'ದಲ್ಲಿ ಎಪ್ಪತ್ತು ವರ್ಷದ ಕವಿ ತನ್ನ ಬಾಲ್ಯದ ನೆನಪು ಮಾಡಿಕೊಳ್ಳುತ್ತಿರುವ 'ನೋಸ್ಟಾಲ್ಜಿಯಾ' ಭಾವವನ್ನು ವ್ಯಕ್ತಪಡಿಸುತ್ತದೆ. ಈ ಚಿಕ್ಕಂದಿನ ಅನುಭವದ ನಿರೂಪಣೆ ಕವನದ ಮುಂದಿನ ಭಾಗದಲ್ಲಿ ಅನುಭಾವವಾಗಿ ಪರಿಣಮಿಸಿದ್ದನ್ನು ವಿಮರ್ಶಕ ಎತ್ತಿತೋರಿಸುತ್ತಾರೆ. ಶಾಲ್ಮಲಿ ಗಂಗಾವಳಿಯಾಗುವ ಭಾಗ ವಿಮರ್ಶಕರ ಕಣ್ಣಿಗೆ ಭವ್ಯರೂಪಕವಾಗಿದೆ. ಹೀಗೆ ಕೃಷ್ಣಪ್ಪನವರು ಕವನದ ಬಿಡಿ ಬಿಡಿ ಭಾಗಗಳ ಸ್ವಾದ ಸವಿಯುತ್ತಿದ್ದಂತೆ ಅದರಲ್ಲಿ ಒಡಮೂಡಿದ ಕೇಂದ್ರ ವಸ್ತುವನ್ನು ಮರೆಯಲಾರರು.

'ನಾಕು ತಂತಿ'ಉಳಿದ ವಿಮರ್ಶಕರಿಗೆ ಕಬ್ಬಿಣದ ಕಡಲೆಯಾಗಿದೆ. ಆದರೆ ಅದನ್ನು ಒಪ್ಪಿಕೊಳ್ಳದೆ ಅವರು ಕವಿ ಬೇಂದ್ರೆಯವರ ಮೇಲೆ ಶಬ್ದಗಳ ಅರ್ಥಹೀನ ಬಡಬಡಿಕೆಯ ಆರೋಪ ಹೋರಿಸುತ್ತಾರೆ. ಆದರೆ ಈ ವಿಮರ್ಶಕ ಅದರ ಸ್ವಾದವನ್ನು ಉಂಡು ರಸಿಕರಿಗೆ ಉಣಬಡಿಸಿದ್ದಾರೆ. 'ನಾಕು ತಂತಿ' ಜೀವ ಜಗತ್ತನ್ನು ಅರಿಯಲು ಪ್ರಯತ್ನಿಸಿದ ಒಂದು ಶ್ರುತಿಯೆನ್ನುವಲ್ಲಿ ಕ್ಲಿಷ್ಟ ಕವನವೊಂದರ ಸಾರವನ್ನೇ ಹಿಡಿದಿರಿಸಿದ ಚಾಕಚಕ್ಯತೆಯಿದೆ. ಕವನದ ನಾಲ್ಕು ಭಾಗಗಳನ್ನು ವಿಶ್ಲೇಷಿಸುವದರ ಜೊತೆಗೆ ಕವನ ಅರ್ಥವನ್ನು ತಮ್ಮ ಬಹು ವಿಸ್ತಾರವಾದ ಶಾಸ್ತ್ರ, ಪುರಾಣ, ವೇದ ಉಪನಿಷತ್ತುಗಳ ದೀರ್ಘ, ಅಧ್ಯಯನದ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. 'ನಾಲ್ಕು ತಂತಿ'ಯ ವಿಮರ್ಶೆ ಓದುವಾಗ ವಾಚಕನಿಗೆ ಒಂದು ಹೊಸ ಜ್ಞಾನದ ವಿರಾಟ್‌ದರ್ಶನವೇ ಆಗುತ್ತದೆ. ಬೇಂದ್ರೆಯವರು ಓಂ ಮಂತ್ರಕ್ಕೆ ಸಮನಾದ ನಾಲ್ಕು ತಂತಿಯನ್ನು ನಾನು, ನೀನು, ಆನು, ತಾನು, ಎಂದು ಕವನದ ವಿವರಣೆಗೆ ಹಿನ್ನೆಲೆಯಾಗಿ ಬರುವ ಉಪನಿಷತ್ತು ಭಗವದ್ಗೀತೆಗಳ ಉಲ್ಲೇಖ ಕೃಷ್ಣಪ್ಪನವರ ವ್ಯಾಪಕ ಓದಿಗೆ ಸಾಕ್ಷಿಯಾಗಿದೆ. 'ದೀಪ ತುಂಬು' ಎನ್ನುವ ಮಾತು ಜನಪದರ ಅನುಭಾವದ ನಿದರ್ಶನವೆಂದು ಎತ್ತಿಹೇಳುವಲ್ಲಿ ಕೃಷ್ಣಪ್ಪನವರ ಹಳ್ಳಿಯ

ಜೀವನಾನುಭವ ಎದ್ದು ಕಾಣುತ್ತದೆ.

'ವಿವೇಕಾನಂದರ ಜೀವನ ಪ್ರಗಾಥಾ'ದಲ್ಲಿ ವಿವೇಕಾನಂದರ ಆಧ್ಯಾತ್ಮಿಕ ಔನ್ನತ್ಯದ ಚಿತ್ರಣದ ಸಹಸ್ಪಂದಿ ವಿಶ್ಲೇಷಣೆಯಿದೆ. ವಿವೇಕಾನಂದರ ಭವ್ಯ ವ್ಯಕ್ತಿತ್ವದರ್ಶನವನ್ನು ಕವಿ ಬೇಂದ್ರೆ ಎಷ್ಟು ಸಮರ್ಥವಾಗಿ ಮಾಡಿದ್ದಾರೋ ಅಷ್ಟೇ ಸಮರ್ಥವಾಗಿ ಆ ದರ್ಶನದ ಪುನರ್‌ದರ್ಶನ ಮಾಡಿಸಿದ್ದಾರೆ. ಪ್ರಥಮ ಭಾಗದಲ್ಲಿ ಪರಮಹಂಸರನ್ನು ಗೌರಿಶಂಕರ ಹಾಗೂ ಕಾಂಚನಗಂಗಾಗಳಿಗೆ ಹೋಲಿಸುತ್ತಾ ಅವರ ಆಧ್ಯಾತ್ಮಿಕ ಔನ್ನತ್ಯ ಸಾರಿದರೆ, ವಿವೇಕಾನಂದರು ಅಲ್ಲಿಗೆ ಹೋಗಿ ಮುಟ್ಟಿದ್ದುದರ ವರ್ಣನೆಯಿದೆ. ಅವರೀರ್ವರ ಸಂಧಿಯಲ್ಲಿ ಉಪನಿಷತ್ತಿನ ಸಾಹಚರ್ಯ ಮಹತ್ವದ ಕುರಿತ ಮಂತ್ರದ ಉಲ್ಲೇಖವಿದೆ. ಎರಡನೇ ಭಾಗದಲ್ಲಿ ವಿವೇಕಾನಂದರು ನಂದಿಯಾಗಿ, ನಂದಿಕೋಲು ಹೊತ್ತ ನಂದೀಧ್ವಜದಂತೆ ಎತ್ತರವಾಗಿ ಬೆಳೆದ ವರ್ಣನೆಯಿದೆ. ವಿವೇಕಾನಂದರನ್ನು ನಂದೀಕೋಲಿಗೆ ಹೋಲಿಸಿದ್ದು ಬೇಂದ್ರೆ ಜಾನಪದ ಜೀವನದ ದ್ಯೋತಕವಾಗಿದೆಯೆಂದು ವಿಮರ್ಶಕರು ವರ್ಣಿಸಿದ್ದು ಔಚಿತ್ಯಪೂರ್ಣವಾಗಿದೆ. ಐದನೇ ಭಾಗದಲ್ಲಿ ವಿವೇಕಾನಂದರ ವ್ಯಕ್ತಿತ್ವವನ್ನು ಉಪನಿಷತ್ತಿನ ಪರಿಭಾಷೆಯಲ್ಲಿ ಹಿಡಿದಿರಿಸಲಾಗಿದೆ. ಈ ಸಂದರ್ಭದಲ್ಲಿ ಕೃಷ್ಣಪ್ಪನವರು ಕೊಟ್ಟ 'ಉಪನ್ಯಾಸಿ', 'ಸ್ವಚ್ಛಂದ' ಶಬ್ದಗಳ ಅರ್ಥವಿವರಣೆ ನೂತನವಾಗಿದೆ. ಒಟ್ಟಿನಲ್ಲಿ ವಿವೇಕಾನಂದರ ಕುರಿತ ಶ್ರೇಷ್ಠ ಕವಿತೆ 'ವಿವೇಕಾನಂದರ ಪ್ರಗಾಥಾ'ದಷ್ಟೇ ಕಾವ್ಯ ವಿಮರ್ಶೆಯೂ ಕೂಡ ಶ್ರೇಷ್ಠವಾಗಿದೆ.

ಗುರುಪರಂಪರೆಯಲ್ಲಿ ವಿಶ್ವಾಸ ವಿವರಿಸದ ಬೇಂದ್ರೆಯವರು ಗುರುಗಳ ಸಾಲನ್ನೇ ಇಲ್ಲಿ ನೆನೆಯುತ್ತಾರೆ. ವಿಶೇಷವಾಗಿ ಈ ಕವನದ ಕುರಿತ ವ್ಯಾಖ್ಯಾನ ಅನನ್ಯವಾಗಿದೆ. ಪ್ರೇಮತತ್ವ 'ಶ್ರೀ ಗುರುವರೇಣ್ಯ' ಕವನದ ಕೇಂದ್ರ ವಸ್ತುವಾಗಿರುವದನ್ನು ಗುರುತಿಸಲಾಗಿದೆ.

ಹಾಸ್ಯ ಪ್ರಜ್ಞೆಯಿಂದ ಕೂಡಿದ ಕಾವ್ಯ 'ಬ್ಯಾಬೆಲ್' ಇಲ್ಲಿ ಕೂಡ ಕೃಷ್ಣಪ್ಪ ಬೇಂದ್ರೆ ಕಾವ್ಯದ ಮುಖ್ಯ ಸೆಲೆಯಾದ ಶಬ್ದ ಚಮತ್ಕಾರವನ್ನು ಅರ್ಥೈಸಿದ್ದಾರೆ. ಅಂತೆಯೇ 'ಕಳಫ' ಕಾಳಗಕ್ಕೆ ಕಾರಣವಾದುದನ್ನು ಸ್ಪಷ್ಟ ಪಡಿಸಿದ್ದಾರೆ.


'ಹೆಟೆರ್ ಡಾಕ್ಸಿ'ಯಲ್ಲಿ ಸಂಪ್ರದಾಯದ ವಿರುದ್ಧದ ಧ್ವನಿ ಕಂಡಿದ್ದಾರೆ. ಬೇಂದ್ರೆಯವರ ಕಾವ್ಯ ಅರ್ಥ ಮಾಡಿಕೊಳ್ಳುವ ಪೂರ್ವಸಿದ್ಧತೆಯೆಲ್ಲ ಜಿ. ಕೃಷ್ಣಪ್ಪನವರಿಗೆ ಇದೆ ಎನ್ನಲಿಕ್ಕೆ 'ಹಾಕುಮಣೆ', 'ಹಚ್ಚು ಹಣೆಪಾದಕ್ಕೆ', 'ಬಂದ ಉಗುಳನು ನುಂಗು' ಎನ್ನುವ ಉತ್ತರ ಕರ್ನಾಟಕದ ನುಡಿಗಟ್ಟು ಕೃಷ್ಣಪ್ಪನವರಿಗೆ ಅವಗತವಾಗಿದೆ. ಬೇಂದ್ರೆ ಕಾವ್ಯ ಅರ್ಥಮಾಡಿಕೊಳ್ಳಲು, ಅದನ್ನು ವಿವಿಧ ಮಗ್ಗುಲಗಳಲ್ಲಿ ನೋಡಿ ಅರ್ಥೈಸಲು ಕೃಷ್ಣಪ್ಪನವರಿಗೇ ಸಾಧ್ಯವಿದೆ ಎನ್ನುವಷ್ಟು ಸಮರ್ಥವಾಗಿದೆ - ಇಲ್ಲಿಯ ವಿಮರ್ಶೆ 'ದಶರಥ' ಶಬ್ದ ಹೊಸ ಅರ್ಥ ಕಂಡಿದ್ದಾರೆ. 'ಸೀತಾ ಬಾ ಈ ರಾಮಗಿದೆ ಅಗ್ನಿಪರೀಕ್ಷೆ' ಎನ್ನುವಲ್ಲಿ ಬೇಂದ್ರೆ ಕಾವ್ಯ ಶ್ಲೇಷೆಯನ್ನು ಒಡೆದು ನೋಡುವ ಜಾಣ್ಮೆಯಿದೆ. 'ಸೂಲಿ'ಯಲ್ಲಿ ಅವರು ಶೂಲಿಯನ್ನು ಕಂಡಂತೆ ಒಕ್ಕಲುತನದ ಕೂರಿಗೆಯ ಶಬ್ದದ ಅರ್ಥವನ್ನು ಕಂಡಿದ್ದಾರೆ. ಬೇಂದ್ರೆ ಶಬ್ದವನ್ನು ನಾದಿ ನಾದಿ ಹೊಸ ಶಬ್ದ ಪುಂಜವನ್ನು ರಚಿಸಿದರು. ಈಗ ಕೃಷ್ಣಪ್ಪನವರು ಆ ಶಬ್ದಪುಂಜವನ್ನೇ ಒಡೆದು ನೋಡಿ ಅರ್ಥ ವಿವರಿಸಿದ್ದಾರೆ. ಉಳಿದ ಕೆಲ ವಿಮರ್ಶಕರಿಗೆ ಬೇಂದ್ರೆ ಏಕಾಗ್ರತೆಯಿಲ್ಲದ, ಒಂದೇ ವಸ್ತುವಿನ ಮೇಲೆ ಸತತ ಆಲೋಚಿಸುವ ಶಕ್ತಿಯಿಲ್ಲದ ಕಪಿಯಾಗಿ ಕಂಡಿದ್ದರೆ, ಕೃಷ್ಣಪ್ಪ ಪ್ರತಿ ಕವನದ ಪ್ರತಿಸಾಲಿನಲ್ಲಿಯೂ ಅರ್ಥವಿರುವದನ್ನೂ, ಕೇಂದ್ರ ವಸ್ತುವಿರುವುದನ್ನೂ ಗುರುತಿಸಿದ್ದಾರೆ. ಕೃಷ್ಣಪ್ಪನವರ ಬೇಂದ್ರೆ ಕಾವ್ಯ ವಿಮರ್ಶೆ ನಿರಂತರ ನಡೆಯಲಿ, ಬೇಂದ್ರೆಯಂಥ ಯುಗದ ಕವಿ ನಾಡಿನ ಜನತೆಗೆಲ್ಲ ಇನ್ನೂ ಸ್ಪಷ್ಟವಾಗಿ ನಿಚ್ಚಳವಾಗಿ ತಿಳಿಯುವಂತೆ ಮಾಡಲಿ ಎಂದು ಹಾರೈಸುವೆ. ■

‘ದಿವ್ಯ’ ಒಂದು ಅವಸರದ ಓದು

ಡಿ. ವಿ. ಪ್ರಹ್ಲಾದ್

ಸಾಹಿತ್ಯ ಕೃತಿಯೊಂದರ ಓದನ್ನ ಅನೇಕ ಸಂಗತಿಗಳು ಪ್ರಭಾವಿಸುತ್ತವೆ. ‘ಕನ್ನಡ ಪ್ರಭಾ’ದಲ್ಲಿ ದಿವ್ಯದ ಭಾಗವೊಂದು ಪ್ರಕಟಗೊಂಡಿದ್ದನ್ನ ಓದಿದ ಅನಂತರ ಅನೇಕ ದಿನಗಳಿಂದ ಒಂದು ಹೊಸಾ ಕಾದಂಬರಿ ಓದಲು ಮನಸ್ಸು ತುಡಿಯುತ್ತಿತ್ತು. ದಿವ್ಯ ಅಂಗಡಿಗೆ ಬರುವ ಅನೇಕ ದಿನಗಳ ಮೊದಲೇ ಹೋಗಿ ಕೇಳಿ, ‘ಇಲ್ಲ’ ಅನ್ನಿಸಿಕೊಂಡು ಬಂದಿದ್ದೆ. ಬೆಂಗಳೂರಿನ ಸಾಹಿತಿಗಳ ವಲಯದಲ್ಲಿ ದಿವ್ಯದ ಹಸ್ತಪ್ರತಿ ಓಡಾಡುತ್ತಿದ್ದುದರ ಬಗ್ಗೆಯೂ ಕೇಳಿದ್ದೆ, ಹಾಗೇ ಅನಂತಮೂರ್ತಿ ಅವರಿಗೆ ನೊಬೆಲ್ ಪ್ರಶಸ್ತಿಯೂ ದಕ್ಕಬಹುದು ಎನ್ನುವ ಸುದ್ದಿ ಶುದ್ಧ ಕುಹಕದ್ದು ಅಂತ ನಕ್ಕುಬಿಟ್ಟಿದ್ದೆ. ಈ ಎಲ್ಲಾ ಸಂಗತಿಗಳೂ ದಿವ್ಯವನ್ನು ಕಾಯುವಂತೆ ಮಾಡಿ ಕುತೂಹಲ ಹುಟ್ಟಿಸಿದ್ದವು. ಒಂದು ಕೃತಿಯ ಬಗ್ಗೆ ಇರುವ-ಬರುವ ಸುದ್ದಿ ಮೊದಲುಗೊಂಡು ಅದರ ಬ್ಲರ್ಬ್, ರಕ್ಷಾಪುಟ ಅದರೊಳಗಿನ ಚಿತ್ರ ಹೀಗೆ ಅನೇಕ ಸಂಗತಿಗಳು ನಮ್ಮ ಓದುವಿಕೆಯನ್ನ ಅನುಭವವನ್ನ ನಿರೂಪಿಸುವ ಪ್ರಭಾವಗೊಳಿಸುವ ಸಂಗತಿಗಳಾಗಿ ಬಿಡುತ್ತದೆ.

ಅನಂತಮೂರ್ತಿಯವರ ಸಾಹಿತ್ಯ-ನಿಲುವುಗಳ ಬಗ್ಗೆ ಈಚೆಗೆ ಆಗುತ್ತಿರುವ ಚರ್ಚೆ-ವಿಮರ್ಶೆಗಳು ಎರಡು ರೀತಿಯದ್ದಾಗಿವೆ. ಒಂದು ಅವರ ದಿವ್ಯ ವರ್ಚಸ್ಸಿಗೆ ಒಳಗಾದವರ ಏಕಮುಖಿ ಗ್ರಹಿಕೆಯ ಉತ್ಪ್ರೇಕ್ಷಿತ ಎನ್ನಿಸಬಲ್ಲ ಅನಿಸಿಕೆಗಳು. ಮತ್ತೊಂದು ಅವರ ಯಾವ ನಿಲುವು ನೆಡೆಗಳನ್ನೂ ಸಹನೆಯಿಂದ ಒಪ್ಪದವರ ವಿರೋಧದ ಕತ್ತಿ ಬೀಸುಗಳು. ಅವರ ದಿವ್ಯ ವರ್ಚಸ್ಸಿಗೆ ಒಳಗಾದವರ ಹೇಳಿಕೆಗಳು ಅಂದೆ, ಅದಕ್ಕೆ ಉದಾಹರಣೆಯಾಗಿ ಅವರ ಈ ಹಿಂದಿನ ಕೃತಿ ‘ಭವ’ವನ್ನು ಕುರಿತ ಡಿ. ಆರ್. ನಾಗರಾಜರ ಅದೊಂದು ಎಪಿಕ್ ಸ್ವರೂಪವುಳ್ಳ ಕಾದಂಬರಿ ಎಂಬ ಹೇಳಿಕೆ ಗಮನಿಸಬಹುದು. ಒಂದು ಸಾಮಾನ್ಯ ನೀಳ್ಗತೆಯ ಸ್ವರೂಪ ಹೊಂದಿರುವ ಈ ಕೃತಿ, ಕಾದಂಬರಿಯ ವಿಸ್ತಾರ ಹರಹುಗಳನ್ನು ಹೊಂದಿರುವ ಸಂಗತಿ ಸಾಮಾನ್ಯರಿಗೂ ಅರ್ಥವಾಗಬಲ್ಲದ್ದು. ಅನಂತಮೂರ್ತಿ ಮತ್ತು ಅವರ ವಾರಿಗೆಯ ಬಹುಪಾಲು ಲೇಖಕರಿಗೆ (ಕೆಲವರನ್ನಬಿಟ್ಟು) ಅಂಥಾ ಎಪಿಕ್ ಸ್ವರೂಪವುಳ್ಳ ವಸ್ತುವನ್ನು ಕಾದಂಬರಿಯಾಗಿ ಕೆತ್ತುವ ಏಕಾಗ್ರತೆಯಾಗಲೀ ಅಥವಾ ಅಂಥಾ ಉತ್ಸಾಹ ಹುಟ್ಟಿಸುವ ಸಂದರ್ಭವಾಗಲೀ ಇರಲಿಲ್ಲ. ಅಷ್ಟು ದೊಡ್ಡದಾದ ವಿಸ್ತಾರ ವೈವಿಧ್ಯಗಳು ಅವರ ಕಾದಂಬರಿಗಳಲ್ಲಿ ಕಾಣಬರುವುದಿಲ್ಲ. ಆಯಾ ಪ್ರಕಾರದ ಸ್ವರೂಪದ ಬಗ್ಗೆ ತೀವ್ರವಾದ ಎಚ್ಚರ ಇಟ್ಟುಕೊಂಡ ಇವರುಗಳಿಗೆ ಕಾರಂತ, ಕುವೆಂಪು,



ದಿವ್ಯ (ಕಾದಂಬರಿ)
ಯು.ಆರ್. ಅನಂತಮೂರ್ತಿ
ಪ್ರ : ಅಕ್ಷರ ಪ್ರಕಾಶನ, ಸಾಗರ
ಪುಟಗಳು : 184
ಬೆಲೆ : ರೂ. 85/-
ಪು.ವ. : 2001

ಭೈರಪ್ಪ ಇವರಂತೆ ವಿಸ್ತಾರವಾಗಿ ಬರೆಯುವ ತೀರಾ ತನ್ಮಯವಾಗಿ ತೊಡಗಿಸಿಕೊಳ್ಳುವ ತುರ್ತು ಮತ್ತು ಏಕಾಗ್ರತೆಗಳು ಇಲ್ಲದೇ ಹೋಗಿರಬೇಕು.

ಅನಂತಮೂರ್ತಿಯವರನ್ನ "ಕ್ರಿಯೇಟಿವ್ ಎನಮಿ" ಅಂತ ಭಾವಿಸುವ ಮೊಗಳ್ಳಿ ಗಣೇಶ್ ಅಭಿಪ್ರಾಯಪಡುವಂತೆ ಅವರ ಕೃತಿಗಳ ಬಗ್ಗೆ ನಿಲುವುಗಳ ಬಗ್ಗೆ ಇನ್ನಷ್ಟು ತೆರೆದ ಮನಸ್ಸಿನಿಂದ ದಲಿತ ಬಂಡಾಯದ ಲೇಖಕರು ಮತ್ತೊಮ್ಮೆ ಪರ್ಯಾಲೋಚಿಸಬೇಕಾದ ಅಗತ್ಯ ಕುರಿತು ಮಂಡಿಸುತ್ತಾರೆ. (ಸಾಹಿತ್ಯ ಸಂವಾದ ಪ್ರಜಾವಾಣಿ 23, 2001). ಒಬ್ಬ ಸೃಜನಶೀಲ ಲೇಖಕನಾಗಿ ತಾನು ಪಡೆಯಬಹುದಾದ ಎಲ್ಲ ಎತ್ತರಗಳನ್ನೂ ಪಡೆದ ಅನಂತಮೂರ್ತಿಯವರು ತಮ್ಮ ಎಲ್ಲಾ ಸಾರ್ವಜನಿಕ ಗದ್ದಲದ ಜಗತ್ತಿನಿಂದ ಸೃಜನಶೀಲ ಸಾಧ್ಯತೆಗಳ ಕಡೆಗೆ ಬರವಣಿಗೆಯ ಕಡೆಗೆ ಮುಖಮಾಡಿದ್ದು ಸ್ವಾಗತಾರ್ಹ, ದಿವ್ಯವನ್ನ ಬರೀ ಕಾದಂಬರಿಯಾಗಿ ಗಮನಿಸದೆ ಅವರ ಈಚಿನ ಎಲ್ಲ ಒಲವು ನಿಲುವುಗಳ ಮ್ಯಾನಿಫೆಸ್ಟೋ ಆಗಿಯೂ ಗಮನಿಸಬೇಕಿದೆ. ಅನಂತಮೂರ್ತಿ ಕರ್ನಾಟಕದ ಅರುಂಧತಿ ರಾಯ್ ಆಗ ಹೊರಟಿರುವ ಹಿನ್ನೆಲೆಯಲ್ಲಿ.

ಈ ಕಾದಂಬರಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಗಮನಿಸಬಹುದಾದ ಮತ್ತೊಂದು ಧೋರಣೆ ನಮ್ಮ ನವ್ಯ ಲೇಖಕರ ಸೃಜನಶೀಲ ಉತ್ತುಂಗದ ಕಾಲದಲ್ಲಿದ್ದ ಅನುಭವನಿಷ್ಠವಾದ ರ್‍ಯಾಷನಲಿಸ್ಟ್ ಧೋರಣೆಗಳು, ವಯಸ್ಸಾಗುತ್ತಾ ಮಾಗಿವೆ ಮೆದುವಾಗಿ ಇನ್ನಷ್ಟು ಹದಗೊಂಡಿವೆ, ಭಾರತೀಯತೆಯ ಬಗ್ಗೆ ಸ್ತ್ರೀಯ ಬಗ್ಗೆ ದಿವ್ಯವಾದದ್ದರ ಬಗ್ಗೆ ಹದಗೊಂಡ ಮೃದುವಾದ ಧೋರಣೆಗಳನ್ನ ಅಡಿಗರ 'ಬಾ ಇತ್ತ ಇತ್ತ', ಶರ್ಮರ 'ಸಪ್ತಪದಿ' ನಾಡಿಗರ ಈಚಿನ 'ಪಂಚಭೂತ'ಗಳು ಇತ್ಯಾದಿಯಲ್ಲಿ ಗುರುತಿಸಬಹುದು. ದಿವ್ಯದಲ್ಲೂ ಭಾರತೀಯವಾದ ದಿವ್ಯವಾದದ್ದರ (Divine) ಬಗ್ಗೆ ಒಂದು ಹದದ ಆರಾಧನಾಭಾವ ದಿಂದಲೇ ನಿರೂಪಿಸುತ್ತಾ ಭವದಲ್ಲೇ ಆರಂಭವಾದ ಅದರ ದೇವಿಯ ಆಕರ್ಷಣೆ ಮತ್ತು ತುಡಿತಗಳು ಇಲ್ಲಿಯೂ ತುಂಬಾ ತನ್ಮಯವಾಗಿ ಗೌರಿಯ ಪಾತ್ರ ನಿರೂಪಣೆಯಲ್ಲಿ, ಅಂಥಾದ್ದೊಂದು ದಿವ್ಯತೆಯನ್ನ ಹೇಳುತ್ತದೆ. ಅನಂತಮೂರ್ತಿಯವರು ಗೌರಿಯಲ್ಲಿ ನಿರೂಪಿಸುವ 'ದೇವಿ' ದಿವ್ಯತೆಗಳನ್ನ ಚಿತ್ರಿಸುತ್ತಲೇ ಅವಳಿಗೂ ಇರಬಲ್ಲ ಮಾನವ ಸಹಜ ಗುಣಗಳ ಬಗ್ಗೆ ಹೇಳುವ ಮೂಲಕ ತಮ್ಮ ತುಡಿತದ ಪಕ್ಷಪಾತವನ್ನ ಬ್ಯಾಲೆನ್ಸ್ ಮಾಡುತ್ತಾರೆ. ಇವಳೂ ಸರಸ್ವತಿ ವಿಮಲರ ಹಾಗೆ ಗಡಿದಾಟದೆ ಗೌರಿ ಭಾವುಕ ನೆಲೆಯಲ್ಲಿ ಕರಿಯನಿಗೆ ಮಸೋತರೂ ಅವಳು ಘನಶ್ಯಾಮನೊಂದಿಗೆ ಮದುವೆಯಾಗಲು ಒಪ್ಪುವ ಕ್ರಿಯೆಯೊಂದಿಗೆ ಮುಕ್ತಾಯವಾಗುತ್ತದೆ.

ಇಡೀ ದಿವ್ಯ ಕಾದಂಬರಿಯ ಓಟ ಇರುವಂಥದ್ದು; ಹನುಮಂತಯ್ಯನವರು ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿದ್ದ ಕಾಲದಿಂದ ಆರಂಭಿಸಿ ಸುಮಾರು 10-20 ವರ್ಷಗಳ ಕಾಲಮಾನದಲ್ಲಾಗುವ ಬದಲಾವಣೆಗಳಲ್ಲಿ ಸಾಮಾಜಿಕ ಪಲ್ಲಟಗಳಲ್ಲಿ, ಅನಂತಮೂರ್ತಿಯವರ ಕಾದಂಬರಿಯ ಜಗತ್ತಿನ ಪ್ರಾಣೇಶಾಚಾರ್ಯ, ಜಗನ್ನಾಥ ಮತ್ತು ಅವಸ್ಥೆಯ ಕೃಷ್ಣಪ್ಪ ಇವರೆಲ್ಲಾ ಮತ್ತೆ ಇಲ್ಲಿ ಬೇರೆ ಬೇರೆ ಹೆಸರು ಪಾತ್ರಗಳಲ್ಲಿ ಮೈತಳೆದಿದ್ದಾರೆ. ಗೌರಿ, ಜಗನ್ನಾಥರ ಬಗ್ಗೆಯಂತೂ ತುಂಬು ಉತ್ಸಾಹದಿಂದ ಏಕಾಗ್ರತೆಯಿಂದ ಚಿತ್ರಿಸಿದ್ದಾರೆ.

ದಿವ್ಯ ಕಾದಂಬರಿಯ ಮೊದಲರ್ಧ ತನ್ನ ಭಾಷೆಯಿಂದ ನಿರೂಪಣೆಯಿಂದ ಧಾನಸ್ಥ ಜಗತ್ತಿನಿಂದ ಆಕರ್ಷಕವಾಗಿ ರೂಪುಗೊಳ್ಳುವುದು. ಆದರೆ ಅದೇ ಕಾದಂಬರಿಯ ಎರಡನೇ ಭಾಗ ಅನಂತಮೂರ್ತಿಗಳ

ತಾತ್ವಿಕ ಜಿಜ್ಞಾಸೆಗಳು ಮತ್ತು ಕಾದಂಬರಿಯ ಶಿಲ್ಪಗಳ ಮಧ್ಯೆ ಸ್ಪಷ್ಟವಾದ ಒಡಕು ಕಾಣಬರುತ್ತದೆ. ಮೊದಲರ್ಧದ ತನ್ಮಯತೆ ಏಕಾಗ್ರತೆಗಳು ಎರಡನೆಯ ಭಾಗದಲ್ಲಿ ಪಲ್ಲಟಗೊಂಡಿವೆ, ಒಟ್ಟು ಅನಂತಮೂರ್ತಿಯವರ ಸೃಜನಕ್ರಿಯೆಯನ್ನ ಇವತ್ತಿನ ವಿಮರ್ಶಾ ಭಯೋತ್ಪಾದನೆ ಪ್ರಭಾವಿಸಿರುವ ಅನುಮಾನ ಬರುತ್ತದೆ. ಕಾರಂತ, ಲಂಕೇಶ್ ಮುಂತಾದವರಲ್ಲಿ ಕಾಣಬರುವ ಯಾರ ಯಾವ ಮುಲಾಜಿಗಳು ಒಳಗಾಗದೆ ತನಗನ್ನಿಸಿದ್ದನ್ನ ಜಿಗುಟು ಜಗಳಗಂಟರ ಹಾಗೆ ನಿರೂಪಿಸುವ ಧೋರಣೆ ಅನಂತಮೂರ್ತಿಯವರದ್ದಲ್ಲ. ಅವರದ್ದು ಬಹುಪಾಲು ದ್ವಂದ್ವ ನಿಲುವುಗಳು. ಇತ್ತ ಎಡ ಅತ್ತ ಬಲವೂ ಅಲ್ಲದ ಮಧ್ಯಮದಾರಿ.

ಈ ಟಿಪ್ಪಣಿಗಳನ್ನ ಮತ್ತೆ ಬರೆಯುವ ಮುಂಚೆ ಎಸ್. ಆರ್. ವಿಜಯಶಂಕರ ಅವರು ದಿವ್ಯದ ಬಿಡುಗಡೆ ಸಮಾರಂಭದಲ್ಲಿ ಮಾಡಿದ್ದ ಭಾಷಣ ಮತ್ತು ನರಹಳಿ ಬಾಲಸುಬ್ರಹ್ಮಣ್ಯ ಅವರು ಮಯೂರದಲ್ಲಿ ಬರೆದ ಲೇಖನಗಳನ್ನ ಓದಿದ ನನಗೆ, ದಿವ್ಯ ಅಂಥಾ ಉತ್ಸಾಹ ಹುಟ್ಟಿಸಬಲ್ಲ ಕೃತಿಯಾಗಿ ಕಾಣುತ್ತಿಲ್ಲ. ಧ್ಯಾನಸ್ಥ ಲೇಖಕನ ಸೃಜನಶೀಲ ಪ್ರಕ್ರಿಯೆಯಾಗಿ ಕಾಣುವ ಬದಲು ಧ್ಯಾನಕ್ಕೆ ಕುಳಿತ ಲೇಖಕನ ಏಕಾಗ್ರತೆಯ ಪಲ್ಲಟಗಳ ಹಾಗೆ ಇವು ತೋರುತ್ತಿವೆ.

ನಿಜ 'ದಿವ್ಯ' ಕನ್ನಡ ಕಾದಂಬರಿ ಪರಂಪರೆಯ ಅನೇಕ ಚಿತ್ರಗಳನ್ನ ನೆನಪಿಗೆ ತಂದು ಬೆಳಗುತ್ತದೆ. ಆದರೆ ಇದು ಜಾಗತೀಕರಣದ ಪ್ರತಿಕ್ರಿಯೆ ಅಂತ ಒಪ್ಪುವುದು ಕಷ್ಟ. ಐವತ್ತು ವರ್ಷ ಹಿಂದಕ್ಕೊಡುವ ಅಲ್ಲೇ ನಡೆಯುವ ಈ ಕೃತಿ ಇವತ್ತಿನ ಯಾವ ಭಾವುಕ ಜಗತ್ತನ್ನೂ ಎದುರಾಎದುರು ಹಾಕಿಕೊಂಡು ನಿಲ್ಲುವುದಿಲ್ಲ. ಬಾಲ್ಯ ನಾಸ್ಟಾಲ್ಜಿಯಾ ಜಾಗತೀಕರಣ ಅದರ ಸವಾಲುಗಳನ್ನ ಎದುರಿಸುವ ಪರಿಕರವಾದೀತೆ ಎನ್ನುವ ಅನುಮಾನವಿದೆ. ತಾತ್ವಿಕವಾಗಿ ಈ ಕೃತಿಯನ್ನ ಜಗತ್ತಿನ ಪ್ರಸಿದ್ಧ ಸಾಹಿತ್ಯ ಉತ್ತುಂಗಗಳ ಜೊತೆಗೆ ಹೋಲಿಸಿ ನೋಡುವ ಸಾಧ್ಯತೆ ಇದ್ದರೂ ಅದು ಎಲ್ಲರ ಸಾಹಿತ್ಯ ಕೃತಿಗಳಿಗೂ ಸಿಗಬಲ್ಲ ಸಮಾನ ಮಾನ್ಯತೆಯೆ ಎನ್ನುವುದು ನನ್ನ ಅನುಮಾನ.

ದಿವ್ಯದ Blurbನಲ್ಲಿರುವ ಎಲಿಯಟ್‌ನ ಮಾತುಗಳ ಉಲ್ಲೇಖ "ಎಲ್ಲ ಆವಿಷ್ಕಾರಗಳೂ ಆತ್ಯಂತಿಕವಾಗಿ ಮುಟ್ಟುವುದು ಹೊರಟ ಸ್ಥಳಕ್ಕೇ ಆದರೆ ಆ ಸ್ಥಳ ಮಾತ್ರಾ ಹೊಸತಾಗಿ ಆವಿಷ್ಕಾರ ಗೊಂಡಿರುತ್ತದೆ" ದಿವ್ಯವಾದದ್ದರ ಬಗ್ಗೆ ಮೌನದ ಬಗ್ಗೆ ಅನುಮಾನಗಳನ್ನಿಟ್ಟುಕೊಂಡೇ ಹೊರಟು ಸ್ಪಷ್ಟ ನಿರಾಕರಣೆಯೊಡನೆ ಅನುಭವನಿಷ್ಠವಾಗಿ ಬರೆಯ ಹೊರಟ ನಮ್ಮ ನವ್ಯಲೇಖಕರ ಪ್ರಯಾಣ ಹೊರಟಲ್ಲಿಯೇ ಬೇರೊಂದು ನೆಲೆಯ ಶೋಧನೆಯ ಭಾಗವಾಗಿ ಬಂದು ಮುಟ್ಟುವುದನ್ನ ಕಾಣಬಹುದು. ■

ಪುಸ್ತಕ ಪರಿಚಯ



ಜನ್ನ ಮತ್ತು ಅನೂಹ್ಯ ಸಾಧ್ಯತೆ

ಲೇ : ಆನಂದ ಋಗ್ವೇದಿ
ಮು : 2000
ಪುಟ : 88
ಬೆಲೆ : ರೂ. 50/-
ಪ್ರಕಾಶಕರು : ಅಭಿನವ, ಬೆಂಗಳೂರು.

"ಮನುಷ್ಯ ಕತೆಯನ್ನು ರಚಿಸುವಂತೆ ಜೀವನ ಕತೆಯನ್ನು ರಚಿಸುತ್ತದೆ. ಪ್ರಾಯಶಃ ಜೀವನ ಕತೆಯನ್ನು ರಚಿಸುತ್ತಿರುವುದರಿಂದಲೇ ಮನುಷ್ಯನಲ್ಲಿ ಕತೆ ರಚಿಸುವ ಹವ್ಯಾಸ ಕಾಣಿಸುತ್ತದೆ" (ಮಾಸ್ತಿ). ಈ ಹವ್ಯಾಸಕ್ಕೆ ಸ್ವತಃ ತಾನು ಹಾಗೂ ಹೊರಗಿನ ಜಗತ್ತು ಆಹಾರ. " ಕತೆಗಾರ ತನ್ನ ಮನದ ಮೂಲೆ ಮೂಲೆಯಲ್ಲಿ ಹರಡಿದ್ದ ತುಂಡುಗಳನ್ನು ಎಳೆದು ತಂದು " ಕಟ್ಟಿದ ಹಂದರ, 'ಜನ್ನ ಮತ್ತು ಅನೂಹ್ಯ ಸಾಧ್ಯತೆ." ಪ್ರೀತಿ, ಹತಾಶೆ, ನೋವು, ಅಸ್ತಿತ್ವ ಚಿಂತನೆ ಇಂತಹುದೇ ಎಳೆಗಳಿಂದ ಆನಂದ ಋಗ್ವೇದಿಯವರು ಇಲ್ಲಿನ ಕತೆಗಳನ್ನು ಹೆಣೆದಿದ್ದಾರೆ.

ಇಲ್ಲಿನ 11 ಕತೆಗಳ ವಸ್ತು, ವಿಚಾರಗಳು ಕನ್ನಡ ಓದುಗರಿಗೆ ಪರಿಚಿತ. ನವ್ಯ ಸಂದರ್ಭದಲ್ಲಿ ಬಂದ ಕತೆ, ಕಾದಂಬರಿಗಳಲ್ಲಿ ಕಂಡು ಬರುವುದು ಈ ಬಗೆಯ ಸ್ವಕೇಂದ್ರಿತ ಜಿಜ್ಞಾಸೆ. ಈ ಕತೆಗಳನ್ನು ಓದುವಾಗ ಸಹಜವಾಗಿಯೇ ಚಿತ್ತಾಲ, ದೇಸಾಯಿ, ಲಂಕೇಶ, ಅನಂತಮೂರ್ತಿ ನೆನಪಾಗುತ್ತಾರೆ. ಹಾಗಾದರೆ ಈ ಕತೆಗಳು ಅನುಕರಣೆಯೇ? ಅಲ್ಲ, ಯುವ ಬರಹಗಾರ ತನ್ನ ಹಾದಿಯನ್ನು ಕಂಡುಕೊಳ್ಳಲು ಮಾಡಿರುವ ಪ್ರಯತ್ನ.

ಯುವ ಬರಹಗಾರ ಎದುರಿಸುವ ಮೊದಲ ಸಮಸ್ಯೆ ಎಂದರೆ ಹಿಂದಿನವರಿಗಿಂತ ತಾನು ಭಿನ್ನನಾಗುವುದು ಹೇಗೆ? ಎಂದು. ಪರಂಪರೆಯ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಪ್ರಸ್ತುತ ನಮ್ಮಲ್ಲಿ ಗುರುತಿಸಬಹುದಾದ ಯಾವ ಚಳುವಳಿ ಪಂಥಗಳಿಲ್ಲ. ನಮ್ಮ ಹಿಂದೆ ಇತಿಹಾಸವಿದೆ. ತಮ್ಮ ತಮಗೆ ಸರಿಯೆನಿಸಿದಂತೆ ಇತಿಹಾಸದ ಪುಟಗಳಿಂದ ಎರವಲು ಪಡೆದು ಅನುಕರಣೆ ಎನಿಸಿದರೂ ಅದನ್ನು ಮೀರಲು ಪ್ರಯತ್ನಿಸುತ್ತಾ ಬರೆಯುತ್ತಿರುವ ಅನೇಕ ಮನಸ್ಸುಗಳಿವೆ. ಆನಂದ ಋಗ್ವೇದಿಯವರ ಕತೆಗಳಲ್ಲಿ ಸಹ ಕಂಡು ಬರುವುದು ಈ ಬಗೆಯ ಹುಡುಕಾಟ.

'ಗತ' ಕತೆ ಬರಹಗಾರನ ಹುಡುಕಾಟ. ದ್ವಂದ್ವ ಎಲ್ಲವನ್ನೂ ತೆರೆದಿಡುತ್ತದೆ. ಈ ಕತೆಯಲ್ಲಿನ ಗರುಡ, ರಘು ಇವರ ಮಾತುಗಳಲ್ಲಿ ಕತೆಗಾರನ ಅನಿಸಿಕೆಗಳ ಸ್ಪಷ್ಟ ಅಭಿವ್ಯಕ್ತಿಯಿದೆ. "ಈ ಬರಹದ ಎಲ್ಲ ಮಾತನ್ನು ಗೊಂದಲ ತುಂಬಿಕೊಂಡ ಸಮುದಾಯದ, ನಿಶ್ಯಕ್ತ ಯುವಕರ ಕನಸುಗಳೇ ಇಲ್ಲದ ಮುದಿ ಮನಸ್ಸುಗಳಿಗೆ ಅರ್ಪಣೆ ಮಾಡಿರುವುದರಿಂದ ಓದಿದ ಯಾರಿಗೇ 'ಇದು ನನ್ನದೂ ಸ್ಥಿತಿ' ಅನ್ನಿಸಿದರೆ ಅವರೂ ಹೊಸತೊಂದು ಹೆಸರು ಧರಿಸಿ ಕತೆಯೊಳಗೆ ಪ್ರವೇಶಿಸಬಹುದು". ತಾನು ತನ್ನ ಸಮುದಾಯದ

ದನಿಯಾಗಬೇಕು ಎಂಬ ಅಪೇಕ್ಷೆ ಸಹಜ. ಆದರೆ ನಮ್ಮ ಪೀಳಿಗೆಯ ಮನಸ್ಸು ಇಷ್ಟು ನಿಷ್ಕ್ರಿಯವಾಗಿದೆಯೇ? ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಲೇಖಕನ ಮನೋಭಾವದ ಬಗ್ಗೆ ಓದುಗ ಕ್ಷಣಕಾಲ ನಿಂತು ಚಿಂತಿಸಬೇಕಾಗುತ್ತದೆ. ಇಲ್ಲಿನ ಎಲ್ಲ ಪಾತ್ರಗಳ ಮನಸ್ಥಿತಿ ಇದೇ ಬಗೆಯದು. ಗರುಡ, ಜನ್ನ, ನಿರಂಜನ, ಕತ್ಲ, ವಿಭಾಕರ ಇವರೆಲ್ಲ ಒಂದೇ ಬಗೆಯ ವ್ಯಕ್ತಿತ್ವದವರು. 'ಗತಿ' ಕತೆಯ ಪಾತ್ರಗಳೇ ಉಳಿದ ಕತೆಗಳಲ್ಲಿ ಸಹ ಕಾಣಿಸಿಕೊಳ್ಳುತ್ತವೆ. ಮೂಲತಃ ಒಂದೇ ಬಗೆಯ ಪಾತ್ರ ಆದರೆ ವಸ್ತು ಮಾತ್ರ ಬೇರೆ.

ಆನಂದ ಋಗ್ವೇದಿಯವರ ಬರವಣಿಗೆಯಲ್ಲಿ ಪ್ರಯೋಗಶೀಲ ಗುಣವಿದೆ ನಿರೂಪಣೆಯಲ್ಲಿ ಹೊಸದನ್ನು ಅಳವಡಿಸಿಕೊಳ್ಳಬೇಕೆಂಬ ತುಡಿತವನ್ನು ಈ ಕತೆಗಳ ಹಿಂದೆ ಕಾಣಬಹುದಾಗಿದೆ. ವಸ್ತುವಿನಲ್ಲಿ ವೈವಿಧ್ಯವಿದೆ. ಆದರೆ ಸಂವಹನದ ದೃಷ್ಟಿಯಿಂದ ಅಸ್ಪಷ್ಟ ಎನಿಸುವಂತಹ ವಾಕ್ಯಗಳು ಕತೆಗಳಲ್ಲಿ ಅಲ್ಲಲ್ಲಿ ನುಸುಳಿವೆ. 'ಕತ್ತಲೆ ಬೀಜ' ವಸ್ತು ಹಾಗೂ ನಿರೂಪಣೆಯ ದೃಷ್ಟಿಯಿಂದ ವಿಭಿನ್ನ ಕತೆ ಎನಿಸಿದರೂ ಸಹ ಅಲ್ಲಲ್ಲಿ ಬಂದಿರುವ ಅಸ್ಪಷ್ಟ ವಾಕ್ಯಗಳು ಕತೆಯ ಒಟ್ಟು ಅಂದವನ್ನು ಕೆಡಿಸಿದೆ. ಈ ಸಂಕಲನಕ್ಕೆ ಹಿನ್ನುಡಿ ಬರೆದಿರುವ ಓ.ಎಲ್. ನಾಗಭೂಷಣಸ್ವಾಮಿಯವರು ಇದನ್ನುಸೋದಹರಣವಾಗಿ ತೋರಿಸಿದ್ದಾರೆ.

ಆನಂದ ಋಗ್ವೇದಿಯವರ ಆಸಕ್ತಿಯಿರುವುದು ಮನಸ್ಸಿನ ಮೂಲೆ ಮುಡುಕುಗಳಲ್ಲಿ ಅಡಗಿ ಕುಳಿತಿರುವುದನ್ನು ಎಳೆದು ತಂದು ಬಯಲಲ್ಲಿ ಹರಡುವುದರಲ್ಲಿ, ಯಾರೂ ಮುಖ್ಯರಲ್ಲ ಯಾರೂ ಅಮುಖ್ಯರಲ್ಲ ಎಂದು ನೋಡಲು ಸಾಧ್ಯವಾದಾಗ ಗೊಮ್ಮಟ ದರ್ಶನವಾಗುತ್ತದೆ. ಇಂತಹ ದರ್ಶನದ ಮಹತ್ವಕಾಂಕ್ಷೆಯುಳ್ಳ ಈ ಲೇಖಕ ಕ್ರಮಿಸಬೇಕಾದ ಹಾದಿ ಇನ್ನೂ ಇದೆ.

■ *ಹೇಮ ಎಸ್.*



ಶತಮಾನದ ಕವಿತೆ ಜೋಗಿ

ಸಂ : **ಕೆ.ಸಿ. ಶಿವಾರೆಡ್ಡಿ**
ಮುದ್ರಣ : 1999
ಪುಟ : xx + 128
ಬೆಲೆ : ರೂ . 90/-
ಪ್ರಕಾಶಕರು : ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಇತ್ತೀಚಿನ ದಿನಗಳಲ್ಲಿ ಕನ್ನಡ ಪುಸ್ತಕ ಲೋಕಕ್ಕೆ ಕನ್ನಡ ವಿಶ್ವವಿದ್ಯಾಲಯದ ಕೊಡುಗೆ ಗಮನಾರ್ಹವಾದದ್ದು. ಸಾಹಿತ್ಯ, ಸಂಶೋಧನೆ, ವಿಮರ್ಶನ ಮಾತ್ರವಲ್ಲದೆ ಕೃಷಿ, ಜಾನಪದ ಮೊದಲಾದ ಹತ್ತು ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ಹಲವು ಒಳ್ಳೆಯ ಪುಸ್ತಕಗಳನ್ನು ಪ್ರಸಾರಾಂಗವು ಪ್ರಕಟಿಸಿದೆ. "ಶತಮಾನದ ಕವಿತೆ ಜೋಗಿ" ಕೂಡ ಇಲ್ಲಿಯ ಪ್ರಕಟಣೆ. ಇದು ಬೇಂದ್ರೆಯವರ 'ಜೋಗಿ' (ಗಂಗಾವತರಣ 1951) ಕವಿತೆಯನ್ನು ಕುರಿತಾಗಿ ವಿವಿಧ ಕಾಲಘಟ್ಟದಲ್ಲಿ ಬಂದ 31 ಲೇಖನಗಳ ಸಂಕಲನ. ಈ ಪುಸ್ತಕದ ಸಂಪಾದಕರು ಕೆ. ಸಿ. ಶಿವಾರೆಡ್ಡಿ.

ಹೀಗೆ ಒಂದು ಕವಿತೆಯನ್ನು ಕುರಿತ ಸಂಕಲನ ಕನ್ನಡದಲ್ಲಿ ಇದುವರೆಗೂ ಬಂದಿರಲಿಲ್ಲ. ಆದರೆ ಒಂದು ಕಾದಂಬರಿಯನ್ನು ಕುರಿತಾದ ಸಂಧ್ಯಾರಾಗ ಪ್ರಶಸ್ತಿ, ಸಂಸ್ಕಾರ ಸಮೀಕ್ಷೆ, ವಂಶವೃಕ್ಷ ಸಮೀಕ್ಷೆಯಂತಹ ಪುಸ್ತಕಗಳಿವೆ. ಈ ಬಗೆಯ ಪುಸ್ತಕಗಳು ಆ ಕೃತಿಯನ್ನು ಕುರಿತು ನಡೆದಿರುವ ಚರ್ಚೆಯ ಸ್ವರೂಪವನ್ನು ತಿಳಿಯಲು ನೆರವಾಗುತ್ತದೆ. ಹಾಗೆಯೇ ವಿಮರ್ಶೆ ಬೆಳೆದು ಬಂದ ರೀತಿಯನ್ನು ಸಹ ತಿಳಿಸುತ್ತದೆ.


ಒಂದು ಪಠ್ಯಕ್ಕೆ ಹಲವು ಓದುಗಳ ಸಾಧ್ಯತೆ ಇದ್ದೇ ಇರುತ್ತದೆ. ಈ ಸಾಧ್ಯತೆಯೇ ಪಠ್ಯಕ್ಕೆ ಹಲವು ವ್ಯಾಖ್ಯಾನಗಳು ಬರಲು ಕಾರಣ. ಈ ವ್ಯಾಖ್ಯಾನಗಳು ತಮ್ಮ ಒಡಲಲ್ಲಿ ನಿರ್ದಿಷ್ಟ ಕಾಲದ ಸಾಂಸ್ಕೃತಿಕ ಆಶಯಗಳನ್ನು ಇಟ್ಟುಕೊಂಡಿರುತ್ತವೆ. ಸಾಹಿತ್ಯ ಕೃತಿಯೊಂದಿಗೆ ಅದನ್ನು ಕುರಿತಾದ ವಿಮರ್ಶೆ ಸಹ ಕಾಲದಿಂದ ಕಾಲಕ್ಕೆ ವಿಶ್ಲೇಷಣೆಗೆ ಒಳಗಾಗುತ್ತಲೇ ಇರುತ್ತದೆ. ಒಂದು ಸಾಹಿತ್ಯ ಕೃತಿಯಂತೆ ವಿಮರ್ಶೆ ಕೂಡ ಸಾಂಸ್ಕೃತಿಕ ಅಧ್ಯಯನಕ್ಕೆ ವಸ್ತುವಾಗಬಹುದು.

ಬೇಂದ್ರೆಯವರ 'ಜೋಗಿ' ಕನ್ನಡದ ಅತ್ಯುತ್ತಮ ಕವನಗಳಲ್ಲಿ ಒಂದು ಎಂಬುದಂತೂ ನಿಜ. ಆದರೂ ಪ್ರತಿಯೊಬ್ಬರ ವೈಯುಕ್ತಿಕ ಆಯ್ಕೆಗಳೂ ಭಿನ್ನ. ಆದ್ದರಿಂದ "ಜೋಗಿ" ಕವಿತೆಯನ್ನು "ಶತಮಾನದ ಕವಿತೆ" ಎಂದು ಸಂಪಾದಕರು ಗುರುತಿಸಲು ಕಾರಣಗಳೇನು? ಎಂಬ ಪ್ರಶ್ನೆ ಮೂಡುವುದು ಸಹಜ. ಈ ಪ್ರಶ್ನೆಗೆ ಉತ್ತರವನ್ನು ಮುನ್ನುಡಿಯಲ್ಲಿ ಕಂಡುಕೊಳ್ಳಬಹುದು. ಸಂಪಾದಕರು ತಮಗೆ 'ಜೋಗಿ' ಯಲ್ಲಿ ಕಂಡ ವಿಶಿಷ್ಟ ಅಂಶಗಳನ್ನು ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಈ ಸಂಕಲನದಲ್ಲಿ ಬೇಂದ್ರೆಯವರೇ 'ಜೋಗಿ' ಕವನಕ್ಕೆ 1951 ರಲ್ಲಿ ಬರೆದ ಸಂದರ್ಭ ಸೂಚಿಯಿಂದ ಹಿಡಿದು 1999 ವರೆಗಿನ ಲೇಖನಗಳಿವೆ. ಈ ಲೇಖನಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಲಾಗಿದೆ (ಕೊನೆಯಲ್ಲಿ ಎರಡು ಲೇಖನಗಳು ಮಾತ್ರ ಈ ಕ್ರಮದಲ್ಲಿಲ್ಲ. ಮೊದಲಲ್ಲೇ ಸಂಪಾದಕರು ಇದಕ್ಕೆ ಕಾರಣವನ್ನು ನೀಡಿದ್ದಾರೆ). ಕುರ್ತಕೋಟಿ. ಸುಮತೀಂದ್ರ ನಾಡಿಗ, ಎಚ್. ಎಸ್. ರಾಘವೇಂದ್ರರಾವ್, ಜಿ.ಎಸ್. ಅಮೂರ ಮೊದಲಾದ ಪ್ರಮುಖ ವಿಮರ್ಶಕರ ಮೌಲಿಕ ಲೇಖನಗಳು ಇಲ್ಲಿವೆ. ಇಲ್ಲಿನ ಲೇಖನಗಳಲ್ಲಿ ಸಂವಾದದ ಸರಣಿಯೊಂದನ್ನು ಕಾಣಬಹುದಾಗಿದೆ. ಉದಾಹರಣೆಗೆ ಎಚ್.ಎಸ್. ರಾಘವೇಂದ್ರರಾವ್ ರವರು ತಮ್ಮ ಲೇಖನದಲ್ಲಿ ಸುಮತೀಂದ್ರ ನಾಡಿಗರ ಅಭಿಪ್ರಾಯಗಳಿಗೆ ಪ್ರತಿಕ್ರಿಯಿಸಿರುವ ರೀತಿಯನ್ನು ಕಾಣಬಹುದಾಗಿದೆ. ಕುರ್ತಕೋಟಿ, ನಾಡಿಗ ಹಾಗೂ ಎಚ್. ಎಸ್. ರಾಘವೇಂದ್ರರಾವ್‌ರವರ ವಿಚಾರಗಳೇ ಇಲ್ಲಿನ ಬಹುಪಾಲು ಲೇಖನಗಳಲ್ಲಿ ಚರ್ಚಿತವಾಗಿರುವುದನ್ನು ಕಾಣಬಹುದಾಗಿದೆ.

"ಕಾವ್ಯಾಸಕ್ತರಿಗೆ" ' ಜೋಗಿ' ಕವನ ಕಾಲ ಕಾಲಕ್ಕೆ ಒಡ್ಡಿದ ಆಕರ್ಷಣೆ ಸವಾಲುಗಳನ್ನು ಕುತೂಹಲ ದಿಂದ ನೋಡ ಬಯಸುವವರಿಗೆ ಈ ಪುಸ್ತಕ ಉಪಯೋಗಕ್ಕೆ ಬರುತ್ತದೆ ಎಂಬ ಸಂಪಾದಕರ ಮಾತು ನಿಜ. ಈ ಮಾದರಿಯ ಪುಸ್ತಕವನ್ನು ರೂಪಿಸಿದ ಅವರ ಪ್ರಯತ್ನ ಶ್ಲಾಘನೀಯ.

■ *ಹೇಮ ಎಸ್.*



ಈ ಸರ್ತಿಯ ಸುಗ್ಗಿ

ಲೇಖಕ : ವೆಂಕಟ್ರಮಣಗೌಡ
ಮುದ್ರಣ : 2000
ಪುಟ : 110
ಬೆಲೆ : ರೂ. 85/-
ಪ್ರಕಾಶನ : ಎಂ. ಆರ್. ಎಲ್ ಪಬ್ಲಿಷಿಂಗ್ ಹೌಸ್, ಬೆಂಗಳೂರು.

ಮನುಜ ಪೇಟೆಯ ಸರಕುಗಳು ಸಾಹಿತ್ಯದ ಮೂಲಭೂತ ಸಾಮಗ್ರಿಗಳು. ' ಈ ಸರ್ತಿಯ ಸುಗ್ಗಿ' ಯಲ್ಲಿ ಈ ಸಾಮಗ್ರಿಗಳಿಂದ ತಯಾರಾದ ಕತೆಗಳಿವೆ. ಲೇಖಕರ ಪ್ರಾದೇಶಿಕ ಹಿನ್ನಲೆ ಕತೆಗಳಿಗೆ. ಭಿತ್ತಿಯಾಗಿವೆ. ಈ ಭಿತ್ತಿಯಲ್ಲಿ 13 ಕತೆಗಳು ಮೂಡಿವೆ. ಹರೆಯದ ಮನಸ್ಸಿನ ಕನಸು ನಿರಾಸೆಗಳು, ಮನುಷ್ಯನ ಸಣ್ಣತನ. ದುರಾಸೆಯ ಫಲವಾದ ದುರಂತ ಇವುಗಳನ್ನು ಆಧರಿಸಿದ ಕತೆಗಳಿವೆ. ಇದರೊಂದಿಗೆ ಕಚಗುಳಿಯಿಟ್ಟು ನಗಿಸುವ ಕತೆಗಳಿವೆ.

ಹರೆಯ ಕನಸುಗಳ ಸುಗ್ಗಿ ಕಾಲ. ಈ ಸರ್ತಿಯ ಸುಗ್ಗಿ, ದನಿಸಾಲು, ಆವ್ತಿ, ವಾಸಂತಿಯ ಚಿತ್ರ ಇವೆಲ್ಲ ಹರೆಯದ ಹೊಸ್ತಿಲಲ್ಲಿ ನಿಂತ ಹೆಣ್ಣುಗಳ ಕನಸು ಅದರೊಂದಿಗಿನ ನಿರಾಸೆಯನ್ನು ಸಶಕ್ತವಾಗಿ ಕಟ್ಟಿಕೊಡುತ್ತದೆ. 'ಆವ್ತಿ'ಯ ಗಂಗೆ, 'ವಾಸಂತಿಯ ಚಿತ್ರ' ಕತೆಯ ವಾಸಂತಿ ಇಬ್ಬರದೂ ಭಿನ್ನ ರೀತಿಯ ದುರಂತ. ಗಂಗೆಯದು ತನ್ನ ಬಾಳಿನ ದುರಂತವನ್ನು ಗುರುತಿಸಲಾಗದ ಮುಗ್ಧತೆ. ಈ 'ಸರ್ತಿಯ ಸುಗ್ಗಿ'ಯ ಜಾನಕಿ ಮುಗ್ಧತೆಯ ಪೊರೆಯನ್ನು ಕಳಚಿ ಅರಿವನ್ನು ಪಡೆಯುತ್ತಾಳೆ. ಗಂಗೆ, ಜಾನಕಿ, ರೂಪಿ ಇವರೆಲ್ಲರ ಮುಗ್ಧತೆ, ಕನಸು, ಜೀವನ ಪ್ರೀತಿಯನ್ನು ಹಿಡಿದಿಡುವಲ್ಲಿ ಲೇಖಕರು ಸಫಲಾಗಿದ್ದಾರೆ.


ರಂಗಸ್ಥಳ, ಕೇಶವಳ್ಳಿಯ ರಬ್ಬರ್ ಹೆಂಗಸರು, ಮೀನು ಪೇಟೆಯಲ್ಲಿ ಒಂದು ದಿನ ಇವುಗಳನ್ನು ಓದಿದಾಗ ಗೊರೂರರ ಹಾಗೂ ತೇಜಸ್ವಿಯವರ ಬರವಣಿಗೆ ನೆನಪಾಗುತ್ತದೆ. ಲೇಖಕರ ಹಾಸ್ಯಪ್ರಜ್ಞೆ ಈ ಕತೆಗಳಲ್ಲಿ ಮಿಂಚಿದೆ. ಒಂದು ಸಣ್ಣ ಸಂಗತಿಯನ್ನು ರಂಜನೀಯವಾಗಿ ಹಿಡಿದಿಡಬಲ್ಲ ಅವರ ರೀತಿಗೆ ಈ ಕತೆಗಳು ಒಳ್ಳೆಯ ಉದಾಹರಣೆ.

ರಂಗಸ್ಥಳ, ಅಂಕ, ಈ ಸರ್ತಿಯ ಸುಗ್ಗಿ, ಆವ್ತಿಯಂತಹ ಕತೆಗಳಲ್ಲಿ ಬರುವ ಸಾಂಸ್ಕತಿಕ ವಿವರಗಳು ಲೇಖಕರ ಪ್ರಾದೇಶಿಕ ಹಿನ್ನಲೆಯನ್ನು ಪರಿಚಯಿಸುತ್ತದೆ.

ವೆಂಕಟ್ರಮಣ ಗೌಡರದು ತಿಳಿಹಾಸ್ಯ ಮಿಶ್ರಿತ ಸರಳ ಗದ್ಯ. ತಮಗೆ ಕಂಡಷ್ಟನ್ನು ಕಂಡಿರಿಸುವ ಅವರ ಶೈಲಿಯಲ್ಲಿ ಆಕರ್ಷಕ ಗುಣವಿದೆ. ಅವರ ಭಾಷೆಗೆ ಪ್ರಾದೇಶಿಕ ಸೊಗಡಿದೆ. ಆದರೆ ಎಲ್ಲೂ ಇದು ಓದುಗರಿಗೆ ತೊಡಕಾಗಿಲ್ಲ. ವಸ್ತು, ಹಾಗೂ ಕಲೆಗಾರಿಕೆಯ ದೃಷ್ಟಿಯಿಂದ 'ಭೂಪ ಕೇಳೆಂದ' ಬಹಳ ಒಳ್ಳೆಯ ಕತೆ.

ಸುತ್ತಲಿನದನ್ನು ಕ್ಯಾಮರಾ ಕಣ್ಣುಗಳಿಂದ ನೋಡುತ್ತಾ ಈ ಕತೆಗಾರ ತಮಗೆ ಚೆಂದ ಕಂಡದ್ದನ್ನು ಕ್ಲಿಕ್ಕಿಸಿದ್ದಾರೆ. ಈ ಕತೆಗಳಲ್ಲಿ ಸರಳತೆಯಿದೆ. ತನ್ನ ಅನುಭವಕ್ಕೆ ರೂಪ ಕೊಡಬೇಕೆಂಬ ಲೇಖಕನ ಪ್ರಯತ್ನವಿದೆ. ಈ ಕಥಾಲೋಕದಲ್ಲಿ ಓದುಗ ಆಯಾಸವಿಲ್ಲದೆ ಓಡಾಡಬಹುದು.

■ *ಹೇಮ ಎಸ್.*



‘ಒಂದಿಷ್ಟು ಹಸಿಮಣ್ಣು’

ಲೇಖಕಿ : ರೂಪ, ಹಾಸನ
ಪ್ರ : 2000
ಪುಟಗಳು : xii + 76
ಬೆಲೆ : ರೂ. 751/-
ಪ್ರಕಾಶನ : ನೆಲಮನೆ ಪ್ರಕಾಶನ, ರಂಗನಾಥನಗರ
ಶ್ರೀರಂಗಪಟ್ಟಣ್ಣ, ಮಂಡ್ಯಜಿಲ್ಲೆ

ಪ್ರತಿಭಾನ್ವಿತ ಕವಿಯತ್ರಿಯ ಚಹರೆಗಳನ್ನು ಮೈಗೊಡಿಸಿಕೊಂಡಿರುವ ರೂಪಾ, ಹಾಸನ ಅವರ ಮೊದಲ ಸಂಕಲನ ಹಲವಾರು ಕಾರಣಕ್ಕೆ ಭರವಸೆ ಹುಟ್ಟಿಸುವಂಥದ್ದು.

ಒಂದಿಷ್ಟೇ ಇಷ್ಟು
ಹಸಿಮಣ್ಣು ನೀಡು ಗೆಳೆಯ
ನಾ ಅದರಲ್ಲೇ ಹೂತು
ಪರಿಪಕ್ವವಾಗಿ ಮಾಗಿ
ತ್ರಿವಿಕ್ರಮನಂತೆ ಬೆಳೆದು
ಕಲ್ಪವೃಕ್ಷವಾಗಿ ಹೊರಹೊಮ್ಮುತ್ತೇನೆ.

ಎನ್ನುವ ಎಚ್ಚರ ಮತ್ತು ಆತ್ಮವಿಶ್ವಾಸವನ್ನು ಈ ಸಂಕಲನದ ಎಲ್ಲಾ ಕವಿತೆಗಳೂ ಕಾಯ್ದುಕೊಂಡಿವೆ. ಆದರೆ, ಅವು ಬಹಳಷ್ಟು ಕವಿಯತ್ರಿಯರು ಪ್ರಕಟಪಡಿಸುವ ಬಂಡಾಯ ಗುಣದ ನಿರ್ಜೀವ ಹೇಳಿಕೆಗಳಾಗೇ ಉಳಿಯುವುದಿಲ್ಲ ಎನ್ನುವುದು ಗಮನಾರ್ಹ. ಮಹಿಳೆಯರ ಬಗೆಗಿನ ಅನುಕಂಪದ ರಚನೆಗಳಲ್ಲಿ, ಅವು ಕಾಡುವ ಗುಣ ಹೊಂದಿಲ್ಲದೆ ಇದ್ದರೂ ಅದರ ಹಿಂದಿನ ಆರೋಗ್ಯಕರ ನಿಲುವು ಮೆಚ್ಚಗೆ ಮೂಡಿಸುತ್ತವೆ.

ಬಹಳಷ್ಟು ಕವಿಯತ್ರಿಯರಲ್ಲಿ ಇಲ್ಲದ ಆತ್ಮವಿವೇಚನೆ, ಆತ್ಮಶೋಧನೆ (ಇದನ್ನು ನೇತ್ಯಾತ್ಮಕವಾಗಿ ತೆಗೆದುಕೊಳ್ಳಬೇಕಾಗಿಲ್ಲ) ರೂಪಾ ಅವರಲ್ಲಿದೆ. ಉದಾರಣೆಗೆ ಅವರ ‘ಸಾರ್ಥಕ್ಯ’ಕವಿತೆಯನ್ನು ಗಮನಿಸಬಹುದು.

‘ವಿತಂಡವಾದವ ಎಷ್ಟಾದರೂ ಮಾಡಿ ಅವರಿವರ ಬಾಯ್ಮುಚ್ಚಬಹುದು
ಹೇಗೆ ಮುಚ್ಚುವುದು ಈ ಅಂತರಾತ್ಮನಾ ಬಾಯಿ?
‘ಎಲ್ಲ ಎಲ್ಲವನ್ನು ಬಿಡದೆ ಅಳೆದು ಬಿಡಬಹುದು
ತನ್ನ ತಾ ಅರಿಯಲಾಗದ ಅಳತೆ ಎಷ್ಟು ತಿಳಿದರೇನು? ’

ಎನ್ನುವ ಎಚ್ಚರ ಮೆಚ್ಚುಗೆ ಹುಟ್ಟಿಸುವಂಥದ್ದು ಇದೇ ಬಗೆಯ ಎಚ್ಚರವನ್ನು ‘ಹೊಲಿಗೆ’ ‘ಕನ್ನಡಿಗಳು ಬೇಕು’, ‘ಒಳಗಿನವನು’ ‘ಪ್ರತಿಬಿಂಬ’ ‘ಸೂಜಿಗಳು’ ಸೂಜಿ ಮತ್ತು ಅವಳು’ ‘ಗಾಳಿಪಟ’ ಕವಿತೆಗಳಲ್ಲೂ ಕಾಣಬಹುದು.

‘ಎಲ್ಲಬಗೆಯ ಸಾಹಿತ್ಯ ಪ್ರಕಾರಗಳ ಮೊದಲ ಉದ್ದೇಶ ಆತ್ಮಸಂತೋಷ. ನಂತರದ ಹಂತದಲ್ಲಿ ಸಹೃದಯ, ವಿಮರ್ಶಕ ಮುಂತಾದವರು ಬರುತ್ತಾರೆ’ ಎನ್ನುವ , ಕಾವ್ಯ ಪ್ರಯೋಜನದ ಮೂಲಭೂತ

ಅರಿವನ್ನು ಹೊಂದಿರುವ ರೂಪಾ ಅವರು, ಗಂಭೀರ ಕಾವ್ಯದ ಓದುವಿಕೆಯನ್ನು ಬಯಸುವವರು. ಸುತ್ತಮುತ್ತಲ ಬದುಕಿನ ವ್ಯಂಗ್ಯ ನೋವು, ನಲಿವುಗಳನ್ನು ಕಾಳಜಿಯ ಕಣ್ಣುಗಳಿಂದ ಕಂಡವರು ತನ್ನ ಕಾಯಕವನ್ನು ಅನುಸರಿಸುತ್ತಲೇ ತನ್ನ ಪಾಡಿಗೆ ತಾನು ಸಾಗುತ್ತಾ, ತನ್ನ ಮುಂದಿನ ವಾಸ್ತವ ಪ್ರಪಂಚ ಕಂಡು ಬಿಕ್ಕುವ'ಕಣ್ಕಾಪು ಬಿಗಿದ ಕುದುರೆಯಾಗಲಿ,' 'ತಾಯಿ ನೆಲವ ಒಮ್ಮೆಯೂ ಸೋಕದೆ/ಬಣ್ಣಬಣ್ಣದ ಬೋಗುಣಿಗಳಲ್ಲಿ ಬೆಳೆದು/ತಾಯಿ ಬೇರೂ ಕತ್ತರಿಸಿಕೊಂಡು ಕುಬ್ಜವಾಗುವ 'ಬೋನ್ಸಾಯ್'ಆಗಲಿ ; ಕಳೆದುಹೋದ ಸಣ್ಣಕಣ್ಣಿನ ಸೂಜಿಯನ್ನು ಹುಡುಕುವ 'ಅರೆಗುರುಡಿನ ಅಜ್ಜಿ' 'ಅಕ್ಕಿ ಗೋಧಿ ಸಕ್ಕರೆ' 'ಟಿ ವಿ, ಫ್ರಿಜ್ಜು, ಸೋಫಾ,' ಅಡುಗೆ ಮನೆಯ ಕತ್ತಲಲ್ಲಿ ದೇವರು ಮನೆಯ ಉಸಿರುಗಟ್ಟಿಸುವ ಮೌನದಲ್ಲಿ ಕಳೆದು ಹೋಗಿರಬಹುದಾದ ಹುಡುಗಿಯನ್ನು ಹುಡುಕುವಲ್ಲಿ ಈ ತನ್ಮಯತೆ ಕಾಣುತ್ತದೆ.


ಬದುಕಿನ ಮಿತಿಯನ್ನು ಅರಿಯುವ 'ಗಾಳಿಪಟ' ದ ಕುತೂಹಲಕ್ಕೆ 'ಹಾರುವ ಬಯಕೆಗೆ ದಾರ ಮಿತಿ!'ಎಂದು ಸೊಗಸಾಗಿ, ಸಾಂಕೇತಿಕವಾಗಿ ಬಿಚ್ಚಿಡುವ ಕವಿತೆ. 'ಕಣ್ಣಿದ್ದೂ ಇಲ್ಲದವರ ಕಾಲ್ತುಳಿತಕ್ಕೆ ಸಿಕ್ಕು' 'ನಾಳೆಗೆ ಮತ್ತೆ ಹೊಸತು'ಮೂಡುವ ಆಶಾಭಾವನೆ 'ರಂಗವಲ್ಲಿ' ಯಲ್ಲೂ ಕಾಣುತ್ತಾರೆ.

ರೂಪಾರ ಹಲವಾರು ಕವಿತೆಗಳಲ್ಲಿ ಮನಸ್ಸು ತಟ್ಟುವ ಶಕ್ತಿಯಿದ್ದರೂ, ಅವು ಮನಸ್ಸು ತಟ್ಟದೆ ನೇರ ಹೇಳಿಕೆಗಳಾಗಿ ಸರಿದು ಹೋಗಿಬಿಡುತ್ತವೆ. ಆದರೂ,

'ಇಂದಲ್ಲ ನಾಳೆ
ಗೆದ್ದೇ ಗೆಲುವೆನೆಂಬ ವಿಶ್ವಾಸ
ಆ ಘಳಿಗೆಗಾಗಿ
ತಾಳ್ಮೆಯಿಂದ ಕಾಯ್ವ ಶ್ವಾಸ
ನಮ್ಮದಾದರೆ
ಗೆಲುವು ನಮ್ಮದೇ!'

ಎನ್ನುವ ಅಪಾರ ಆತ್ಮವಿಶ್ವಾಸ, ಬೆಳಕಿನ ಬಗೆಗಿನ ಹಂಬಲ, ' ಬಾಂದಳವಿನ್ನೂ ಮಿಕ್ಕಿದೆ' ಎನ್ನುವ ಮಹತ್ಮಾಕಾಂಕ್ಷೆ ಹೊಂದಿರುವ ರೂಪಾ ಅವರಿಂದ ಬಹಳಷ್ಟುನ್ನು ಖಂಡಿತಾ ನಿರೀಕ್ಷಿಸಬಹುದು.

ಎಂ.ಆರ್. ಭಗವತಿ.



'ಕಲಾಸಂವೇದನೆಯ ಒಳನೋಟಗಳು'

ಲೇಖಕ : ಕೆ.ವಿ. ಸುಬ್ರಮಣ್ಯಂ
ಮುದ್ರಣ : 1997
ಪುಟ : 110
ಬೆಲೆ : ರೂ. 50/-
ಪ್ರಕಾಶನ : ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು

ಕಲೆ, ಕಲಾವಿದ ಮತ್ತು ಭಾರತೀಯ ಕಲಾ ಇತಿಹಾಸದೊಂದಿಗೆ 'ಸಮಕಾಲೀನ ಕಲಾವಿದರ ಸೃಷ್ಟಿ ಹಾಗೂ ಜೀವನಗಳನ್ನು ತಮ್ಮ ಬರಹದಲ್ಲಿ ತಂದುಕೊಳ್ಳುವ ಪ್ರಯತ್ನದಲ್ಲಿ ಹಲವು ಸವಾಲುಗಳನ್ನು

ದಿಟ್ಟವಾಗಿ ಎದುರಿಸಬೇಕಾಗಿದೆ'ಎನ್ನುವ ಅರಿವಿನೊಂದಿಗೆ, 'ಕಲಾ ಸಂವೇದನೆಯ ಒಳನೋಟ'ಗಳನ್ನು ಆಪ್ತವಾಗಿ ವಿವರಿಸುವ ಪುಸ್ತಕ.


'ನಿಜವಾದ ಕಲಾವಿದನೊಬ್ಬ ತನ್ನ ಒಳಗಿನ ಒತ್ತಡದ ಕಾರಣಕ್ಕೆ ಹೇಗೆ ಅಭಿವ್ಯಕ್ತಿಸದೆ ಇರಲಾರನೋ ಹಾಗೆಯೇ, ನಿಜವಾದ ಕಲಾ ಬರಹಗಾರ - ವಿಮರ್ಶಕ ತನ್ನ ಸಂದರ್ಭದ ತನ್ನ ಬದುಕಿನ ಅಂಗವಾದ ಕಲಾವಿದರ ಸೃಷ್ಟಿಯ ಒಳನೋಟಗಳನ್ನು ಅನುಭವಿಸಿದೆ, ಬರೆಯದೆ ಇರಲಾರ'ಎನ್ನುವ ಲೇಖಕರು ಈ ಬಗ್ಗೆ ಪ್ರಬಂಧವೊಂದರಲ್ಲಿ ತಮ್ಮ ನೈಜ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಅದು ಎಷ್ಟು ಸತ್ಯ ಎಂಬುದು ಕಲಾ ಪ್ರಪಂಚದೊಂದಿಗೆ ತೀವ್ರವಾಗಿ ಒಳಗೊಳ್ಳುವ ಸಂವೇದನಾ ಮನಸ್ಸಿಗೆ ಮಾತ್ರ ಅರ್ಥವಾಗುವ ವಿಚಾರ.

ಸಮಕಾಲೀನ ಕಲೆ, ಕಲಾಸೃಷ್ಟಿ- ಅದರ ಬದಲಾದ ಆಶಯಗಳ ಚಿಂತನೆಯೊಂದಿಗೆ, 'ಪೂರ್ವ - ಪಶ್ಚಿಮಗಳ ಸಮ್ಮಿಲನದಂಥ ಪರ್ಯಾಯ ಚಿಂತನೆಗಳು ಕಲಾರಂಗಗಳಲ್ಲೂ' ಬೆಳೆಯಬೇಕೆಂದು ಕಳಕಳಿ ಲೇಖಕರದು. 'ಕಲೆ ಮತ್ತು ಸಾಹಿತ್ಯ'ದ ಪೂರಕ ಮತ್ತು ವಿಶಿಷ್ಟ ಸಂಬಧದ ಬಗ್ಗೆ- 'ಕಲೆ ಮತ್ತು ಸಾಹಿತ್ಯ','ಸ್ವಚ್ಛಂದ ಕಾವ್ಯದೊಂದಿಗೆ ಹರಿದ ಸ್ವಚ್ಛಂದ ರೇಖೆಗಳು' ಪ್ರಬಂಧಗಳಲ್ಲಿ ವ್ಯಕ್ತವಾಗಿದೆ. ಕಾವ್ಯದಲ್ಲಿ ಕಲೆಯ ಪ್ರಭಾವ - ಕಲೆಯಲ್ಲಿ ಕಾವ್ಯದ ಪ್ರಭಾವ, ಇತ್ಯಾದಿ, ಪರಸ್ಪರ ಕೊಟ್ಟು ತೆಗೆದು ಕೊಳ್ಳುವ ಅಭಿವ್ಯಕ್ತಿಯ ಬಗೆಗಿನ ಚಿಂತನೆಗಳು ಇಲ್ಲಿವೆ. ಕಲಾವಿದರಾದ ಜಾನ್ ದೇವರಾಜ್ ಯೂಸುಫ್ ಅರಕ್ಕಾಲ್, ಎಸ್. ಜಿ. ವಾಸುದೇವ್ - ಅವರ ಅಭಿವ್ಯಕ್ತಿಗಳಲ್ಲಿ ಕನ್ನಡ ಸಾಹಿತ್ಯದ ಪ್ರಭಾವಗಳ ವಿವರಗಳಿವೆ.

ಲೇಖಕರ ಕಲೆಯ ಬಗೆಗಿನ ಆಶಯ, ಅಭಿಪ್ರಾಯಗಳು ಕೇವಲ ಒಣ ಅಭಿವ್ಯಕ್ತಿಯಾಗಿಲ್ಲ. 'ಅವು ಹಲವು ಕಡೆ ಕಾವ್ಯದ ಸ್ವಚ್ಛಂದ ಪ್ರವಾಹ ಮತ್ತು ಕಲೆಯ 'ಸ್ವಚ್ಛಂದ ರೇಖೆ'ಗಳಾಗಿ ಹರಿದಿರುವುದು ವಿಶೇಷ. ಇಲ್ಲಿ ಕನ್ನಡ ಸಾಹಿತ್ಯ ಮತ್ತು ಕಲೆ ಕುರಿತ ಸಮಾನ ಅಭಿರುಚಿಗಳು ವ್ಯಕ್ತವಾಗಿವೆ. ಅದರ ಫಲವಾಗಿ ಸಾಹಿತ್ಯ ಮತ್ತು ಕಲೆಯ ಹಲವು ಸೂಕ್ಷ್ಮ ಒಳ್ಳನೋಟಗಳನ್ನು ಕಾಣಬಹುದು.

ಇಂದಿನ ಕಲಾವಿಮರ್ಶೆಯ 'ಬಹುತೇಕ ಮಾರುಕಟ್ಟೆಯ ಸರಕಾಗಿರುವ ಸಂದರ್ಭದಲ್ಲಿ ಅದಕ್ಕೆ ಪೂರಕವಾಗುವಂತೆ ಕಲೆಯ ಪರಿಚಯ ವಿಮರ್ಶೆ ಹಾಗೂ ಪ್ರಚಾರ ಸಾಮಾಗ್ರಿಯಂಥತ ಸಾಹಿತ್ಯ ಪ್ರಕಟವಾಗುತ್ತಿದೆ. ಈ ನಡುವೆ ಅಲ್ಲೊಂದು ಇಲ್ಲೊಂದು ಎಂಬುವಂತೆ ಮನಸ್ಸಿನ ಒತ್ತಡದಿಂದ ಹೊರಬಂದ ಕೃತಿಗಳೂ ಇವೆ' ಎನ್ನುವ ಅರಿವು ಕಾಣುತ್ತದೆ. ಹಾಗೇ ಇಂದಿನ ಕಲಾಪ್ರಕಟಣೆಗಳ ಸ್ಥಿತಿ, ಕಲಾ ಸಾಹಿತ್ಯದ ಗುಣಮಟ್ಟ, ಆಶಯ ಅವಕಾಶಗಳು; ಪ್ರಕಾಶಕರ ಕೊರತೆ, ಕಲೆಯನ್ನು ಹೇಗೆ ಪರಿಭಾವಿಸಬೇಕು - ಎನ್ನುವ ಬಗ್ಗೆ ಹಲವು ವಿಚಾರಗಳಿವೆ. ಇಂದಿನ ಕಲಾವಿದರಲ್ಲಿ 'ಮಕ್ಕಳ ಆಟದಂಥ ಒಳನೋಟ' ('child sensibility') ಇದನ್ನು ಕಾವ್ಯಕ್ಕೂ ಅನ್ವಯಿಸಬಹುದು ಕಾಣೆಯಾಗುತ್ತಿರುವ ಬಗ್ಗೆ ಸುಬ್ರಮಣ್ಯಂ ಅವರ ಕಳಕಳಿ ಮೆಚ್ಚಬೇಕಾದ್ದು.

■ *ಎಂ. ಆರ್. ಭಗವತಿ*





‘ಮಜಲುಗಳು’

ಲೇಖಕ : ಡಾ. ಎಚ್. ಎಸ್. ಸುಜಾತ
ಮುದ್ರಣ : 1997
ಪುಟ : viii + 60
ಬೆಲೆ : ರೂ. 50/-
ಪ್ರಕಾಶನ : ಸುಹಾಸ ಪ್ರಕಟಣೆಗಳು, 313, 4ನೇ ಮುಖ್ಯರಸ್ತೆ, ಮಾರುತಿ ದೇವಸ್ಥಾನದ ಬೀದಿ, ಕುವೆಂಪು ನಗರ, ಮೈಸೂರು - 570001

‘ಕತ್ತಲಾಯಿತೇ?
ಕೊರಗುವುದು ಬೇಡ
ಹಣತೆ ಹಚ್ಚೋಣ’

ಎನ್ನುವ ಆರೋಗ್ಯಕರ ದೃಷ್ಟಿಯಿಂದ ಹೊರಡುವ ಎಚ್. ಎಸ್ ಸುಜಾತ ಅವರ ಕಾವ್ಯ ಧ್ವನಿ ಅವರ ಈ ಮೊದಲ ಕವನ ಸಂಕಲನದಲ್ಲಿ ಹರಡಿಕೊಂಡಿವೆ ಎಂಥಾ ಸಂಕಟ ಸನ್ನಿವೇಶಗಳಲ್ಲೂ ಬದುಕಿನ ಬಗೆಗಿನ ಎಚ್ಚರ ಮತ್ತು ಆಶಾಭಾವನೆಯಿಂದ ಹೊರಡುವ ಇವರ ಹಲವಾರು ಕವನಗಳು ಮೆಚ್ಚುಗೆ ಹುಟ್ಟಿಸುವಂಥವು ಹನಿಗವನಗಳನ್ನು ಬರೆಯುವಾಗ

ಗಂಭೀರವಾಗಿ ಬರೆಯುವ ಕವಿಯತ್ರಿ, ಅವುಗಳನ್ನು ‘ಬದುಕಿನ ಬಗ್ಗೆ, ಮಾನವ ಸ್ವಭಾವಗಳ ಬಗ್ಗೆ, ಗಂಭೀರ ಒಳನೋಟಗಳನ್ನು ದರ್ಶಿಸಲು ಬಳಸಿಕೊಳ್ಳುತ್ತಾರೆ’ (ಡಾ. ಸಿ. ಎನ್. ರಾಮಚಂದ್ರನ್ ‘ಹಿನ್ನುಡಿಯಲ್ಲಿ)

ಸುಜಾತ ಅವರು ಭಾಷೆಯನ್ನು ಎಚ್ಚರಿಕೆಯಿಂದ ಬಳಸುತ್ತಾರೆ. ಬದುಕಿನ ಬಗೆಗಿನ ನಿರಾತಂಕ ಅಶಾವಾದ ಮತ್ತು ಬದುಕಿನ ಎಲ್ಲಾ ಕ್ಷಣಗಳನ್ನು ಅನುಭವಿಸುವ ತುಡಿತ ಅವರ ‘ಹನಿ -ಮಿನಿ’ ಕವನಗಳಲ್ಲಿ ವ್ಯಕ್ತವಾಗಿವೆ, ಹನಿ ಕವಿತೆಗಳು, ಅವರ ಉಳಿದ ಕವಿತೆಗಳಿಂತ ಹೆಚ್ಚು ಸಂತೋಷ ಕೊಡುತ್ತವೆ:

‘ನಾನು ಪ್ರಕ್ಷುಬ್ಧ ಕ್ಷಣಗಳನ್ನು ಪ್ರೀತಿಸುತ್ತೇನೆ
ಆಗ
ನನ್ನ ನಾನು ಅರಿಯುತ್ತೇನೆ ....;
ಮಾತುಗಳನ್ನು
ಅರ್ಥಗಳನ್ನು
ಅವುಗಳ ನಡುವಿನ ಕಂದರವನ್ನು ಅನುಭವಿಸುತ್ತೇನೆ;(ಹನಿ -ಮಿನಿಗಳು)

‘ಜೀವನದಲ್ಲಿ ಸತ್ವಭರಿತ ಸವಾಲು /ಒಂದು ಸೌಭಾಗ್ಯ/ಅರ್ಥಪೂರ್ಣಸೋಲು/ಎಲ್ಲಕ್ಕಿಂತ ಮಿಗಿಲು ‘ಅಂತಿಮ ಗೆಲುವು ಸಪ್ಪೆಯಾದಲ್ಲಿ /ನನಗೆ ಅನಾಸಕ್ತಿ/

ಕುತೂಹಲಕರ ಸೋಲು /ಆಕರ್ಷಣೀಯ ಎಂದೆಂದಿಗೂ/ ಎನ್ನುವ ನಿರಾಂತಕ ಅಶಾವಾದ ಗಮನ ಗಮನ ಸೆಳೆಯುವ ಅಂಶವಾಗಿದೆ.

ಒಟ್ಟಾರೆ, ತಿಳುವಳಿಕೆಯಿಂದ, ನಿರ್ಲಿಪ್ತತೆಯಿಂದ ಕೂಡಿ ಮಾಗಿದ ಅಭಿವ್ಯಕ್ತಿ ಎಚ್. ಎಸ್. ಸುಜಾತಅವರದು. ಅವರ ಹಲವು ಕವನಗಳು ಮೊದಲ ಓದಿಗೇ ಕಾಡುವಂಥವೇ ಆಗಿವೆ. ಸುಜಾತ ಅವರ ಬಗ್ಗೆ ಇನ್ನೂ ಹೆಚ್ಚಿನ ಆಶಾವಾದ ಇಟ್ಟುಕೊಳ್ಳಬಹುದು.

■ *ಎಂ.ಆರ್. ಭಗವತಿ*

ಈ ಸಂಚಿಕೆಯ ಲೇಖಕರು

ಬರಗೂರು ರಾಮಚಂದ್ರಪ್ಪ : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಜನಪರ-ಬಂಡಾಯ ಚಳುವಳಿಯ ಪ್ರಮುಖ ಲೇಖಕರು, ಸಿನೆಮಾ ನಿರ್ದೇಶಕರು ಹಾಗೂ ಅಧ್ಯಾಪಕರು.

ಎಲ್.ಎನ್. ಗೋಪಾಲಕೃಷ್ಣ : ಶೈಕ್ಷಣಿಕ ಮತ್ತು ಸಾರ್ವಜನಿಕ ಹಿತಾಸಕ್ತಿ ವಿಷಯಗಳಲ್ಲಿ ಕ್ರಿಯಾಶೀಲರು, ಬೆಂಗಳೂರಿನ ಶೇಷಾದ್ರಿಪುರಂ ಕಿರಿಯ ಕಾಲೇಜಿನ ಇಂಗ್ಲಿಷ್ ಭಾಷಾ ಉಪನ್ಯಾಸಕರು ಅನೇಕ ಲೇಖನಗಳು ವಿವಿಧ ಇಂಗ್ಲಿಷ್ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ದನ್‌ಕಿನ್ ಜಳಕಿ : ಹೈದರಾಬಾದಿನ CIEFLನಲ್ಲಿ ಪ್ರತಿಭಾವಂತ ಸಂಶೋಧನಾ ವಿದ್ಯಾರ್ಥಿ, ಕನ್ನಡದ ಆತ್ಮಕತೆಗಳ ಬಗ್ಗೆ ಸಂಶೋಧನಾ ಪ್ರಬಂಧ ರೂಪಿಸುತ್ತಿದ್ದಾರೆ. ಕ್ರೈಸ್ಟ್ ಕಾಲೇಜು ಲೇಖನ ಸ್ಪರ್ಧೆಗಳಲ್ಲಿ ಸಂಚಯ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನಿತರು.

ಕೆನಿತ್ ಕೆನ್‌ಸ್ಟನ್ : ಅಮೆರಿಕಾದ ಮೆಸಾಚೆಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರೊಫೆಸರ್, ಸಮಕಾಲೀನ ಶ್ರೇಷ್ಠ ಚಿಂತಕ ನೋಮ್ ಚಾಮ್‌ಸ್ಕಿಯ ಸಹೋದ್ಯೋಗಿ.

ಟಿ.ವೀ. ಶ್ರೀನಾಥಶಾಸ್ತ್ರಿ : ಕನ್ನಡ ಗಣಕ ಪರಿಷತ್ತಿನ ಪದಾಧಿಕಾರಿಗಳು, ಕನ್ನಡದ ಸಾಫ್ಟ್‌ವೇರ್ ಏಕರೂಪತೆ ರೂಪಿಸುವಲ್ಲಿ ಬಹಳಷ್ಟು ಶ್ರಮಿಸಿದ್ದಾರೆ. ಬರೆಯುವಿಕೆ ಭಾಷೆ ಸಾಹಿತ್ಯ ಇವುಗಳಲ್ಲಿ ಆಸಕ್ತಿ. ಎನ್.ಎ.ಎಲ್. ವಿಜ್ಞಾನಿ.

ಎಸ್.ಆರ್. ವಿಜಯಶಂಕರ : ಪ್ರಸ್ತುತ 'ಸಿಸ್ಕೊ' ಸಾಫ್ಟ್‌ವೇರ್ ಕಂಪೆನಿಯ ಉದ್ಯೋಗಿ, ಸಾಹಿತ್ಯದ ಗಂಭೀರ ಅಧ್ಯಯನಶೀಲರು ಇವರ ವಿಮರ್ಶಾ ಸಂಕಲನ 'ಮನೋಗತ' ಪ್ರಕಟಗೊಂಡಿದೆ ಅನೇಕ ಲೇಖನಗಳನ್ನ ಬರೆದಿದ್ದಾರೆ. ಹೊಸ ಲೇಖನಗಳ ಸಂಕಲನ ಪ್ರಕಟಗೊಳ್ಳಲಿದೆ.

ವಸುಧೇಂದ್ರ : ಪ್ರಸುತ್ತ 'ಜೆನಿಸಿಸ್' ಸಾಫ್ಟ್‌ವೇರ್ ಕಂಪೆನಿಯ ಉದ್ಯೋಗ, ಪ್ರತಿಭಾವಂತ ಕತೆಗಾರ, ಪ್ರಸ್ತುತ ಒಂದು ಕಥಾ ಸಂಕಲನ ಪ್ರಕಟಣೆಗೆ ಸಿದ್ಧಗೊಳ್ಳುತ್ತಿದೆ. ಭಾವನಾ ಮತ್ತಿತರ ಪತ್ರಿಕೆಗಳಲ್ಲಿ ಇವರ ಕತೆಗಳು ಬೆಳಕು ಕಂಡಿವೆ.

ಪ್ರತಿಭಾ ನಂದಕುಮಾರ್ : ಕವಯತ್ರಿ, ಪತ್ರಕರ್ತೆ ಹಾಗೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿ ಕೊಂಡಿದ್ದಾರೆ. ಈಚಿನ ಕವನ ಸಂಕಲನ 'ಆಹಾ ಪುರುಷಾಕಾರಂ' ಪ್ರಕಟಗೊಂಡಿದೆ.


ಚಲಪತಿ ಆರ್. : ಬೆಂಗಳೂರು ಯಲಹಂಕದ ಶೇಷಾದ್ರಿಪುರಂ ಕಾಲೇಜಿನ ಅಧ್ಯಾಪಕ, ಅನೇಕ ಕವಿತೆ ಲೇಖನಗಳನ್ನ ಬರೆದಿರುವ ಸೂಕ್ಷ್ಮ ಸಂವೇದನೆಯ ಸಾಹಿತ್ಯದ ಅಧ್ಯಾಪಕ.

ವಿರೇಂದ್ರ ಸಿಂಪಿ : ನಿವೃತ್ತ ಕನ್ನಡ ಪ್ರೊಫೆಸರ್, ಅನೇಕ ಲಲಿತ ಪ್ರಬಂಧಗಳು ಲೇಖನಗಳು, ಪುಸ್ತಕಗಳು ಪ್ರಕಟಿಸಿದ್ದಾರೆ. ಸಂಪಾದಿಸಿದ್ದಾರೆ.

ಭಗವತಿ ಎಂ. ಆರ್. : ಇಂಗ್ಲಿಷ್ ಎಂ.ಎ. ಓದಿರುವ ಭಗವತಿ ಚಿತ್ರಕಲೆ, ಸಾಹಿತ್ಯದ ಗಂಭೀರ ವಿದ್ಯಾರ್ಥಿ ಇವರ ಮೊದಲ ಕವನ ಸಂಕಲನ "ಏಕಾಂಕದ ಮಳೆ" ಬಿ.ಎಂ.ಶ್ರೀ. ಪ್ರಶಸ್ತಿ ಪಡೆದಿದೆ.

ಹೇಮಾ ಎಸ್. : ಕನ್ನಡ ಎಂ.ಎ. ಪದವೀಧರೆ. ಈಗಷ್ಟೇ ಸಂಶೋಧನಾ ಅಧ್ಯಯನಕ್ಕೆ ಡಾ|| ಕಲ್ಗುಡಿ ಅವರ ಮಾರ್ಗದರ್ಶನದಲ್ಲಿ ಆರಂಭಿಸಿದ್ದಾರೆ.

ಸಂಚಯದ ಪ್ರಕಟಣೆಗಳು






1)	ಗಾಜು (ಕವಿತೆಗಳು)	ವಿವಿಧ ಕವಿಗಳು	ರೂ. 8-00*
2)	ಎ.ಕೆ. ರಾಮಾನುಜನ್ ಹೆಜ್ಜೆ ಗುರುತು	ವಿವಿಧ ಲೇಖಕರು	ರೂ. 15-00*
3)	ಸಿಕಾಡ (ಕವನ ಸಂಕಲನ)	ಜಿ. ಕೆ. ರವೀಂದ್ರಕುಮಾರ್	ರೂ. 35-00
4)	ಡ್ರೀಮರ್ (ಕವಿತೆಗಳು)	ಡಿ. ವಿ. ಪ್ರಹ್ಲಾದ್	ರೂ. 18-00
5)	ಅಭಿಮುಖಿ (ಲೇಖನಗಳು)	ಎನ್.ಎಸ್. ಶ್ರೀಧರಮೂರ್ತಿ	ರೂ. 20-00
6)	ಬಗೆ ತೆರೆದ ಬಾನು (ಸಾಹಿತಿಗಳ ಸಂದರ್ಶನಗಳು)	ಸಂ. ಡಿ. ವಿ. ಪ್ರಹ್ಲಾದ್	ರೂ. 60-00
7)	ಚೌಕಟ್ಟು (ಸಮಕಾಲೀನ ದೃಶ್ಯಕಲೆ ಕುರಿತು)	ಸಂ. ಎಚ್.ಎ.ಅನಿಲ್‌ಕುಮಾರ್	ರೂ. 25-00
8)	ಮೌನದ ಹೊತ್ತು (ಅನುವಾದಿತ ಕವಿತೆಗಳು)	ಸು. ರಂ. ಎಕ್ಕುಂಡಿ	ರೂ. 20-00
9)	ಕನಸು ಕೋಳಿಯ ಕತ್ತು (ಕವನಗಳು)	ಗೋವಿಂದ ಹೆಗಡೆ	ರೂ. 30-00
10)	ನಾಟಕ ಅಂತರಂಗ (ಲೇಖನಗಳು)	ಎ.ಆರ್. ನಾಗಭೂಷಣ	ರೂ. 40-00
11)	ಮುಕ್ತಚಂದ ಶಾಂತಿನಾಥ ದೇಸಾಯಿ ನೆನಪಿನ ಸಂಪುಟ	ವಿವಿಧ ಲೇಖಕರು	ರೂ. 85-00




*ಪ್ರತಿಗಳು ಮುಗಿದಿವೆ.

ಪ್ರತಿಗಳಿಗಾಗಿ ಸಂಪರ್ಕಿಸಿ

ಸಂಚಯ

ನಂ. 100, 2ನೇ ಮೇನ್, 6ನೇ ಬ್ಲಾಕ್, 3ನೇ ಹಂತ
3ನೇ ಘಟ್ಟ, ಬನಶಂಕರಿ, ಬೆಂಗಳೂರು - 560 085 ದೂರವಾಣಿ : 080-6791925

SANCHAYA

No. MAG(2)PRB-DECL 309/94-95

Printed Periodical
Book-Post

SANCHAYA (Quarterly)
Edited Printed & Published by
D. V. PRAHLAD No. 100, 2nd
Main, 6th Block, 3rd Stage,
3rd Phase, Banashankari,
Bangalore - 560 085 Karnataka
India Ph: 6791925